TEXT LITE
WITHIN THE
BOOK ONLY

# brown book

THE BOOK WAS
DRENCHED

UNIVERSAL LIBRARY
OU_200342
UNIVERSAL LIBRARY

# ಲಲಿತೆ.

[ಪತ್ತೇದಾರಿ ಕಾದಂಬರಿ]

ಲೇಖಕ: —

ಜಿ. ಎಲ್. ಸ್ವಾಮಿ,

ಮಹಿಷೂರು.

ಅಕ್ಟೋಬರ ೧೯೩೧

ಬೆಲೆ ೧೮ ಆಣೆ.

ಪ್ರಕಾಶಕ:

**ಭಿ. ಪ. ಕಾಳೆ,**

ಪ್ರೊಪ್ರಾಯಿಟರ,

ಶ್ರೀ ಶೇಷಾಚಲ ಪ್ರೆಸ್ಸ & ಗ್ರಂಥಮಾಲೆ,

**ಆನಂದವನ.** (ಜಿ. ಧಾರವಾಡ)

[೧ನೆಯ ಆವೃತ್ತಿ.]

೧೯೩೧ ಸಪ್ಟಂಬರ.

ಮುದ್ರಕ:—

**ಭಿ. ಪ. ಕಾಳೆ,**

ಶ್ರೀ ಶೇಷಾಚಲ ಪ್ರೆಸ್ಸ,

ಆನಂದವನ-ಅಗಡಿ

ಜಿ|| ಧಾರವಾಡ.

# ಶ್ರೀ ಶೇಷಾಚಲ ಗ್ರಂಥಮಾಲೆಯ

# ಸಾಮಾಜಿಕ ಕಾದಂಬರಿಗಳು.

| | | | |
|---|---|---|---|
| ೧ | ಸುಮತಿ | | ೬ ಆ. |
| ೨ | ಸೌಭಾಗ್ಯ ತಿಲಕ | | ೧ ರೂ. |
| ೩ | ಸದ್ಗುಣಿ ಕಮಲಾ | [೨ನೇ ಆವೃತ್ತಿ] | ೧ ರೂ. |
| ೪ | ಬಂಧುಪ್ರೇಮ | | ೧೦ ಆ. |
| ೫ | ಸತೀಸಾಹಸ | [೫ನೇ ಆವೃತ್ತಿ] | ೪ ಆ. |
| ೬ | ರಾಜನಂದಿನಿ | | ೧೦ ಆ. |
| ೭ | ಪ್ರೇಮಯಜ್ಞ | | ೮ ಆ. |
| ೮ | ಗೃಹಲೀಲೆ | [೨ನೇ ಆವೃತ್ತಿ] | ೧೨ ಆ. |
| ೯ | ಎರಡನೇ ಹೆಂಡತಿ | | ೮ ಆ. |
| ೧೦ | ಮನೋರಮಾ | [೨ನೇ ಆವೃತ್ತಿ] | ೧೪ ಆ. |
| ೧೧ | ನೀಚ ಇನಾಮುದಾರ | [ ,, ] | ೧೨ ಆ. |
| ೧೨ | ಜಯ ಪರಾಜಯ! | | ೧೨ ಆ. |
| ೧೩ | ವಿಲಕ್ಷಣ ಪತಿಸೇವೆ | [೨ನೇ ಆವೃತ್ತಿ] | ೪ ಆ. |
| ೧೪ | ವಿಷಕುಂಭ | [ ,, ] | ೪ ಆ. |
| ೧೫ | ಭಾಮಿನಿ | | ೮ ಆ. |
| ೧೬ | ರಾಕಾಚಂದ್ರ | | ೮ ಆ. |
| ೧೭ | ಸದ್ಗುಣಿ ವಿಮಲೆ | | ೪ ಆ. |
| ೧೮ | ಸರಳೆ | | ೨ ಆ. |
| ೧೯ | ಚಂದ್ರಕಾಂತ | (ಅಚ್ಚಿನಲ್ಲಿದೆ) | ೧೨ ಆ. |

**ವಿಳಾಸ:— ಭಿ. ಪ. ಕಾಳೆ,**
ಪ್ರೊ, ಶ್ರೀ. ಶೇ. ಗ್ರಂಥಮಾಲೆ, ಆನಂದವನ.
(ಜಿ. ಧಾರವಾಡ)

# ಮುನ್ನುಡಿ.

"ಹೆಣ್ಣು ಮಗಳಿಗೆ ವರನನ್ನು ಆರಿಸುವ ಸಮಯದಲ್ಲಿ ನಮ್ಮ ಪೂರ್ವಿಕರು ಹೇಳಿರುವ 'ಮಾತಾವಿತ್ತಂ ಪಿತಾಶ್ರುತಂ' ಎಂಬ ಉಕ್ತಿಗೆ ವಿರುದ್ಧವಾಗಿ, ತಂದೆಯು ಶ್ರೀಮಂತನಾದ ವರನನ್ನೂ, ತಾಯಿಯು ವಿದ್ಯಾವಂತನಾದ ವರನನ್ನೂ ಹುಡುಕಿ ಮಗಳ ಶ್ರೇಯೋಭಿವೃದ್ಧಿಗೆ ಅನುಕೂಲವನ್ನು ಮಾಡಬೇಕೆಂಬ ಭಿನ್ನಾಭಿಪ್ರಾಯಗಳನ್ನು ಹೊಂದಿ, ಕೊನೆಗೆ ಒಮ್ಮನಸ್ಸಿನಿಂದ ಶ್ರೀಮಂತನಿಗಿಂತಲೂ ವಿದ್ಯಾವಂತನೇ ಹುಡಿಗಿಯ ಪಾಣಿಗ್ರಹಣಕ್ಕೆ ಅರ್ಹನೆಂದು ನಿಶ್ಚಯಿಸುವರು. ಇದರ ಮರ್ಮವನ್ನು ತಿಳಿದ ಶ್ರೀಮಂತನೂ, ದುರ್ಮಾರ್ಗಿಯೂ ಆದ ಓರ್ವ ಯುವಕನು ಕಥಾನಾಯಕಿಯಾದ ಲಲಿತೆಯ ವ್ಯಾಮೋಹಕ್ಕೆ ಒಳಗಾಗಿ, ಅನೇಕ ಹೀನ ಕಾರ್ಯಗಳನ್ನು ಮಾಡಿ, ಕೊನೆಗೆ ತನ್ನ ತಪ್ಪನ್ನು ತಾನೇ ತಿಳಿದು, ಆತ್ಮಹತ್ಯೆಯನ್ನು ಮಾಡಿಕೊಳ್ಳುವನು" ಎಂಬ ಈ ಅಂಶವನ್ನು ಈ ಕಾದಂಬರಿಯಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಪಾಠಕ ವರ್ಗದ ಮುಂದಿಡಲು ತೊಡಗಿರುತ್ತೇನೆ.

ಈ ನನ್ನ ಶ್ರಮವನ್ನು ಸಾರ್ಥಕಗೊಳಿಸಲು ತಮ್ಮ ಉದಾರವಾದ ಮನಸ್ಸಿನಿಂದ ತಮ್ಮ ಗ್ರಂಥಮಾಲೆಯಲ್ಲಿ ಅಚ್ಚು ಹಾಕಲು ಒಪ್ಪಿ ಮೊದಲನೆಯ ಮುದ್ರಣದ ಸರ್ವ ಸ್ವಾತಂತ್ರ್ಯವನ್ನೂ ವಹಿಸಿಕೊಂಡಿರುವ ಮ|| ರಾ|| ರಾ|| ಬಿ. ಪಿ. ಕಾಳೆ, ಯವರಿಗೆ ನನ್ನ ಅನಂತಾನಂತ ವಂದನೆಗಳನ್ನು ಅರ್ಪಿಸಿರುತ್ತೇನೆ.

ಅರಸೀಕೆರೆ
ತಾ|| ೨೧-೯-೩೧

ಗ್ರಂಥಕರ್ತ.

Checked 1965

# ಲಲಿತೆ.

## ಅಧ್ಯಾಯ ೧

ಬೆಳಿಗ್ಗೆ ಸುಮಾರು ಒಂಭತ್ತು ಗಂಟೆಯ ಸಮಯದಲ್ಲಿ ಹದಿನೈದು ವರುಷ ವಯಸ್ಸಿನ ಓರ್ವ ತರುಣೀಮಣಿಯು ಮನೆಯ ಹಿಂಭಾಗದಲ್ಲಿರುವ ಹೂದೋಟದ ಕಲ್ಲು ಬೆಂಚಿನ ಮೇಲೆ ಕುಳಿತುಕೊಂಡು, ಒಂದು ಕಾದಂಬರಿಯನ್ನು ಓದುತ್ತಿದ್ದಳು ಕಾದಂಬರಿಯನ್ನು ಓದುವಾಗ ಅವಳ ಮುಖ ಲಕ್ಷಣವು ಕ್ಷಣಕ್ಷಣಕ್ಕೂ ಬದಲಾಯಿಸುತ್ತಿತ್ತು. ಕೆಲವು ವೇಳೆ ಹಸನ್ಮುಖಿಯಾಗುತ್ತಲೂ ಮತ್ತೆ ಕೆಲವು ವೇಳೆ ಯೋಚನಾಪರವಶಳಾಗುತ್ತಲೂ ಇದ್ದಳು. ಇವುಗಳಿಗೆಲ್ಲಾ ಕಾರಣವು ಆ ಕಾದಂಬರಿಯಲ್ಲಿಯೇ ಇದ್ದಿತು.

ಆ ಕಾದಂಬರಿಯಲ್ಲಿ ಓರ್ವ ಯುವಕನಿಗೂ, ಯುವತಿಗೂ ಆದ ಸಂಭಾಷಣೆಯನ್ನು ನಮ್ಮ ತರುಣೀಮಣಿಯು ಓದುತ್ತಲಿದ್ದಳು. ಕಾದಂಬರಿಯ ನಾಯಕ-ನಾಯಕಿಯರು ಅವಿವಾಹಿತರು. ಬಾಲ್ಯವಯಸ್ಸಿನಿಂದಲೂ, ಒಂದೇ ಕಡೆ ಇದ್ದುಕೊಂಡು ಆಟ-ಪಾಟವಾಡುತ್ತಲೂ, ಓದುತ್ತಲೂ ಕಾಲವನ್ನು ಕಳೆದಿದ್ದರು. ಆಗಿನಿಂದಲೇ ಅವರ ಪ್ರೀತಿಯು ಉಜ್ವಲಿಸುತ್ತಿತ್ತು. ಹುಡುಗಿಗೆ ಪ್ರೌಢ ವಯಸ್ಸಾದೊಡನೆಯೇ ಆಕೆಯ ತಂದೆಯು ಮುಂದಕ್ಕೆ ಆ ಯುವಕನೊಡನೆ ಯಾವ ರೀತಿಯಾದ ಸಂಭಾಷಣೆಯನ್ನೂ ಮಾಡಕೂಡದೆಂದು ಅಪ್ಪಣೆ ಮಾಡಿದನು. ಅದೇ ರೀತಿಯಾಗಿ ಅವಳು ಇದ್ದರೂ ಅಂತರಂಗದಲ್ಲಿ ಮಾತ್ರ ಅವನನ್ನು ಪ್ರೀತಿಸುವುದು ಬಿಡಲೇ ಇಲ್ಲ. ಹೀಗಿರುವಲ್ಲಿ ಒಂದು ದಿನ ವನವಿಹಾರಕ್ಕಾಗಿ ಆ ಯುವತಿಯು ಹೋಗಿ, ಒಂದು ತೋಟದಲ್ಲಿ ಕುಳಿತಿದ್ದಳು. ಅಕಸ್ಮಾತ್ತಾಗಿ ಅವಳ

ಪ್ರೀತಿ ಪಾತ್ರನು ಅಲ್ಲಿಗೆ ಬಂದನು. ದೈವಾನುಕೂಲದಿಂದ ತನ್ನ ಪ್ರೀತಿ ಪಾತ್ರನನ್ನು ನೋಡಿದ್ದಕ್ಕಾಗಿ ಆಕೆಯು ಪರಮಾನಂದವನ್ನು ಹೊಂದಿ, ಆತನೊಡನೆ ಪ್ರೀತ್ಯಾಸ್ಪದವಾದ ಮಾತುಗಳನ್ನಾಡುತ್ತಾ ಕುಳಿತಿದ್ದಳು.

ಈ ಸಂಭಾಷಣೆಯನ್ನು ಓದುತ್ತಿರುವಾಗಲೇ ನಮ್ಮ ಹದಿನೈದು ವರುಷದ ತರುಣೀಮಣಿಗೆ ಮನಸ್ಸು ವಿಕಲ್ಪವಾದುದು. ಅವಳ ಕಣ್ಣುಗಳಲ್ಲಿ ನೀರು ಬರಲು, ಕೂಡಲೆ ತನ್ನ ಸೆರಗಿನಿಂದ ಒರಸಿ, ಪುಸ್ತಕವನ್ನು ತನ್ನ ಮಗ್ಗುಲಲ್ಲಿರಿಸಿಕೊಂಡು, ಸುಮ್ಮನೆ ಕುಳಿತಳು. ಪುಸ್ತಕವನ್ನು ಕೆಳಗಿಟ್ಟೊಡನೆಯೇ "ಲಲಿತಾ" ಎಂದು ಕೂಗುತ್ತಾ ಓರ್ವ ಯುವಕನು ಬಂದನು. ಕೂಡಲೆ ಲಲಿತೆಯು ಹಿಂತಿರುಗಿ ನೋಡಿದಳು. ಯುವಕನು ಅವಳ ಹತ್ತಿರ ಬಂದು ಕುಳಿತನು. ಸ್ವಲ್ಪ ಹೊತ್ತು ಲಲಿತೆಯನ್ನು ನೋಡುತ್ತಿದ್ದು, ಅನಂತರ ಅವಳನ್ನು ಕುರಿತು:–"ಲಲಿತಾ, ಇದೇನು? ಬಹಳ ಯೋಚನೆಯಲ್ಲಿರುವ ಹಾಗೆ ಕಾಣುತ್ತೆ?" ಎಂದು ಕೇಳಿದನು.

ಲಲಿತೆ:—ಏನೂ ಇಲ್ಲ, ಭಾಸ್ಕರ.

ಭಾಸ್ಕರ:–ಏನೂ ಇಲ್ಲವೆನ್ನುತ್ತೀಯೆ; ಆದರೆ ನಿನ್ನ ಮುಖವು ಏನೋ ಇದೆ ಎಂದು ಸೂಚಿಸುತ್ತದೆ. ನನಗೆ ನಿಜವನ್ನು ಹೇಳಬಾರದೋ?

ಲಲಿತೆ:—ಏನೂ ಇಲ್ಲ. ಈ ಕಾದಂಬರಿಯನ್ನು ಓದುತ್ತಲಿದ್ದೆ. ಹಾಗೆಯೇ ಏನೋ ಬೇಸರವುಂಟಾಯಿತು.

ಭಾಸ್ಕರ:–"ಲಲಿತಾ, ಕಾದಂಬರಿಯನ್ನೋದುವಾಗ ಸಾಮಾನ್ಯವಾಗಿ ಎಲ್ಲರೂ ಸಂತೋಷವನ್ನು ತಾಳಿ, ಅದನ್ನು ಪೂರ್ತಿಯಾಗಿ ಓದುವ ವರೆಗೂ ಕೆಳಗೂ ಸಹ ಇಡುವದಿಲ್ಲ. ನಿನಗಾದರೋ ಬೇಸರಿಕೆಯುಂಟಾಗಲು ಕಾರಣವೇನು? ಎಲ್ಲಿ ಆ ಕಾದಂಬರಿಯನ್ನು ನೋಡೋಣ" ಎಂದು ಹೇಳುತ್ತಾ ಭಾಸ್ಕರನು ಕಾದಂಬರಿಯನ್ನು ತೆಗೆದುಕೊಂಡು ಹಾಳೆಗಳನ್ನು ಮಗುಚಿ ಹಾಕಿದನು. ಲಲಿತೆಯು ಎಲ್ಲಿ ಓದಿ ಮುಗಿಸಿದ್ದಳೋ, ಅಲ್ಲಿ ಗುರ್ತಿಗಾಗಿ ಪುಟದ ಮೇಲು ಭಾಗವನ್ನು ಸ್ವಲ್ಪ ಮಡಿಚಿದ್ದಳು. ಇದು ಭಾಸ್ಕರನ ಕಣ್ಣಿಗೆ ಬಿತ್ತು. ಕೂಡಲೆ ಅವನು ಆ ಪುಟವನ್ನು ಓದಲಾರಂಭಿಸಿದನು. ಆಗ ಲಲಿತೆಯ ಮನಸ್ಸು ವಿಕಲ್ಪವಾಗುವುದಕ್ಕೆ ಕಾರಣವನ್ನು ಅರಿತನು.

ಆದರೂ ಲಲಿತೆಯನ್ನು ಕುರಿತು: ಲಲಿತಾ, ನಿನ್ನ ಮನಸ್ಸನ್ನು ವಿಕಲ್ಪ ಮಾಡಿ ನಿನಗೆ ಈ ರೀತಿಯಾದ ಬೇಸರಿಕೆಯನ್ನುಂಟು ಮಾಡಿದಂಥ ಭಾಗ ವಾವುದು ಇದರಲ್ಲಿದೆ? ನನಗಾದರೊ ಇದನ್ನು ನೋಡಿದಾಗಿನಿಂದ ಪೂರ್ತಿಯಾಗಿ ಈಗಲೇ ಓದಬೇಕೆಂಬ ಕುತೂಹಲವುಂಟಾಗಿದೆ.

ಲಲಿತೆ: ಭಾಸ್ಕರ, ಸುಮ್ಮನೆ ನನ್ನನ್ನು ಪ್ರಶ್ನೆ ಮಾಡಬೇಡ. ಹೊರಟು ಹೋಗು. ಬೇಕಾದರೆ ಆ ಕಾದಂಬರಿಯನ್ನೂ ತೆಗೆದುಕೊಂಡು ಹೋಗು.

ಭಾಸ್ಕರ: ಅದು ಆಗಬಹುದು. ಕಾರಣವನ್ನು ಅರಿತ ಹೊರತು ನಾನು ಇಲ್ಲಿಂದ ಕದಲುವುದೇ ಇಲ್ಲ.

ಲಲಿತೆ: ಅದರಲ್ಲಿ ಆ ಯುವಕ-ಯುವತಿಯರ ಸಂಭಾಷಣೆಯನ್ನು ಓದಿದೆಯಾ?

ಭಾಸ್ಕರ: ''ಓದಿದೆನು. ಅದು ನಿನ್ನ ಮನಸ್ಸನ್ನು ಈ ರೀತಿ ಮಾಡಿದ್ದುದು ಸಹಜ. ನಿನ್ನ ಹಾಗೆಯೆ ಆ ಯುವತಿಯೂ ಅವಿವಾಹಿತಳು. ಪ್ರಿಯನಾಗುವವನ ಹತ್ತಿರ ಮುಂದೆ ಯಾವ ರೀತಿ ಸ್ಥಿರವಾದ ಪ್ರೀತಿಯನ್ನು ಸಂಪಾದಿಸಬೇಕೋ, ಹಾಗೆ ಸಮಂಜಸವಾಗಿ ಮಾತನಾಡುತ್ತಲಿದ್ದಳು. ಆ ಯುವತಿಗೂ, ನಿನಗೂ ಒಂದೇ ವಯಸ್ಸಲ್ಲವೆ? ' ಎನ್ನುವಷ್ಟರಲ್ಲಿಯೇ,

ಲಲಿತೆಯು: 'ಸಾಕು, ನಿನ್ನ ಹೋಲಿಕೆ! ನಿನಗೆ ಮತ್ತೇನೂ ಕೆಲಸವೇ ಇಲ್ಲ. ಸದಾ ಕಾಲದಲ್ಲಿ ಈ ರೀತಿಯಾದ ಹಾಸ್ಯವೇ!'

ಭಾಸ್ಕರ:—ಲಲಿತಾ, ಈ ವಿಚಾರವು ಹಾಗಿರಲಿ. ನಿಮ್ಮ ತಂದೆಯು ನಿನ್ನ ಪುರೋಭಿವೃದ್ಧಿಯ ವಿಚಾರವಾಗಿ ಯಾತಕ್ಕೆ ಇನ್ನೂ ಯೋಚಿಸಲಿಲ್ಲ.

ಲಲಿತೆ: ಯಾವ ವಿಚಾರ?

ಭಾಸ್ಕರ: ನಿನ್ನ ಪುರೋಭಿವೃದ್ಧಿ ವಿಚಾರ.

ಲಲಿತೆ: ಹಾಗೆಂದರೇನು?

ಭಾಸ್ಕರ: ಅಷ್ಟು ಗೊತ್ತಾಗಲಿಲ್ಲವೆ? ನಿನ್ನ ಮದುವೆ ವಿಚಾರ. ಲಲಿತೆಯು ಉತ್ತರವೀಯದೆ ಸುಮ್ಮನಿದ್ದಳು.

ಭಾಸ್ಕರನು ಪುನಃ: "ಲಲಿತಾ, ಇದೇನು ಮಾತನಾಡಲೊಲ್ಲೆ" ಎಂದನು.

ಲಲಿತೆ: ಈ ವಿಚಾರವಾಗಿ ನನಗೇನೂ ಗೊತ್ತಿಲ್ಲ. ನನ್ನ ವಿಚಾರವು ಹಾಗಿರಲಿ. ನಿನ್ನ ಮದುವೆಯು ವಿಚಾರವಾಗಿ ನಿಮ್ಮ ಮನೆಯಲ್ಲಿ ಯಾತಕ್ಕಾಗಿ ಯೋಚನೆ ಮಾಡಿಲ್ಲ? ಸಾಧಾರಣವಾಗಿ ಮಕ್ಕಳು ಓದುವಾಗಲೇ ಅವರ ತಂದೆ-ತಾಯಿಗಳು ಅವರಿಗೆ ಮದುವೆಯನ್ನು ಮಾಡುತ್ತಾರೆ; ಆದರೆ ನಿನ್ನ ಓದು ಮುಗಿದು ವಿದ್ಯಾವಂತನಾಗಿ ಈಗಾಗಲೇ ಒಂದು ವರ್ಷವಾಯಿತು. ಆದರೂ ನಿನ್ನ ಮದುವೆಯ ಪ್ರಸ್ತಾಪವೇ ಇಲ್ಲವಲ್ಲ?

ಭಾಸ್ಕರ: - ನನಗೆ ಸರಿಯಾದ ಕನ್ಯೆಯು ಸಿಕ್ಕುವವರೆಗೂ, ನಾನು ಮದುವೆ ಮಾಡಿಕೊಳ್ಳುವುದಿಲ್ಲ.

ಲಲಿತೆ:—ಚೆನ್ನಾಯಿತು. ಎಷ್ಟು ವರ್ಷ ತಾನೆ ಈ ರೀತಿಯಾಗಿ ಸರಿಯಾದ ಹುಡುಗಿ ಸಿಕ್ಕಲಿ ಎಂದು ಕುಳಿತಿರುವೆ? ಈಗ ಯಾವುದಾದರೂ ಕನ್ಯೆಯು ಬಂದಿದೆಯೆ?

ಭಾಸ್ಕರ: —ನಾನು ಬಹಳವಾಗಿ ಯೋಚಿಸಿ ಒಬ್ಬ ಹುಡುಗಿಯನ್ನು ಒಪ್ಪಿಕೊಂಡಿರುವೆನು; ಆದರೆ ಆ ಹುಡುಗಿಯ ಒಪ್ಪಿಗೆಯನ್ನು ಕೇಳಬೇಕಾಗಿದೆ.

ಲಲಿತೆ:—ಈ ವಿಚಾರವು ನಿಮ್ಮ ತಂದೆ-ತಾಯಿಗಳಿಗೆ ಗೊತ್ತಿದೆಯೋ ಇಲ್ಲವೋ?

ಭಾಸ್ಕರ: —ಅವರಿಗೆ ನಾನು ಇನ್ನೂ ತಿಳಿಸಿಲ್ಲ.

ಲಲಿತೆ: ಯಾಕೆ? ನಿನ್ನ ಅಭಿಪ್ರಾಯವನ್ನು ತಿಳಿಸಿದರೆ ಅವರು ವಿಚಾರಿಸಿ, ತಮಗೂ ಸಮ್ಮತವಾದರೆ ಶೀಘ್ರದಲ್ಲಿಯೇ ವಿವಾಹವನ್ನು ಮಾಡುವರು. ಆದ್ದರಿಂದ ಆ ಹುಡುಗಿ ಯಾರೆಂಬುದನ್ನು ತಿಳಿಸು. ವಿಚಾರಿಸಿ ನೋಡೋಣ.

ಭಾಸ್ಕರ:—ನೀನೇನೂ ವಿಚಾರಿಸಬೇಕಾಗಿಲ್ಲ. ನಿನ್ನ ಒಪ್ಪಿಗೆಯನ್ನು ಕೊಟ್ಟರೆ, ನೀನೇ ಆ ಹುಡುಗಿ....

ಲಲಿತೆಗೆ ಈ ಮಾತುಗಳನ್ನು ಕೇಳಿದೊಡನೆಯೇ ಮನಸ್ಸು ಅಲ್ಲೋಲ ಕಲ್ಲೋಲವಾಗಿ ಹೋಯಿತು. ಮುಖವೆಲ್ಲ ಬೆವರಿ ಕೆಂಪೇರಿತು. ಅವಳಿಗೆ ಮುಂದೆ ಮಾತನಾಡುವದಕ್ಕೇ ತೋಚಲಿಲ್ಲ; ಆದರೂ ಅಲ್ಲಿಂದ ಎದ್ದು ಹೊರಡುವದರಲ್ಲಿದ್ದಳು. ಭಾಸ್ಕರನು ಅವಳ ಕೈಹಿಡಿದುಕೊಂಡು: "ಲಲಿತೆ, ನೀನು ಏಕೆ ಮಾತನಾಡಲೊಲ್ಲೆ. ನಾನು ಹೊರಗಿನವನಾದರೆ ಮಾತನಾಡುವದಕ್ಕೆ ಸಂಕೋಚಪಡಬೇಕು. ನಾನು ನಿನ್ನ ಹತ್ತಿರ ಬಂಧುವಲ್ಲವೇ?" ಎಂದನು.

ಆದರೂ ಲಲಿತೆಯು ಮಾತನಾಡಲೇ ಇಲ್ಲ. ಮುಖಭಾವವು ಮಾತ್ರ ಸ್ವಲ್ಪ ಬದಲಾಯಿಸಿತು. ಇದನ್ನು ಭಾಸ್ಕರನು ನೋಡಿ: "ಲಲಿತಾ, ನಿನ್ನ ಮುಖವು ಒಪ್ಪಿಗೆಯನ್ನು ಕೊಟ್ಟ ಹಾಗೆ ಕಾಣುತ್ತಿದೆ; ಆದರೆ ನಿನ್ನ ಬಾಯಿಂದ ಅದು ಒಂದು ಸಲ ಹೊರಬೀಳಲಿ" ಎನ್ನುವಷ್ಟರಲ್ಲಿ "ಲಲಿತಾ, ಲಲಿತಾ" ಎಂದು ಯಾರೋ ಕೂಗಿದ ಹಾಗೆ ಕೇಳಿಸಿತು. ಕೂಡಲೆ ಭಾಸ್ಕರನು ಲಲಿತೆಯ ಕೈ ಬಿಟ್ಟನು. ಲಲಿತೆಯು ಕಾದಂಬರಿಯನ್ನು ತೆಗೆದುಕೊಂಡು ಅಲ್ಲಿಂದ ಹೊರಟು ಹೋದಳು. ಭಾಸ್ಕರನಾದರೋ ಬಹಳ ಹೊತ್ತು ಅಲ್ಲಿಯೇ ಏನೋ ಯೋಚಿಸುತ್ತ ಕುಳಿತಿದ್ದು, ತರುವಾಯ ತಾನೂ ಎದ್ದು ಹೊರಟನು.

## ಅಧ್ಯಾಯ ೨

ಲಲಿತೆಯು ಅಲ್ಲಿಂದ ಹೊರಟು ತಮ್ಮ ಮನೆಯನ್ನು ಹೊಕ್ಕಳು. ಬಾಗಿಲ ಹತ್ತಿರಲೇ ನಿಂತಿದ್ದ ಅವಳ ತಾಯಿ ವಿಮಲೆಯು: "ಲಲಿತಾ, ಇದೇನು? ತೋಟದಲ್ಲಿ ಏನು ಮಾಡುತ್ತಲಿದ್ದೆ?" ಎಂದು ಕೇಳಿದಳು.

ಲಲಿತೆ:--ಅಮ್ಮಾ, ಯಾವದೋ ಕಾದಂಬರಿಯನ್ನು ಓದುತ್ತಲಿದ್ದೆ.

ವಿಮಲೆ:—ಇದೇನು? ಮುಖವೆಲ್ಲಾ ಬೆವರಿ ಕೆಂಪಾಗಿದೆ. ಅತ್ತ ಹಾಗೆ ಕಾಣುತ್ತದೆ.

ಲಲಿತೆ:—(ಬಹಳ ಅಸಡ್ಡೆಯಿಂದ) ಏನೂ ಇಲ್ಲ.

ವಿಮಲೆ:— ಏನೂ ಇಲ್ಲವೆಂದರೆ ಆಗುತ್ತದೆಯೆ? ಸುಮ್ಮನೆ ಕುಳಿತಿದ್ದರೆ, ಮುಖವೆಲ್ಲಾ ಬೆವರಿ ಕೆಂಪೇರುವದೇ? ನನಗೇಕೆ ಹಾಗೆ ಆಗಬಾರದು. ನನಗೆ ಆ ವಿಚಾರವನ್ನೆಲ್ಲಾ ತಿಳಿಸಬಾರದೋ? ನನ್ನಲ್ಲಿಯೂ ನಿನಗೆ ಮುಚ್ಚುಮರೆಯೋ?

ಲಲಿತೆ:—ಅಮ್ಮಾ, ಯಾವ ವಿಚಾರ?

ವಿಮಲೆ:— ಯಾವ ವಿಚಾರವೂ ಅಲ್ಲ, ನೀನು ಅತ್ತುದ್ದಕ್ಕೆ ಕಾರಣ? ನಿನ್ನ ಕೈಯಲ್ಲಿರುವ ಪುಸ್ತಕವಾವುದು?

ಲಲಿತೆ:—ಆ ಪುಸ್ತಕವು ಒಂದು ಕಾದಂಬರಿ.

ವಿಮಲೆ:—ಅದನ್ನೇ ಓದುತ್ತಾ ಕುಳಿತಿದ್ದೆಯಾ?

ಲಲಿತೆ:— ಸ್ವಲ್ಪ ಓದಿದೆ, ಬೇಸವುಂಟಾಯಿತು. ನಾನು ಹೊರಟೆ. ಅಷ್ಟರಲ್ಲಿಯೇ ನೀನು ಕೂಗಿದೆ.

ವಿಮಲೆ:— ಕಾದಂಬರಿಯನ್ನು ಓದುವಾಗ ನಿನಗೆ ಬೇಸರವುಂಟಾದುದಕ್ಕೂ, ನಿನ್ನ ಮುಖವು ಈ ರೀತಿಯಾಗಿ ಇರುವದಕ್ಕೂ ಕಾರಣವೇನು?

ಲಲಿತೆ:—ಅಮ್ಮಾ, ನಿನಗೆ ಗೊತ್ತಿಲ್ಲವೇ? ಕಾದಂಬರಿಯನ್ನು ಓದುವಾಗ, ಅನೇಕ ಸಲ ಅದರಲ್ಲಿ ದುಃಖದ ವಿಚಾರ ಬಂದರೆ, ದುಃಖ ಬರುವದು, ಸಂತೋಷದ ವಿಚಾರ ಬಂದರೆ ಸಂತೋಷವಾಗುವದು; ಹಾಸ್ಯದ ವಿಚಾರ ಬಂದರೆ ನಗು ಬರುವದು. ಇವೆಲ್ಲಾ ಸಹಜವಲ್ಲವೇ?

ವಿಮಲೆ: —"ಕಾದಂಬರಿ ನಿನಗೀ ರೀತಿ ಮಾಡಿತೋ? ನಾನು ನಂಬಲಾರೆ. ಇನ್ನೇನೋ ಹೆಚ್ಚಿಗೆ ವಿಷಯ ನಡೆದಿರಬೇಕು. ಬಾ, ಒಳಕ್ಕೆ ಹೋಗೋಣ. ಅಲ್ಲಿಯಾದರೂ ಆರಾಮದಿಂದ ಕುಳಿತು, ನನಗೆ ಸರಿಯಾದ ಕಾರಣವನ್ನು ತಿಳಿಸು" ಎಂದು ಹೇಳುತ್ತಾ ಲಲಿತೆಯನ್ನು ಕರೆದುಕೊಂಡು, ವಿಮಲೆಯು ಮನೆಯೊಳಕ್ಕೆ ಹೋಗಿ ಕುಳಿತುಕೊಂಡೊಡನೆಯೇ ಪುನಃ ಮಗಳನ್ನು ಕುರಿತು: "ಲಲಿತಾ ಈಗಲಾದರೂ ಸರಿಯಾದ ಕಾರಣವನ್ನು ತಿಳಿಸುವೆಯಾ?" ಎಂದಳು.

ಲಲಿತೆ:—ಅಮ್ಮಾ, ಯಾವ ಕಾರಣ? ಆಗಲೇ ಹೇಳಿಬಿಟ್ಟಿರುವೆನಲ್ಲ?

ವಿಮಲೆ:—ನೀನು ಹೇಳಿರುವುದು ಅಸಂಬದ್ಧ ಕಾರಣಗಳು. ನಿಜ

ವಾದ ಕಾರಣವನ್ನು ತಿಳಿಸಿಲ್ಲ. ನನಗೆ ಅಲ್ಲಿ ನಡೆದ ವಿಷಯಗಳೆಲ್ಲಾ ಗೊತ್ತಿವೆ. ನೀನು ಯಾರೊಡನೆ ಮಾತನಾಡುತ್ತ ಕುಳಿತಿದ್ದೆ?

ಈ ಮಾತನ್ನು ಕೇಳಿ ಲಲಿತೆಯು ಮುಖವು ಪುನಃ ಬೆವರಿತು. ತನ್ನ ತಾಯಿಯು ತೋಟದಲ್ಲಿ ನಡೆದ ವಿಚಾರವನ್ನೆಲ್ಲಾ ಎಲ್ಲಿಂದಲೋ ಅರಿತಿರಬೇಕೆಂದೂಹಿಸಿ, ಇನ್ನು ನಡೆದ ಸಂಗತಿಯನ್ನೆಲ್ಲಾ ತಿಳಿಸುವದೇ ಲೇಸೆಂದು ತಾಯಿಯನ್ನು ಕುರಿತು: "ಅಮ್ಮಾ, ನಾನು ಅಲ್ಲಿ ಭಾಸ್ಕರನೊಡನೆ ಮಾತನಾಡುತ್ತ ಕುಳಿತಿದ್ದೆನು.

ವಿಮಲೆ: - ಯಾವ ವಿಚಾರವಾಗಿ?

ಲಲಿತೆ: — ಈ ಕಾದಂಬರಿಯು ವಿಚಾರವಾಗಿ.

ವಿಮಲೆ: - ಅಷ್ಟೆಯೇ. ಇನ್ಯಾವ ವಿಚಾರವಾಗಿಯೂ ಇಲ್ಲವೆ?

ಲಲಿತೆ: — ಹಾಗೇ ನನ್ನ ಮದುವೆ ವಿಚಾರವಾಗಿ ಕೇಳಿದ. ನನಗೆ ಗೊತ್ತಿಲ್ಲವೆಂದು ಹೇಳಿದೆ ಅವನ ಮದುವೆ ವಿಚಾರವಾಗಿ ನಾನು ಕೇಳಿದೆ. ಅದಕ್ಕೆ ಅವನು ಸರಿಯಾದ ಕನ್ಯೆಯು ಸಿಕ್ಕುವ ವರೆಗೂ ಮದುವೆ ಮಾಡಿಕೊಳ್ಳುವುದಿಲ್ಲವೆಂದನು. ಅಷ್ಟೆ, ಇನ್ನೇನು ಹೆಚ್ಚಿಗೆ ನಡೆಯಲಿಲ್ಲ.

ವಿಮಲೆ. ಮುಂದಕ್ಕೆ ಇನ್ನೇನೂ ನಡೆಯಲಿಲ್ಲವೇ? ನಿನ್ನನ್ನೇ ಮದುವೆಯಾಗುವೆನೆಂದು ಅವನು ಹೇಳಲಿಲ್ಲವೆ?

ಲಲಿತೆಯು ಉತ್ತರವನ್ನು ಕೊಡದೆ ಸುಮ್ಮನೆ ಅಧೋವದನಳಾದಳು.

ವಿಮಲೆ: "ಲಲಿತಾ, ಈಗ ನಿನ್ನ ಮದುವೆಯು ವಿಚಾರವಾಗಿ ನಾವು ಯೋಚಿಸಬೇಕಾಗಿದೆ. ಈಗಾಗಲೆ ನಿನಗೆ ಮದುವೆಯು ಆಗಿ ಹೋಗಬೇಕಾಗಿತ್ತು. ಅಸಾನುಕೂಲಗಳಿಂದ ಆಗಲಿಲ್ಲ. ಈಗ ನಮ್ಮ ಸಂಬಂಧಿಗಳಲ್ಲೇ ಇಬ್ಬರು ವರರಿರುವರು. ಅವರಲ್ಲಿ ನೀನು ಯಾರನ್ನು ಮದುವೆ ಮಾಡಿಕೊಳ್ಳುತ್ತಿಯೋ ಎಂಬುದನ್ನು ತಿಳಿಸಿದರೆ, ಮುಂದಿನ ಕಾರ್ಯಗಳನ್ನೆಲ್ಲಾ ಬೇಗ ಮಾಡುವೆವು.

ಲಲಿತೆ: — ಅಮ್ಮಾ, ಈ ವಿಚಾರದಲ್ಲಿ ನನ್ನನ್ನು ಏನೂ ಕೇಳಬೇಕಾಗಿಲ್ಲ. ನಿಮ್ಮ ಇಷ್ಟಾನುಸಾರವಾಗಿಯೇ ಮಾಡಬಹುದು.

ವಿಮಲೆ: ಲಲಿತಾ, ಈ ರೀತಿಯಾದ ಉತ್ತರವನ್ನು ಕೊಟ್ಟರೆ,

ಸರಿ ಹೋಗುವುದಿಲ್ಲ. ನಮ್ಮ ಕಾಲದಲ್ಲಿ ಈ ರೀತಿಯಾಗಿ ನಡೆದರೆ ಸರಿ ಹೋಗುತ್ತಿತ್ತು; ಆದರೆ ಈಗ ಸರಿಹೋಗುವುದಿಲ್ಲ. ನಮ್ಮ ಕಾಲದಲ್ಲಿ ಯಾದರೂ ಕನ್ಯೆಯನ್ನು ವರನು ನೋಡುತ್ತಿರಲಿಲ್ಲ; ವರನನ್ನು ಕನ್ಯೆಯು ನೋಡುತ್ತಿರಲಿಲ್ಲ. ಅವರ ತಂದೆ-ತಾಯಿಗಳೇ ಮಾತನಾಡಿಕೊಂಡು ಸಂಬಂಧವನ್ನು ಬೆಳೆಸುತ್ತಿದ್ದರು. ಈಗಲಾದರೂ ಒಬ್ಬರನ್ನೊಬ್ಬರು ನೋಡಿ ಒಪ್ಪಿದ ಹೊರತು, ಸಂಬಂಧವನ್ನು ಬೆಳೆಸಲಾಗುವುದಿಲ್ಲ. ಈ ರೀತಿಯಾಗಿ ಇವರ ಒಪ್ಪಿಗೆಯನ್ನು ತೆಗೆದುಕೊಳ್ಳದೆಯೇ ಮದುವೆಯನ್ನು ಮಾಡಿದರೆ, ಅವರ ಸಂಸಾರವು ಯಾವ ತೊಂದರೆಯೂ ಇಲ್ಲದೆ ನಡೆಯುವುದು ಕಷ್ಟ. ಯಾತಕ್ಕೆಂದರೆ, ನೀನು ಕಂಡ ಹಾಗೆ ಎಲ್ಲರೂ ಬೇರೆ ಬೇರೆ ಸಮಾಜ ಇತ್ಯಾದಿಗಳಲ್ಲಿ ಇದ್ದುಕೊಂಡು, ಜನರ ನಡೆ-ನುಡಿಗಳನ್ನೆಲ್ಲ ನೋಡಿ, ಅವುಗಳಲ್ಲಿಯ ಒಳ್ಳೆಯವುಗಳನ್ನು ಆರಿಸಿ ಕಲಿತುಕೊಳ್ಳುವರು. ತಮಗೆ ಸೇರಬೇಕಾದ ವಸ್ತುವೂ ಆ ಗುಣಗಳಿಂದ ತುಂಬಿರಬೇಕೆಂದು ಅಪೇಕ್ಷಿಸುವರು ಇವರು ಹೀಗಿರುವಲ್ಲಿ ಇವರ ತಂದೆ-ತಾಯಿಗಳು ಪೂರ್ವಾಚಾರ ಪದ್ಧತಿ ಪ್ರಕಾರವೇ ಇವರ ಒಪ್ಪಿಗೆಯಿಲ್ಲದೆ ಸಂಬಂಧ ವನ್ನು ಬೆಳೆಸುವರು. ಆಗ ತಮಗೆ ಸೇರಿದ ವಸ್ತುವು ತಮ್ಮ ಇಷ್ಟಾನು ಸಾರವಾಗಿಲ್ಲದೆ ಹೋದರೆ, ಆಗ ಅವರುಗಳಲ್ಲಿ ಪ್ರೀತಿಯು ಸಂಪೂರ್ಣ ವಾಗಿರುವುದಿಲ್ಲ; ಮತ್ತು ಕ್ಲೇಶಗಳು ಹೆಚ್ಚು; ಅಲ್ಲದೆ ಕಾಲದೇಶಾನು ಗುಣವಾಗಿ ನಮ್ಮ ಪದ್ಧತಿಗಳನ್ನು ಸ್ವಲ್ಪ ಬದಲಾಯಿಸಬೇಕಾಗುತ್ತದೆ. ಸಾಧ್ಯವಾದ ಮಟ್ಟಿಗೂ ತಮ್ಮ ಮಕ್ಕಳುಗಳ ಒಪ್ಪಿಗೆಯನ್ನು ತೆಗೆದು ಕೊಂಡು ಮದುವೆ ಮಾಡುವುದೇ ಉತ್ತಮವಾದುದರಿಂದ, ಈಗ ನಿನ್ನ ಒಪ್ಪಿಗೆಯನ್ನು ತಿಳಿಸು.

ಲಲಿತೆ: ಅಮ್ಮಾ, ನೀನು ಹೇಳುವುದೇನೋ ನಿಜ; ಆದರೆ ಅವರವರ ಇಷ್ಟಾನುಸಾರವಾಗಿ ಒಪ್ಪಿಗೆಯನ್ನು ತಿಳಿದು ಮದುವೆಯನ್ನು ಮಾಡಿದರೂ ಕ್ಲೇಶಗಳು ತಪ್ಪುವುದಿಲ್ಲ. ಏತಕ್ಕೆಂದರೆ, ತಮಗೆ ಸೇರ ಬೇಕಾದ ವಸ್ತುವು ಯಾವ ರೀತಿ ಇರಬೇಕೆಂಬುದು ಅವರಿಗೆ ಗೊತ್ತಾಗು ವುದಿಲ್ಲ. ವ್ಯಕ್ತಿ ವ್ಯಕ್ತಿಯನ್ನು ನೋಡುತ್ತಾ, ಅವರ ಮನಸ್ಸು ಚಂಚಲ

ವಾಗುವುದು. ಆದ್ದರಿಂದ ಅವರ ತಂದೆ-ತಾಯಿಗಳೇ ಸರಿಯಾದ ಸಂಬಂಧವನ್ನು ಮಾಡುವುದು ಯುಕ್ತ.

ವಿಮಲೆ:— ಅಮ್ಮಾ ಲಲಿತೆ, ನೀನು ಹೇಳುವುದೂ ಸಹಜ; ಆದರೂ ಮೊದಲು ತಮ್ಮ ಮಕ್ಕಳುಗಳ ಒಪ್ಪಿಗೆಯನ್ನು ತೆಗೆದುಕೊಂಡು ಅನಂತರ ತಾವುಗಳು ಪರ್ಯಾಲೋಚಿಸಿ, ಸಂಬಂಧವು ನೆಟ್ಟಗಿದ್ದರೆ, ಆಗ ಅದನ್ನು ಬೆಳಸಬಹುದು.

ಲಲಿತೆ:—ಅಮ್ಮಾ, ಹಾಗಾದರೆ ನೀವುಗಳು ನನ್ನನ್ನು ಯಾರಿಗೆ ಕೊಟ್ಟು ಮದುವೆ ಮಾಡಬೇಕೆಂದಿರುತ್ತೀರಿ? ಅದನ್ನು ಹೇಳಿದರೆ, ನನ್ನ ಇಷ್ಟವನ್ನು ತಿಳಿಸುವೆನು.

ವಿಮಲೆ:—ಲಲಿತಾ, ಈ ನಮ್ಮ ಸಂಬಂಧಿಗಳಲ್ಲಿ ನೀನು ಈಗ ಮಾತನಾಡುತ್ತಲಿದ್ದ ಭಾಸ್ಕರನೊಬ್ಬನಿರುವನು. ಅಲ್ಲದೆ, ನಿಮ್ಮ ತಂದೆಯವರ ಸೋದರಳಿಯನಾದ ನಾರಾಯಣನಿರುವನು. ಅವರಲ್ಲಿ ನೀನು ಯಾರನ್ನು ವರಿಸುವೆಯೆಂಬುದನ್ನು ತಿಳಿಸು. ಅವರಿಬ್ಬರಲ್ಲಿ ಯಾರನ್ನೂ ವರಿಸುವುದಕ್ಕೆ ಇಷ್ಟವಿಲ್ಲವಿದ್ದರೆ, ಬೇರೆ ಎಲ್ಲಾದರೂ ನೋಡೋಣ.

ಭಾಸ್ಕರನ ಹೆಸರನ್ನು ಕೇಳಿದಾಗ ಲಲಿತೆಯ ಮುಖವು ಸ್ವಲ್ಪ ಪ್ರಫುಲ್ಲವಾಯಿತು. ನಾರಾಯಣನ ಹೆಸರನ್ನು ಕೇಳಿದೊಡನೆಯೇ ಆ ಆಹ್ಲಾದವು ಮಾಯವಾಯಿತು. ಇದನ್ನೆಲ್ಲಾ ಅವಳ ತಾಯಿಯು ನೋಡದೆ ಇರಲಿಲ್ಲ. ಆದರೂ ಲಲಿತೆಯು ಸಾಧ್ಯವಾದ ಮಟ್ಟಿಗೂ ಹೊರಪಡಿಸದೆ ತಾಯಿಯನ್ನು ಕುರಿತು: ಅಮ್ಮಾ, ಅವರಿಬ್ಬರಲ್ಲಿ ಯಾರಿಗೆ ಕೊಡಬೇಕೆಂದು ನಿನ್ನ ಅಭಿಲಾಷೆಯಿದೆ, ಹೇಳು.

ವಿಮಲೆ:—ಲಲಿತಾ, ನನಗೇನೋ ನಿನ್ನನ್ನು ಭಾಸ್ಕರನಿಗೆ ಕೊಡಬೇಕೆಂದು ಅಭಿಲಾಷೆಯಿದೆ; ಆದರೆ ಒಂದೊಂದು ಸಲ ಮಾತ್ರ ಐಶ್ವರ್ಯವಂತನಾದ ನಾರಾಯಣನಿಗೇ ಕೊಡಬೇಕೆನ್ನಿಸುತ್ತದೆ. ಯಾತಕ್ಕೆಂದರೆ, ಭಾಸ್ಕರನಾದರೋ ಬರೀ ವಿದ್ಯಾವಂತ! ಹೆಚ್ಚಾಗಿ ಆಸ್ತಿಪಾಸ್ತಿಗಳಿಲ್ಲ. [illegible] ಮಾಡಿ ಜೀವನ ಮಾಡಬೇಕು; ಆಗ [illegible]

ವಿದ್ಯೆ ಇಲ್ಲವಾದರೂ ಸುಖವಾಗಿರಬಹುದು. ನಮಗೆ ಬೇಕಾಗಿರುವುದು, ನಮ್ಮ ಹುಡುಗಿ ಸುಖವಾಗಿರುವುದು. ಇದರ ಮೇಲೆ ನಿನ್ನ ಇಷ್ಟ.

ಲಲಿತೆ:—ಅಮ್ಮಾ, ನೀನು ಇಷ್ಟು ಒತ್ತಾಯದಿಂದ ಕೇಳುವೆಯಾದುದರಿಂದ, ನನ್ನ ಅಭಿಲಾಷೆಯನ್ನು ಸ್ವಲ್ಪವೂ ಮುಚ್ಚುಮರೆಯಿಲ್ಲದೆ ನಿನಗೆ ತಿಳಿಸುವೆನು. ಅದನ್ನು ತಿಳಿಸುವುದಕ್ಕೆ ಮುಂಚೆ ನಿನ್ನಲ್ಲಿ ಇನ್ನೊಂದು ವಿಚಾರವನ್ನು ಹೇಳಬೇಕೆಂದಿರುತ್ತೇನೆ.

ವಿಮಲೆ:—ಲಲಿತಾ, ಯಾವ ವಿಚಾರವೇ ಆಗಲಿ, ನನ್ನ ಹತ್ತಿರ ಯಾವ ಮುಚ್ಚುಮರೆಯೂ ಇಲ್ಲದೆ ತಿಳಿಸು ಅದರಿಂದ ನಿನಗೆ ಸುಖವುಂಟಾಗುವುದಾದರೆ, ಬೇಕಾದ ಪ್ರಯತ್ನಗಳನ್ನೆಲ್ಲಾ ಮಾಡೋಣ.

ಲಲಿತೆ:—ನಾನು ಈಗ ಯಾರನ್ನು ಅಂತರ್ಯದಲ್ಲಿ ಪ್ರೀತಿಸುತ್ತಾ ಇರುವೆನೋ, ಆತನನ್ನೇ ನನ್ನ ಪತಿಯನ್ನಾಗಿ ಮಾಡಲು ತಕ್ಕ ಸಾಧನೆಗಳನ್ನು ನೀನು ಮಾಡುವೆನೆಂದು ಭರವಸೆ ಕೊಟ್ಟರೆ, ನಾನು ಆಗ ನನ್ನ ಅಭಿಪ್ರಾಯವನ್ನು ತಿಳಿಸುವೆನು.

ವಿಮಲೆ:—ಅಮ್ಮಾ, ಲಲಿತಾ, ತಿಳಿಸು. ನಮಗೂ ಸಮ್ಮತವಾದರೆ ಕಾರ್ಯವು ಶೀಘ್ರದಲ್ಲಿ ನಡೆಯುವ ಹಾಗೆ ಮಾಡುವೆನು.

ಲಲಿತೆ:—"ಅಮ್ಮಾ, ನಾನು ನನ್ನ ಹೃದಯದಲ್ಲಿ ಭಾಸ್ಕರನಿಗೆ ಸ್ಥಳವನ್ನು ಕೊಟ್ಟಿರುತ್ತೇನೆ. ಬಹಳವಾಗಿ ಯೋಚಿಸಿಯೇ ಈ ರೀತಿಯಾಗಿ ಮಾಡಿರುವೆನು. ಆದ್ದರಿಂದ ಆತನನ್ನೇ ನನ್ನ ಪತಿಯನ್ನಾಗಿ ಮಾಡಬೇಕು. ಈಗ ನಿನ್ನ ಕೆಲಸವೇನಂದರೆ, ಹೇಗಾದರೂ ಮಾಡಿ, ಅವರಿಗೆ ನನ್ನ ಅಭಿಲಾಷೆಯನ್ನು ಹೊರಪಡಿಸದೆಯೇ, ಭಾಸ್ಕರನಿಗೆ ನನ್ನನ್ನು ಕೊಟ್ಟು ಮದುವೆ ಮಾಡುವ ಹಾಗೆ ಮಾತನಾಡಿ ನನ್ನ ಇಚ್ಛಾಪೂರ್ತಿ ಮಾಡಬೇಕು." ಎಂದು ಹೇಳುತ್ತಾ ಲಲಿತೆಯು ಎದ್ದು ತನ್ನ ಕೊಠಡಿಗೆ ಹೊರಟು ಹೋದಳು.

## ಅಧ್ಯಾಯ ೩.

ಮಾಧವರಾಯರು ರಾಮಚಂದ್ರಪುರದಲ್ಲಿ ದೊಡ್ಡ ಜಮೀನ್‌ದಾರರು. ಬಾಲ್ಯ ವಯಸ್ಸಿನಲ್ಲೇ ಅವರ ತಂದೆ-ತಾಯಿಗಳು ತೀರಿ ಹೋದರು. ಅಂದಿನಿಂದ ಅವರ ಸೋದರಮಾವನೇ ಬಹಳ ಎಚ್ಚರಿಕೆಯಿಂದ ಅವರನ್ನು ಪೋಷಿಸುತ್ತಾ ವಿದ್ಯಾವಂತರನ್ನಾಗಿ ಮಾಡಿದನು. ಅನಂತರ ತನ್ನ ಮಗಳಾದ ವಿಮಲೆಯನ್ನು ಆತನಿಗೆ ಕೊಟ್ಟು ವಿವಾಹ ಮಾಡಿದನು. ಮಾಧವರಾಯರು ವಿದ್ಯಾವಂತರಾಗಿ, ದೊಡ್ಡವರಾದ ಮೇಲೆ, ತಮ್ಮ ಜಮೀನು ಮುಂತಾದವುಗಳ ಆಢಳಿತವನ್ನೆಲ್ಲಾ ತಾವೇ ವಹಿಸಿಕೊಂಡು, ಬಹಳ ಚೆನ್ನಾಗಿ ಕೆಲಸ ಮಾಡುತಲಿದ್ದರು. ಅಲ್ಲದೆ ಖರ್ಚು ಮಾಡುವುದರಲ್ಲಿ ಬಹಳ ಮಿತವಾಗಿದ್ದು, ದಾನ-ಧರ್ಮಗಳಲ್ಲಿ ಮಾತ್ರ ರಾಮಚಂದ್ರಪುರದಲ್ಲಿ ಒಳ್ಳೇ ಹೆಸರು ಪಡೆದಿದ್ದರು. ಅವರ ಪತ್ನಿಯಾದ ವಿಮಲೆಯಾದರೂ ತನ್ನ ಪತಿಯ ಪ್ರೀತಿಯನ್ನು ಸಂಪೂರ್ಣವಾಗಿ ಸಂಪಾದಿಸಿಕೊಂಡಿದ್ದಳು. ಇವರ ಮಗಳೇ ಲಲಿತೆ.

ಮಾಧವರಾಯರಿಗೆ ಸರಸ್ವತಿ ಎಂಬ ಒಬ್ಬ ಸಹೋದರಿಯಿದ್ದಳು. ಅವಳನ್ನು ಅದೇ ಊರಿನ ಒಬ್ಬ ದೊಡ್ಡ ಸಾಹುಕಾರನಿಗೆ ಕೊಟ್ಟು ಮದುವೆಯನ್ನು ಮಾಡಿದ್ದರು. ಆಕೆಗೆ ಲಲಿತೆಗಿಂತ ೭ ೮ ವರ್ಷ ದೊಡ್ಡವನಾದ ಒಬ್ಬ ಮಗನಿದ್ದನು. ಅವನ ಹೆಸರು ನಾರಾಯಣ. ಅವನು ಬಾಲ್ಯದಲ್ಲಿಯೇ ತನ್ನ ತಂದೆಯನ್ನು ಕಳೆದುಕೊಂಡನು. ಅಂದಿನಿಂದಲೂ ವಿದ್ಯಾಬುದ್ಧಿಗಳಿಗೆ ಹೆಚ್ಚಾಗಿ ಗಮನ ಕೊಡುತ್ತಿರಲಿಲ್ಲ. ತಂದೆಯು ಸಂಪಾದಿಸಿದ ಆಸ್ತಿಯು ಹೆಚ್ಚಾಗಿದ್ದುದರಿಂದ, ಅದು ತನ್ನ ಕೈಸೇರುತ್ತಲೇ ತನ್ನ ಇಷ್ಟಾನುಸಾರವಾಗಿ ಅದನ್ನು ವ್ಯಯ ಮಾಡಲಾರಂಭಿಸಿದನು. ತಾಯಿಯು ಎಷ್ಟು ವಿಧವಾಗಿ ಹೇಳಿದರೂ ಕೇಳುತ್ತಿರಲಿಲ್ಲ. ಕೆಲವು ಸಲ ಮಾತ್ರ ಆಕೆಗೆ ಮಗನ ಮೇಲೆ ಬಹಳ ಕೋಪ ಬರುತ್ತಿತ್ತು; ಆದರೆ ಅದನ್ನು ಮಮತೆಯು ಹಿಂಬಾಲಿಸುತ್ತಿದ್ದುದರಿಂದ, ಮಗನು ಹೇಗಾದರೂ ಬದುಕಿಕೊಂಡು ಇದ್ದರೆ ಸಾಕು, ಎಂದುಕೊಳ್ಳುತ್ತಿದ್ದಳು.

ಇವರು ಹೀಗಿರುವಲ್ಲಿ ವಿಮಲೆಗೆ ಸೀತಾರಾಮು ಎಂಬ ಒಬ್ಬ ಸಹೋದರನಿದ್ದನು. ಅವನಾದರೋ ಬಾಲ್ಯದಿಂದಲೂ ಅಷ್ಟು ಸುಖಿಯಾಗಿ ಬೆಳೆದವನಲ್ಲ. ಅನೇಕ ಕಷ್ಟಗಳಿಗೊಳಗಾಗಿದ್ದನು. ತಂದೆಯು ಅಷ್ಟು ಐಶ್ವರ್ಯವಂತನಾಗಿಲ್ಲದಿದ್ದುದರಿಂದ, ಮಗನಿಗೆ ಸರಿಯಾಗಿ ವಿದ್ಯಾಭ್ಯಾಸ ಮಾಡಿಸಲಿಲ್ಲ. ಆದರೂ ಸುಬುದ್ಧಿಯುಳ್ಳ ಅವನಿಗೆ ಲೋಕ ವ್ಯವಹಾರ ಜ್ಞಾನವು ಅಪಾರವಾಗಿತ್ತು. ಇವನಿಗೂ ಈಗ ಭಾಸ್ಕರನೆಂಬ ಓರ್ವ ಮಗನಿರುವನು. ತನ್ನ ವಿದ್ಯೆಯು ಸರಿಯಾಗಿ ನಡೆಯಲಿಲ್ಲವೆಂದು ಸೀತಾರಾಮುವು ತನ್ನ ಮಗನಿಗೆ ಅವನ ಇಷ್ಟಾನುಸಾರ ಎಲ್ಲಿಯ ವರೆವಿಗೆ ಓದುವನೆನ್ನುವನೋ, ಅಲ್ಲಿಯ ವರೆಗೆ ಓದಿಸಿಯೇ ತೀರಬೇಕೆಂದು ನಿರ್ಧರಿಸಿ, ಮಗನ ಓದಿಗಾಗಿ ತಾನು ಬಹಳ ಶ್ರಮಪಟ್ಟು ಭಾಸ್ಕರನನ್ನು ಒಬ್ಬ ದೊಡ್ಡ ವಿದ್ಯಾವಂತನನ್ನಾಗಿ ಮಾಡಿದನು.

ಈ ಇಬ್ಬರು ಸೋದರಳಿಯಂದಿರನ್ನೇ ವಿಮಲೆಯು ತನ್ನ ಮಗಳಾದ ಲಲಿತೆಗೆ ಈರ್ವರು ವರರೆಂದು ತಿಳಿಸಿದ್ದು. ವಿಮಲೆಯಾದರೊ ಭಾಸ್ಕರನಿಗೇ ತನ್ನ ಮಗಳನ್ನು ಕೊಡಬೇಕೆಂದು ಆಶಿಸುತ್ತಿದ್ದಳು. ಯಾವಾಗ ತನ್ನ ಮಗಳು ಭಾಸ್ಕರನನ್ನೇ ಮದುವೆಯಾಗುವೆನೆಂದು ತಿಳಿಸಿದಳೋ, ಆಗ ತನ್ನ ಆಶೆಯನ್ನು ದೃಢಪಡಿಸಿಕೊಂಡಳು. ಸಮಯವರಿತು ತನ್ನ ಗಂಡನನ್ನು ಒಪ್ಪಿಸಬೇಕೆಂದು ಸಮಯನಿರೀಕ್ಷಣೆಯಲ್ಲಿದ್ದಳು.

ಒಂದು ದಿನ ಮಧ್ಯಾಹ್ನ ಮಾಧವರಾಯರು ವಿಶ್ರಾಂತಿಗಾಗಿ ತಮ್ಮ ಕೊಠಡಿಯಲ್ಲಿ ಕುಳಿತಿದ್ದರು. ಅಲ್ಲಿ ಮತ್ತಾರೂ ಇರಲಿಲ್ಲ. ಆ ಸಮಯಕ್ಕೆ ಸರಿಯಾಗಿ ವಿಮಲೆಯು ಅಲ್ಲಿಗೆ ಹೋದಳು. ತನ್ನ ಗಂಡನೊಡನೆ ಯಾವುದೋ ಮಾತನಾಡುತ್ತಾ, ಲಲಿತೆಯ ಮದುವೆಯ ವಿಚಾರವನ್ನು ಪ್ರಸ್ತಾಪಿಸಿದಳು.

ವಿಮಲೆ: ಈಗ ನಮ್ಮ ಲಲಿತೆಗೆ ಸುಮಾರು ಹದಿನೈದು ವರ್ಷ ತುಂಬುತ್ತಾ ಬಂದಿದೆ ಆದರೂ ಅವಳ ಮದುವೆಯ ಏರ್ಪಾಟು ಬೇಡವೆ?

ಮಾಧವರಾಯ:—ಮಾಡಿದರಾಯಿತು. ಅಷ್ಟು ಅವಸರವೇಕೆ? ಈಗಿನ ಕಾಲದಲ್ಲಿ ೧೮-೨೦ ವರ್ಷಗಳಾದರೂ, ಅವಿವಾಹಿತರಾಗಿರುವುದಿಲ್ಲವೆ?

ವಿಮಲೆ: - ನೀವು ಯಾವಾಗ ಮಾತನಾಡುವಾಗಲೂ|ಈಗಿನ ಕಾಲ-ಈಗಿನ ಕಾಲ ಎಂದು ಪ್ರಾರಂಭ ಮಾಡುವಿರಿ. ಯಾರೊ ಆ ರೀತಿ ಮಾಡಿದರೆ, ಎಲ್ಲರೂ ಹಾಗೆಯೇ ಮಾಡಬೇಕೆ?

ಮಾಧವರಾಯ: ಹೋಗಲಿ. ಆ ಮಾತು ಈಗ ಬೇಡ. ವರನನ್ನು ಹುಡುಕುವ ದೊಡ್ಡ ಭಾರವು ನಮ್ಮ ಮೇಲೆ ಬಿದ್ದಿದೆ. ನನ್ನ ಕೆಲಸದಲ್ಲಿ ನಾನು ಎಲ್ಲಿ ಹೋಗುವುದಕ್ಕೂ ಆಗುವುದಿಲ್ಲ. ನೀನೇ ಯಾರಾದರೂ ಇದ್ದರೆ, ವಿಚಾರಿಸಿ ನೋಡು.

ವಿಮಲೆ: ಬಹಳ ಚೆನ್ನಾಗಿ ಹೇಳಿದಿರಿ. ಸದಾ ಮನೆಯಲ್ಲಿ ಕುಳಿತಿರುವ ನನಗೆ, ಈ ವಿಚಾರಗಳೆಲ್ಲಾ ಹೇಗೆ ಗೊತ್ತಾಗುತ್ತವೆ. ಹೊರಗಡೆ ಸಂಚಾರ ಮಾಡುವವರಿಗೆ ಗೊತ್ತಾಗದೆಯೆ ಇರುತ್ತದೆಯೇ? ಅಲ್ಲದೆ, ಹೆಣ್ಣು ಹೆತ್ತವರು ಕಷ್ಟವನ್ನು ಅನುಭವಿಸಲೇ ಬೇಕು.

ಮಾಧವರಾಯ: ಹೆಂಗಸರೆಲ್ಲಾ ಕುಳಿತು ಮಾತನಾಡುವಾಗ ಈ ವಿಚಾರಗಳಲ್ಲಿ ಪ್ರಸ್ತಾಪವು ನಡೆಯುತ್ತಲೇ ಇರುತ್ತದೆ. ಆದುದರಿಂದ ನಿಮಗೆ ಅವುಗಳೆಲ್ಲ ಬೇಗ ಗೊತ್ತಾಗುವುವು.

ವಿಮಲೆ:— ನಮಗೆ ಗೊತ್ತೂ ಆಗುವುದಿಲ್ಲ, ಏನೂ ಇಲ್ಲ.

ಮಾಧವ: —ಅದು ಹೋಗಲಿ. ಈಗ ನಮಗೆ ಕಂಡ ಹಾಗೆ ಭಾಸ್ಕರನೊಬ್ಬನಿರುವನು; ನಾರಾಯಣನೊಬ್ಬನಿರುವನು. ಅವರಲ್ಲಿ ಯಾರಿಗಾದರೂ ಕೊಡಬಹುದಲ್ಲವೆ?

ವಿಮಲೆ: . ಆಗಬಹುದು. ಅವರಲ್ಲಿ ಭಾಸ್ಕರನಿಗೇ ಕೊಡಬಹುದು. ಹುಡುಗ ಬಹಳ ವಿದ್ಯಾವಂತ; ಸುಂದರ.

ಮಾಧವ:——ಹುಡುಗ ವಿದ್ಯಾವಂತನಾದರೇನು? ತಿನ್ನುವುದಕ್ಕೇ ಗತಿಯಿಲ್ಲದಿರುವ ಬರೀ ವಿದ್ಯಾವಂತರನ್ನು ಯಾರು ಕೇಳುವರು? ಹೊಟ್ಟೆ ತುಂಬ ತಿನ್ನುವುದಕ್ಕೆ ಇರುವ ಆ ನಾರಾಯಣನಿಗೇ ಕೊಡಬಹುದು.

ವಿಮಲೆ: — ನಾರಾಯಣನು ಐಶ್ವರ್ಯವಂತನಾದ ಮಾತ್ರಕ್ಕೆ ಅವನಿಗೆ ಏಕೆ ಕೊಡಬೇಕು? ಐಶ್ವರ್ಯವು ಸದಾ ಶಾಶ್ವತವೊ? ವಿದ್ಯಾವಂತನಾದ ಹುಡುಗನಿಗೆ ಕೊಟ್ಟರೆ, ನಮ್ಮ ಲಲಿತೆಯೂ ವಿದ್ಯಾವಂತಳಾಗಿರುವು

ದರಿಂದ, ಸಂಬಂಧವು ಸರಿ ಹೋಗುವುದು. ಸಂಸಾರವು ಸುಖಮಯ ವಾಗಿರುವುದು.

ಮಾಧವ:— ಈಗಿನ ಕಾಲದಲ್ಲಿ ವಿದ್ಯೆಗೆ ಪ್ರಾಮುಖ್ಯತೆಯನ್ನು ಕೊಡುವುದಕ್ಕೆ ಆಗುವುದಿಲ್ಲ. ಈ ರೀತಿಯಾಗಿರುವ ವಿದ್ಯಾವಂತರು ಸಾವಿರಾರು ಜನರಿರುವರು. ಮೊದಲು ಇದ್ದಷ್ಟು ಬೆಲೆಯಿಲ್ಲ.

ವಿಮಲೆ:— ಐಶ್ವರ್ಯವಂತನೆನಿಸಿಕೊಂಡು ಐಶ್ವರ್ಯಮದದಿಂದ ದುಂದು ಖರ್ಚು ಮಾಡಿಕೊಂಡು, ಪರೋಪಕಾರದ ಮಾತನ್ನು ಸಹ ಎತ್ತದೆ, ಸದಾ ಭೋಗಾಸಕ್ತರಾಗಿ ಎಷ್ಟು ವರ್ಷಗಳು ತಾನೆ ಹಾಗೆ ಇರಬಹುದು? ಅದೂ ಅಲ್ಲದೆ, ನೀವು ವಿದ್ಯೆಗೆ ಬೆಲೆಯಿಲ್ಲವೆಂದು ಹೇಳುವುದನ್ನು ಕೇಳಿದರೆ ಆಶ್ಚರ್ಯವಾಗುತ್ತದೆ. ಈಗಿನ ಕಾಲದಲ್ಲಿ ವಿದ್ಯೆಗೆ ಬೆಲೆಯೇನೂ ಕಡಿಮೆಯಾಗಿಲ್ಲ. ಕಡಿಮೆಯಾಗಿದ್ದರೆ, ಇಷ್ಟೊಂದು ಜನ ಓದುತ್ತಲೇ ಇರಲಿಲ್ಲ. ವಿದ್ಯೆಯನ್ನು ಓದಿದರೆ ಸರ್ಕಾರಿ ಕೆಲಸಗಳು ಸಿಕ್ಕುವುದು ಕಷ್ಟವಾಗುವುದು. ಅದು ಸಹಜ. ಪ್ರತಿವರ್ಷವೂ ಸಾವಿರಾರು ಜನರು ವಿದ್ಯಾವಂತರಾಗುತ್ತಾ ಬಂದರೆ, ಎಲ್ಲರಿಗೂ ಸರ್ಕಾರಿ ಕೆಲಸವನ್ನು ಯಾರು ಕೊಡುವರು? ಆದರೆ ಅವರವರೇ ಸ್ವಂತ ಕೆಲವಗಳನ್ನು ಮಾಡಿಕೊಂಡು ದ್ರವ್ಯಾರ್ಜನೆ ಮಾಡಿ ಸುಖವಾಗಿದ್ದರೆ, ತಮ್ಮ ದೇಶಕ್ಕೂ ಇತರೇ ಜನರಿಗೂ ಬಹಳ ಪ್ರಯೋಜನಕಾರಿಗಳಾಗಬಹುದು.

ಮಾಧವ:—ಹಾಗಾದರೆ, ಅವಳನ್ನು ವಿದ್ಯಾವಂತನಿಗೇ ಕೊಡಬೇಕೆಂಬುದು ನಿನ್ನ ಅಭಿಪ್ರಾಯವೋ? ನನಗಾದರೋ, ಅವಳನ್ನು ಐಶ್ವರ್ಯವಂತನಿಗೇ ಕೊಡುವುದು ಉತ್ತಮವೆಂದು ಕಾಣುತ್ತೆ. ಸ್ವಲ್ಪ ಯೋಚಿಸಿ ನೋಡು.

ವಿಮಲೆ:—ಬರೀ ಐಶ್ವರ್ಯವಂತನಿಗೆ ಕೊಡುವುದಕ್ಕೆ ನನಗೆ ಸ್ವಲ್ಪವೂ ಇಷ್ಟವಿಲ್ಲ. ಐಶ್ವರ್ಯವಿತ್ತೆಂದರೆ ಅದರ ಹಿಂದೆ ಅನೇಕ ದುರ್ಗುಣಗಳು ಇದ್ದೇ ಇರುವುವು. ಇವುಗಳನ್ನೆಲ್ಲ ತಿಳಿದೂ ತಿಳಿದು, ಈ ರೀತಿಯಾಗಿ ಹೇಳುವುದು ಸರಿಯಾಗಿ ಕಾಣುವುದಿಲ್ಲ.

ಮಾಧವರಾಯ:—ಈಗ ಲಲಿತೆಯ ಅಭಿಪ್ರಾಯವನ್ನು ಕೇಳಿ, ನನಗೆ

ತಿಳಿಸು. ಅನಂತರ ಅವಳ ಒಪ್ಪಿಗೆಯ ಪ್ರಕಾರವೇ ಸಾಧ್ಯವಾದ ಮಟ್ಟಿಗೆ ಬೇಗ ಅವಳ ಮದುವೆಯನ್ನು ಮಾಡಿ ಸ್ವಲ್ಪ ಭಾರವನ್ನು ಇಳಿಸಿಕೊಳ್ಳೋಣ.

ವಿಮಲೆಯು ತನ್ನ ಮಗಳ ಇಷ್ಟ ಪ್ರಕಾರವೇ ಭಾಸ್ಕರನಿಗೆ ಅವಳನ್ನು ಕೊಡುವುದಕ್ಕೆ ತನ್ನ ಯಜಮಾನನು ಯಾವ ತೊಂದರೆಯೂ ಇಲ್ಲದೆ ಒಪ್ಪುವನೆಂದರಿತು, ಮುಂದೆ ಮದುವೆಗೆ ಬೇಕಾದ ಕೆಲಸಗಳನ್ನೆಲ್ಲ ಮಾಡ ಲುಪಕ್ರಮಿಸಿದಳು.

---

## ಅಧ್ಯಾಯ ೪

ಮಧ್ಯರಾತ್ರಿಯ ಸಮಯ. ಎಲ್ಲೆಡೆಯಲ್ಲಿಯೂ ನಿಶ್ಶಬ್ದ. ನಿಶಾದೇವಿಯು ತನ್ನ ಮಹಿಮೆಯನ್ನು ಸಂಪೂರ್ಣವಾಗಿ ಪಸರಿಸಿದ್ದರೂ, ಆಕಾಶದಲ್ಲಿ ತಾರೆಗಳು ಮಾತ್ರ ನಿಶಾದೇವಿಯ ಮೇಲೆ ತಮ್ಮ ಪ್ರತಾಪವನ್ನು ತೋರಿಸುವ ಹಾಗೆ ಪ್ರಕಾಶಮಾನವಾಗಿ ಹೊಳೆಯುತ್ತಲಿವೆ. ಆದರೂ ನಿಶಾದೇವಿಯ ಮುಂದೆ ತಾರೆಗಳ ಪರಾಕ್ರಮವೇನು ನಡೆದೀತು?

ಈ ನಡುರಾತ್ರಿಯಲ್ಲಿ ನಾಲ್ಕು ಮಂದಿ ಯುವಕರು ಕೈಗಳಲ್ಲಿ ಹರಿತವಾದ ಕತ್ತಿಗಳನ್ನು ಹಿಡಿದುಕೊಂಡು, ಯಾವುದೋ ಒಂದು ವಸ್ತುವನ್ನು ಹೊತ್ತುಕೊಂಡು, ಅತಿ ತ್ವರೆಯಿಂದ ಒಂದು ಕಾಡು ದಾರಿಗೆ ಬಂದರು. ಆ ಕಾಡು ದಾರಿಯಲ್ಲಿಯೇ ಸುಮಾರು ಎರಡು ಗಂಟೆ ಕಾಲ ಪ್ರಯಾಣ ಮಾಡಿ, ಸಂಕೇತ ಪ್ರಕಾರ ಎಲ್ಲರೂ ನಿಂತರು. ಹೊತ್ತುಕೊಂಡಿದ್ದ ವಸ್ತುವನ್ನು ಕೆಳಗಿಳಿಸಿದರು. ಅವರಲ್ಲಿ ಮುಖ್ಯಸ್ಥನೆಂದು ಕಾಣುತ್ತಿರುವ ಓರ್ವ ಯುವಕನು: "ತಮ್ಮಂದಿರಾ, ಈಗ ನಮ್ಮ ಪ್ರಥಮ ಕಾರ್ಯವು ಯಾವ ವಿಘ್ನವೂ ಇಲ್ಲದೆ ನಡೆದು ಹೋಗಿದೆ. ಏನೇ ಆಗಲಿ, ಬಹು ಕಷ್ಟದ ಕೆಲಸಕ್ಕೆ ಕೈ ಹಾಕಿದ್ದೇವೆ. ಅದನ್ನು ಹೇಗಾದರೂ ಮಾಡಿ ಪೂರ್ತಿಗೊಳಿಸಿ, ನನ್ನ ಮನಸ್ಸನ್ನು ಸಂತೋಷಪಡಿಸಬೇಕಾಗಿ ನಿಮ್ಮೆಲ್ಲರನ್ನೂ ಕೇಳಿಕೊಳ್ಳುತ್ತೇನೆ. ಕೆಲಸವು ಪೂರ್ತಿಯಾಗಿ ಕೈಗೂಡಿದನಂತರ, ನಿಮಗೆ ಸಲ್ಲಬೇಕಾದ ಬಹುಮಾನಗಳು ಯಾವ ಕೊರತೆಯೂ ಇಲ್ಲದೆ

ನಿಮ್ಮನ್ನು ಸೇರುವುವು. ಅದಕ್ಕೆ ನೀವು ಕಿಂಚಿತ್ತಾದರೂ ಯೋಚಿಸಬೇಕಾಗಿಲ್ಲ''ಎಂದನು. ಈ ಮಾತುಗಳನ್ನು ಕೇಳುತ್ತಾ ನಿಂತಿದ್ದವರಲ್ಲೊಬ್ಬನು:— ''ಒಡೆಯಾ, ಈ ಕೆಲಸಕ್ಕೆ ಕೈ ಹಾಕುವಾಗಲೇ ನಾವುಗಳು ಇದನ್ನು ಹೇಗಾದರೂ ಮಾಡಿ ಪೂರ್ತಿಗೊಳಿಸಿ, ನಿಮ್ಮ ಮನಸ್ಸನ್ನು ಸಂತೋಷಗೊಳಿಸಬೇಕೆಂದು ಶಪಥ ಮಾಡಿಕೊಂಡೇ ಇರುವೆವು. ಅಲ್ಲದೆ ತಮಗೆ ಇದರಿಂದ ಸುಖವುಂಟಾಗುವುದಾದರೆ, ನವಗೆಲ್ಲರಿಗೂ ಸುಖವುಂಟಾದ ಹಾಗೇ ಆಗುತ್ತೆ. ಆದುದರಿಂದ ನಮ್ಮ ಶಕ್ತಿ ಮೀರಿ ಸಾಹಸ ಮಾಡಿ ನಿಮ್ಮ ಬಯಕೆಯನ್ನು ಪೂರ್ತಿಗೊಳಿಸುವೆವು. ಇದಕ್ಕೆ ತಾವೇನೂ ಯೋಚಿಸಬೇಕಾಗಿಲ್ಲ''ಎಂದನು. ಮಿಕ್ಕವರೆಲ್ಲರೂ ಈ ಮಾತಿಗೆ ತಲೆದೂಗಿದರು. ಮುಖ್ಯಸ್ಥನು: ''ಬಹಳ ಸಂತೋಷ. ಒಂದು ಕಾರ್ಯವನ್ನು ಸಾಧಿಸಬೇಕಾದರೆ ಒಬ್ಬನಿಂದಲೇ ಆಗುವುದು ಕಷ್ಟ; ಆದರೆ ನಿಮ್ಮಂಥ ಮಿತ್ರರು ನನಗೆ ಸಿಕ್ಕಿರುವಲ್ಲಿ ನಾನು ಯಾವ ವಿಚಾರವಾಗಿಯೂ ಯೋಚಿಸಬೇಕಾಗಿಲ್ಲ. ಈಗ ಹೊತ್ತು ಬಹಳವಾಗುತ್ತಲಿದೆ. ವ್ಯಕ್ತಿಗೆ ಪ್ರಜ್ಞೆ ಬರುವುದರೊಳಗಾಗಿಯೆ ನಮ್ಮ ಗುಪ್ತಸ್ಥಳಕ್ಕೆ ಹೋಗಿ, ಅಲ್ಲಿಟ್ಟು ಇನ್ನು ಮುಂದಿನ ಕೆಲಸಕ್ಕೆ ಹೊರಡೋಣ. ಏಳಿ, ಬೇಗ ಹೋಗೋಣ''ಎಂದನು.

ಕೂಡಲೆ ಎಲ್ಲರೂ ಎದ್ದರು. ಕೆಳಗಿಟ್ಟಿದ್ದ ವ್ಯಕ್ತಿಯನ್ನು ಹೊತ್ತುಕೊಂಡು ಒಂದು ಅಡ್ಡದಾರಿಯನ್ನು ಬಿದ್ದರು. ಆ ಕತ್ತಲೆಯಲ್ಲಿ ಸ್ವಲ್ಪ ದೂರ ಹೋಗುವುದರೊಳಗಾಗಿಯೇ ಒಂದು ದೊಡ್ಡ ವನವನ್ನು ಹೊಕ್ಕರು; ಆದರೆ ದೂರದಲ್ಲಿ ಒಂದು ದೀಪವು ಕಾಣಿಸಿತು. ಇನ್ನು ತಮ್ಮ ಗುಪ್ತಸ್ಥಳಕ್ಕೆ ಸೇರಿದೆವೆಂದು ಸಂತೋಷದಿಂದ ಎಲ್ಲರೂ ಮುಂದು ವರಿದರು. ಎಲ್ಲರೂ ಆ ದೀಪದ ಹತ್ತಿರ ಬಂದು, ಅಲ್ಲಿದ್ದ ಗುಡಿಸಲನ್ನು ಹೊಕ್ಕರು. ಒಳಗಡೆ ತಲೆಯಿಂದ ಕಾಲಿನ ವರೆಗೂ ಕಪ್ಪುಬಟ್ಟೆಯನ್ನೇ ಹಾಕಿಕೊಂಡ ಒಂದು ವ್ಯಕ್ತಿಯು ಮಲಗಿತ್ತು. ಎಲ್ಲರೂ ಅದರ ಹತ್ತಿರಕ್ಕೆ ಒಂದರೂ, ಆ ವ್ಯಕ್ತಿಗೆ ಎಚ್ಚರವೇ ಆಗಲಿಲ್ಲ. ಆಗ ಅವರಲ್ಲೊಬ್ಬನು:—''ಉಸ್ಮಾನ್-ಉಸ್ಮಾನ್'' ಎಂದು ಕೂಗಿದನು. ಮಲಗಿದ್ದ ವ್ಯಕ್ತಿಯು ಬೆಚ್ಚಿ ಬಿದ್ದು ಎದ್ದು ನಿಂತು ಕಣ್ಣುಗಳನ್ನೊರಸಿಕೊಳ್ಳುತ್ತಾ:

"ಮಹರಾಜ, ತಪ್ಪು ಮಾಡಿದೆ. ಏನೋ, ಯೋಚಿಸುತ್ತಾ ಕುಳಿತಿರು ವಾಗ ನಿದ್ದೆ ಬಂದಿತು. ಖಂಡಿತವಾಗಿಯೂ ಈ ರೀತಿಯಾಗಿ ಮುಂದೆ ಮಾಡುವುದಿಲ್ಲ. ಈ ಸಲ ದಯವಿಟ್ಟು ಮಾಫಿ ಮಾಡಿರಿ" ಎಂದು ದೀನ ಸ್ವರದಿಂದ ಬೇಡಿಕೊಳ್ಳಲಾರಂಭಿಸಿದನು. ಮುಖಂಡನು ಇದನ್ನು ಕೇಳಿ: "ಒದಮಾಷ್! ನಿನಗೆ ಎಷ್ಟು ಸಲ ಹೇಳಿದರೂ ನೀನು ಅತಿಕ್ರಮಿಸಿಯೇ ನಡೆಯುತ್ತಿರುವೆ. ಈ ರೀತಿಯಾಗಿ ಕಾವಲಿದ್ದರೆ, ಏನಾದರೂ ತೊಂದರೆ ಯುಂಟಾದರೆ, ಆಗ ಯಾರ ತಲೆ ಹೋಗುವುದು? ನೀನೇ ಈ ಕೆಲಸಕ್ಕೆ ಅರ್ಹನೆಂದು ನಿಯಮಿಸಿದ್ದುದು, ಇಷ್ಟು ಅಜಾಗರೂಕನಾಗಿರಲೆಂದೇ? ಪುನಃ ಈ ರೀತಿಯಾಗಿರುವುದನ್ನು ಕಂಡರೆ, ನಿನ್ನ ಸ್ಥಿತಿ ನೆಟ್ಟಗಾಗಲಿಕ್ಕಿಲ್ಲ! ಹುಷಾರಾಗಿರು. ನಡೆ; ದೀಪವನ್ನು ತೆಗೆದುಕೊಂಡು ದಾರಿಯನ್ನು ತೋರಿಸು?" ಎಂದು ಗದ್ದರಿಸಿದನು.

ಉಸ್ಮಾನನು ಒಹಳ ಹೆದರಿಕೆಯಿಂದ ದೀಪವನ್ನು ತೆಗೆದುಕೊಂಡು, ಸುಮಾರು ಅರ್ಧ ಮೈಲಿ ದೂರ ನಡೆದನು. ಎಲ್ಲರೂ ಅವನನ್ನು ಹಿಂಬಾಲಿಸಿದರು. ಕೊನೆಗೆ ಒಂದು ಹಳೆಯ ಕೋಟೆಯ ಹತ್ತಿರ ಬಂದು ಎಲ್ಲರೂ ನಿಂತರು. ಕೋಟೆಯ ಸುತ್ತಲೂ ಅನೇಕ ಕುರುಚಲು ಗಿಡಗಳು ಬೆಳೆದಿದ್ದುವು. ಅಲ್ಲದೆ, ಅನೇಕ ದೊಡ್ಡ ದೊಡ್ಡ ಬಂಡೆಗಳೂ, ಮುಳ್ಳಿನ ಅನೇಕ ಗಿಡಗಳೂ ಅಲ್ಲಿದ್ದುದರಿಂದ, ಜನರು ಅಲ್ಲಿಗೆ ಬರುವುದಕ್ಕೆ ಹೆದರುತ್ತಿದ್ದರು; ಆದರೆ ಆ ಸ್ಥಳದಲ್ಲಿಯೇ ಇರುವವರಿಗೆ ಯಾವ ಹೆದರಿಕೆ ತಾನೇ ಉಂಟಾಗುವುದು?

ಉಸ್ಮಾನನು ದೀಪವನ್ನು ಮತ್ತೊಬ್ಬನ ಕೈಲಿ ಕೊಟ್ಟು, ಹತ್ತಿರಿದ್ದ ಒಂದು ಮರವನ್ನೇರಿದನು. ಅದಕ್ಕೆ ಕಟ್ಟಿದ್ದ ಒಂದು ಏಣಿಯನ್ನು ಕಳಕ್ಕೆ ತಂದು, ಅದರ ಸಹಾಯದಿಂದ ಕೋಟೆಯನ್ನು ಹತ್ತಿದನು. ಮುಖಂಡನೂ ಅವನ ಹಿಂದೆ ಹತ್ತಿದನು. ಉಸ್ಮಾನನು ತನ್ನ ಹತ್ತಿರಿದ್ದ ಒಂದು ಹಗ್ಗವನ್ನೂ, ಒಂದು ಅಗಲವಾದ ಬಟ್ಟೆಯನ್ನೂ ತೆಗೆದುಕೊಂಡು, ಅದನ್ನು ಡೋಲಿಯ ಹಾಗೆ ಬಿಗಿಯಾಗಿ ಕಟ್ಟಿ ಕೆಳಕ್ಕೆ ಹಾಕಿದನು. ಕೆಳಗೆ ನಿಂತಿದ್ದವರು ಆ ಡೋಲಿಯಲ್ಲಿ ತಾವು ತಂದಿದ್ದ ವ್ಯಕ್ತಿಯನ್ನು ಮಲಗಿ

ಸಿದರು. ಉಸ್ಮಾನ ಮತ್ತು ಮುಖಂಡರಿಬ್ಬರೂ ಸೇರಿ, ಆ ಡೋಲಿಯನ್ನು ಮೇಲಕ್ಕೆಳೆದುಕೊಂಡರು. ಅನಂತರ ಮಿಕ್ಕವರೆಲ್ಲರೂ ಕೋಟೆಯನ್ನು ಹತ್ತಿದರು. ಆ ಕೋಟೆಯ ಮೇಲೆ ಐದಾರು ಮಾರು ದೂರ ಹೋದ ನಂತರ, ಅವರುಗಳಿಗೆ ಒಬ್ಬ ಮನುಷ್ಯನು ಇಳಿದು ಹೋಗುವುದಕ್ಕೆ ಆಗು ವಷ್ಟು ಮೆಟ್ಟಿಲು ಕಾಣಿಸಿತು. ಮೊದಲು ಉಸ್ಮಾನನು ದೀಪವನ್ನು ತೆಗೆ ದುಕೊಂಡು ಆ ಮೆಟ್ಟಿಲುಗಳನ್ನು ಇಳಿದನು. ಇತರರು ಆ ವ್ಯಕ್ತಿಯನ್ನು ಹೊತ್ತುಕೊಂಡೇ ಅವನನ್ನು ಹಿಂಬಾಲಿಸಿದರು. ಎಲ್ಲರೂ ಮೆಟ್ಟಿಲು ಗಳನ್ನು ಇಳಿದು ಸ್ವಲ್ಪ ದೂರ ಹೋಗಲು, ಅವರಿಗೆ ಒಂದು ಬಾಗಿಲು ಕಾಣಿಸಿತು. ಮುಖಂಡನು ಮುಂದುವರಿದು ತನ್ನ ಹತ್ತಿರಿದ್ದ ಕತ್ತಿಯ ಹಿಡಿಯನ್ನು ಬಾಗಿಲಲ್ಲಿದ್ದ ಒಂದು ರಂಧ್ರಕ್ಕೆ ಸೇರಿಸಿ, ಕತ್ತಿಯನ್ನು ಎಡ ಗಡೆಗೆ ತಿರುಗಿಸಲು, ಬಾಗಿಲು ತಟ್ಟನೆ ತೆರೆಯಿತು. ಆ ಬಾಗಿಲನ್ನು ಅವರು ಹೊಕ್ಕರು. ಅಲ್ಲಿ ಕೆಲವು ಗಿಡಗಳು ಬಹಳ ದಟ್ಟವಾಗಿಯೂ, ಎತ್ತರವಾ ಗಿಯೂ ಬೆಳೆದಿದ್ದುದರಿಂದ, ಕೋಟೆಯ ಹೊರಗಡೆ ನಿಂತು ನೋಡುವವರಿಗೆ ಕೋಟೆಯ ಮೇಲು ಭಾಗದಲ್ಲಿಯೇ ಗಿಡಗಳು ಬೆಳೆದಿರುವ ಹಾಗೆ ಭಾಸ ವಾಗುತಲಿತ್ತು; ಆದರೆ ಅಲ್ಲಿಗೆ ಹೋಗಿ ನೋಡಲು ಧೈರ್ಯವೇ ಸಾಲದು.

ಆ ಗಿಡಗಳ ನಡುವೆ ಒಂದು ಸಣ್ಣ ಮನೆಯಿದ್ದಿತು. ಅದನ್ನು ಮನೆಯೆಂದು ಹೇಳುವುದಕ್ಕಾಗುವುದಿಲ್ಲ; ಪಡಸಾಲೆಯೆಂದೆನ್ನಬಹುದು. ನೆಲಕ್ಕೆ ಗಟ್ಟಿಗಾರೆ ಹಾಕಿತ್ತು. ಮೂರು ನಾಲ್ಕು ಕೊಠಡಿಗಳು ಆ ಪಡ ಸಾಲೆಗೆ ಸೇರಿದ್ದುವು. ಎಲ್ಲರೂ ಪಡಸಾಲೆಯನ್ನು ಸೇರಿದೊಡನೆಯೇ, ಮುಖಂಡನು ಅಲ್ಲಿ ಹಾಸಿದ್ದ ಒಂದು ಜಮುಖಾನದ ಮೇಲೆ ಕುಳಿತನು. ಇತರರೂ ತಾವು ಹೊತ್ತುಕೊಂಡಿದ್ದ ವ್ಯಕ್ತಿಯನ್ನು ಹತ್ತಿರದಲ್ಲಿಯೇ ಇಟ್ಟುಕೊಂಡು ಕುಳಿತರು. ಮುಖಂಡನು ಉಸ್ಮಾನನನ್ನು ಕುರಿತು:— ''ಉಸ್ಮಾನ್, ಆ ಕೊಠಡಿಯ ಬಾಗಿಲನ್ನು ತೆರೆದು, ಅಲ್ಲಿರುವ ಮಂಚದ ಮೇಲೆ ಈ ವ್ಯಕ್ತಿಯನ್ನು ಬಹು ಜಾಗರೂಕತೆಯಿಂದ ಮಲಗಿಸು. ಅನಂ ತರ.ಅಲ್ಲಿರುವ ತಟ್ಟೆಯಲ್ಲಿ ನಿನ್ನ ಬಳಿಯಲ್ಲಿರುವ ಕೆಲವು ಹಣ್ಣುಗಳನ್ನು ಇಡು. ಕೊಳಕ್ಕೆ ಹೋಗಿ ಒಂದು ಕೂಜೆ ನೀರನ್ನು ಸಹ ತಂದು, ಆ

ಕೊಠಡಿಯಲ್ಲಿಡು. ಆ ಮೇಲೆ ಬೀಗವನ್ನು ಹಾಕಿಕೊಂಡು ಬೀಗದ ಕೈಯನ್ನು ಇತ್ತ ತೆಗೆದುಕೊಂಡು ಬಾ. ಕೆಲಸವನ್ನೆಲ್ಲಾ ಬಹಳ ಜಾಗರೂಕತೆಯಿಂದ ನಡೆಯಿಸು'' ಎಂದು ಹೇಳಿದನು.

ಅದೇ ರೀತಿಯಾಗಿ ಉಸ್ಮಾನನು ಕರಿಯ ಬಟ್ಟೆಯನ್ನು ಹೊದಿಸಿ ತಂದಿದ್ದ ವ್ಯಕ್ತಿಯನ್ನು ಹೊತ್ತುಕೊಂಡು ಕೊಠಡಿಗೆ ಹೋಗಿ, ಅಲ್ಲಿದ್ದ ಮಂಚದ ಮೇಲೆ ಮಲಗಿಸಿ, ಅದಕ್ಕೆ ಹೊದಿಸಿದ್ದ ಕರಿಯ ಬಟ್ಟೆಯನ್ನು ಬಹಳ ಜಾಗರೂಕತೆಯಿಂದ ತೆಗೆದನು. ಅವನು ಹೊರಕ್ಕೆ ಬರುವಷ್ಟರಲ್ಲಿಯೇ ಮುಖಂಡನು ಕೊಠಡಿಯೊಳಕ್ಕೆ ಬಂದು ಆ ವ್ಯಕ್ತಿಯನ್ನು ನೋಡಿ, ಸಂತೋಷಚಿತ್ತನಾಗಿ:—''ಆಹಾ! ಇಂಥ ರತ್ನವು ನನಗೆ ಸಿಕ್ಕದೆ, ಅನ್ಯರ ಪಾಲಾಗುತ್ತಿತ್ತಲ್ಲ! ಇನ್ನು ಇದು ಯಾರ ವಸ್ತುವಾಗುವುದೊ ನೋಡೋಣ'' ಎಂದು ಹೇಳುತ್ತಿರುವಾಗ, ಅವನ ದೃಷ್ಟಿಯು ಕೈಗಡಿಯಾರದ ಮೇಲೆ ಹೋಗಲು, ಪುನಃ ಉಸ್ಮಾನನನ್ನು:—''ಬಾಗಿಲನ್ನು ಹಾಕಿ ಬೀಗದ ಕೈಯನ್ನು ಇತ್ತ ಕೊಡು. ಈ ವ್ಯಕ್ತಿಗೆ ಎಚ್ಚರವಾಗುವವರೆಗೂ ನೀನು ಇಲ್ಲಿಯೇ ಇರು. ಅನಂತರ ನಿನ್ನ ಸ್ಥಳಕ್ಕೆ ಹೊರಟು ಹೋಗು. ಇನ್ನು ನಾವು ಹೊರಡುವೆವು. ಸಾಧ್ಯವಾದರೆ ಈ ದಿನ ರಾತ್ರಿ ಎಲ್ಲರೂ ಪುನಃ ಸೇರೋಣ''ಎಂದು ಹೇಳುತ್ತ ಹೊರಕ್ಕೆ ಬಂದನು. ಉಸ್ಮಾನನಾದರೋ ಕೊಠಡಿಯ ಬಾಗಿಲಿಗೆ ಬೀಗವನ್ನು ಹಾಕಿ, ಬೀಗದ ಕೈಯನ್ನು ತನ್ನ ಯಜಮಾನನಿಗೆ ಕೊಟ್ಟನು. ಅಲ್ಲಿಂದ ಉಸ್ಮಾನನೊಬ್ಬನ ಹೊರತು, ಉಳಿದವರೆಲ್ಲರೂ ಹೊರಕ್ಕೆ ಹೊರಟರು. ಕೋಟೆಯಿಂದ ಇಳಿದ ನಂತರ, ಎಲ್ಲರೂ ದಿಕ್ಕಾಪಾಲಾಗಿ ಚದುರಿದರು.

ಅಷ್ಟು ಹೊತ್ತಿಗಾಗಲೇ ಬೆಳಗಿನ ಜಾವವಾಗಿದ್ದುದರಿಂದ, ತಂಗಾಳಿಯು ಬೀಸಲಾರಂಭಿಸಿತು. ಹೊರಗಡೆ ಕುಳಿತಿದ್ದ ಉಸ್ಮಾನನಿಗೆ ಸ್ವಲ್ಪ ಜಂಪು ಹಿಡಿಯಿತು. ಇದ್ದಕ್ಕಿದ್ದ ಹಾಗೆಯೇ ವ್ಯಕ್ತಿಯನ್ನು ಮಲಗಿಸಿದ್ದ ಕೊಠಡಿಯಿಂದ ಚೀತ್ಕಾರವು ಕೇಳಿಸಲು, ದಿಗ್ಗನೆ ಎದ್ದು ಕೊಠಡಿಯ ಬಾಗಿಲ ಹತ್ತಿರ ಹೋಗಿ ನಿಂತು ಒಳಗಿದ್ದ ವ್ಯಕ್ತಿಯು ಏನು ಮಾಡುತ್ತಿರುವದೆಂಬದನ್ನು ಬಾಗಿಲ ಸಂದಿನಿಂದ ನೋಡಲಾರಂಭಿಸಿದನು.

ಒಳಗೆ ಮಲಗಿದ್ದ ವ್ಯಕ್ತಿಗೆ ಮೈಮೇಲೆ ಹೆಚ್ಚಾಗಿ ಹೊದಿಕೆಯಿಲ್ಲದೆ ಇದ್ದುದರಿಂದ, ಕೊಠಡಿಯ ಕಿಟಕಿಯಿಂದ ತಂಗಾಳಿಯು ಬೀಸಲು ಎಚ್ಚರ ವಾಯಿತು. ಸುತ್ತಲೂ ನೋಡಲು, ಮನಸ್ಸಿನಲ್ಲಿ ಏನೋ ಒಂದು ರೀತಿ ಯಾದ ಭಯವು ಉತ್ಪನ್ನವಾಗಲು, ಚೀತ್ಕಾರ ಮಾಡುತ್ತಾ ಕಣ್ಣುಗಳನ್ನು ಮುಚ್ಚಿಕೊಂಡಳು. ತಾನು ರಾತ್ರಿ ಮಲಗಿದ್ದ ತನ್ನ ಕೊಠಡಿಯಲ್ಲಿ ಯಾವಾಗಲೂ ಇಲ್ಲದೆ, ಈ ದಿನ ಇಷ್ಟು ಕತ್ತಲು ಉಂಟಾಗಿರಲು ಕಾರಣ ವೇನೆಂದು ಯೋಚಿಸುತ್ತಾ: "ಅಮ್ಮಾ ಅಮ್ಮಾ" ಎಂದು ಎರಡು ಬಾರಿ ಗಟ್ಟಿಯಾಗಿ ಕೂಗಿದಳು. ಉತ್ತರವೇ ಬರಲಿಲ್ಲ. ತಾನು ಸ್ವಗೃಹವನ್ನು ಬಿಟ್ಟು ಇನ್ನೆಲ್ಲಿಯೋ ಇರುವ ಹಾಗೆ ಭಾಸವಾಯಿತು. ಸ್ವಲ್ಪ ಧೈರ್ಯ ವನ್ನು ತಂದು ಕಣ್ಣುಗಳನ್ನು ತೆರೆದು, ಮಂಚದಿಂದ ಕೆಳಗಿಳಿದು ಬಾಗಿ ಲನ್ನು ಹುಡುಕಿದಳು. ಬಾಗಿಲಿನ ಅಗಳಿಯು ಅವಳ ಕೈಗೆ ಸಿಕ್ಕಲು, ಅದನ್ನು ಹಿಡಿದು ಗಟ್ಟಿಯಾಗಿ ಎಳೆದಳು. ಬಾಗಿಲು ಕದಲಲೇ ಇಲ್ಲ. ಅಷ್ಟು ಹೊತ್ತಿಗೆ ಸೂರ್ಯೋದಯವಾದುದರಿಂದ ಕಿಟಕಿಯಲ್ಲಿ ಸ್ವಲ್ಪ ಬೆಳಕು ಬಿತ್ತು. ಸುತ್ತಲೂ ನೋಡಿದಳು; ಅಲ್ಲಿ ಮಂಚ, ಒಂದು ತಟ್ಟೆ ಯಲ್ಲಿ ಕೆಲವು ಹಣ್ಣುಗಳು ಮತ್ತು ನೀರಿನ ಒಂದು ಹೂಜಿ ವಿನಹ ಮತ್ತೇನೂ ಕಾಣಲಿಲ್ಲ. ಇವೆಲ್ಲವನ್ನು ನೋಡಿದೊಡನೆಯೇ ಅವಳ ಎದೆಯೊಡೆಯಿತು. ತನ್ನನ್ನು ಯಾರೋ ಸೆರೆಹಾಕಿರುವುದಾಗಿ ತಿಳಿದು ಪುನಃ ಚೀತ್ಕಾರ ಮಾಡುತ್ತ ಕೆಳಗೆ ಬಿದ್ದಳು. ಸ್ವಲ್ಪ ಹೊತ್ತಿನಲ್ಲಿಯೇ ಚೇತರಿಸಿಕೊಂಡು ಪುನಃ ಪುನಃ "ಅಮ್ಮಾ-ಅಮ್ಮಾ" ಎಂದು ಕೂಗಲಾರಂಭಿಸಿದಳು. ಆ ಗುಪ್ತಸ್ಥಳದಲ್ಲಿ, ಅದರಲ್ಲೂ ನಿರ್ಜನ ಪ್ರದೇಶದಲ್ಲಿ ಆಕೆಗೆ ಉತ್ತರವನ್ನು ಯಾರು ಕೊಡಬೇಕು? ಆಕೆಯು ತನ್ನ ಮನಸ್ಸಿನಲ್ಲಿಯೇ: "ಹಾ ದೈವವೇ! ನಾವು ಒಂದು ಬಗೆ ದರೆ ನೀನೊಂದನ್ನು ಮಾಡುವೆ. ಯಾವ ಸ್ತ್ರೀಯು ತನ್ನ ಪತಿಯ ಮುಖಾರ ವಿಂದವನ್ನು ನೋಡುತ್ತಾ, ಆತನೊಡನೆ ಸರಸಸಲ್ಲಾಪಗಳನ್ನಾಡುತ್ತಾ ಕುಳಿತುಕೊಳ್ಳುವದಕ್ಕೆ ಸುದಿನವು ಬಂದಿತೆಂದು ಸಂತೋಷದಿಂದಿದ್ದಳೋ, ಆಕೆಗೆ ಆ ಸುದಿನವನ್ನೇ ದುರ್ದಿನವನ್ನಾಗಿ ಮಾಡಿದೆಯಾ? ನಿನಗೆ ನಾವು ಸುಖವಾಗಿರುವುದು ಸೈರಿಸಲಿಲ್ಲವೆ? ಹಾ! ಅಮ್ಮಾ, ನಾನು ಇನ್ನು ನಿನ್ನನ್ನು

ಹಾಗು ನನ್ನ ಪ್ರಾಣಪ್ರಿಯನ ಮುಖವನ್ನು ನೋಡುವೆನೆ? ಯಾವ ನರ ಪಶುವು ನನ್ನನ್ನು ಈ ರೀತಿ ಮಾಡಿತೋ ಕಾಣೆನಲ್ಲಾ! ಮಾಯಾಶಕ್ತಿಯಿಂದ ಭೂತಪ್ರೇತಗಳು ಒಂದು ಕಡೆಯಿರುವವರನ್ನು ಮತ್ತೊಂದು ಕಡೆ ತಂದು ಮಲಗಿಸುವುವೆಂದು ಅನೇಕ ಕಥೆಗಳಲ್ಲಿ ಓದಿರುತ್ತೇನೆ. ಅದು ಈಗ ಅನುಭವಕ್ಕೆ ಬಂದಿತಲ್ಲಾ? ಈಗಿನ ಕಾಲದಲ್ಲಿಯೂ ಇಂಥ ಭೂತ ಪ್ರೇತಗಳಿವೆಯೆ! ಇಲ್ಲ ಇಲ್ಲ. ಇದ್ದರೂ ಇದು ಭೂತಪ್ರೇತಗಳ ಕೆಲಸ ವಲ್ಲ. ಯಾರೋ ದುರಾತ್ಮರು, ಪಾಪಿಗಳು, ನನ್ನನ್ನು ಈ ರೀತಿ ಸೆರೆ ಹಾಕಿರುವರು. ಹಾ ದೈವವೇ! ನಾನು ಇನ್ನು ಈ ಲೋಕದಲ್ಲಿದ್ದು ಏನು ಪ್ರಯೋಜನ! ಆದರೆ ಈಗ ನಾನು ಎಲ್ಲಿರುವೆನೆಂಬದು ಗೊತ್ತಾಗಿಲ್ಲ ವಲ್ಲಾ! ನಾನು ಇಲ್ಲಿಂದ ತಪ್ಪಿಸಿಕೊಂಡು ಹೋಗಲು ಸಾಧ್ಯವೆ? ಅಥವಾ ಯಾರಾದರೂ ನನ್ನನ್ನು ಬಿಡುಗಡೆ ಮಾಡಲು ಬರುವರೆ? ಇರಲಿ. ಹೇಗಾದರೂ ನಾನು ಎಲ್ಲಿರುವೆನೆಂಬುದನ್ನು ಮೊದಲು ತಿಳಿದುಕೊಂಡು, ಮುಂದಿನ ಆಲೋಚನೆಯನ್ನು ಮಾಡೋಣ'' ಎಂದು ಹಂಬಲಿಸಲಾರಂಭಿಸಿದಳು.

ಯಾವಾಗ ಒಳಗಿದ್ದ ಸ್ತ್ರೀಯು ಈ ರೀತಿಯಾಗಿ ಹಂಬಲಿಸುತ್ತಲಿದ್ದಳೋ, ಉಸ್ಮಾನನು ವ್ಯಕ್ತಿಗೆ ಎಚ್ಚರವಾಯಿತೆಂದು ತಿಳಿದು, ಅಲ್ಲಿಂದ ಹೊರಟು ಹೋದನು.

ಒಳಗಿದ್ದ ಸ್ತ್ರೀಯು ಬಹಳವಾಗಿ ಪ್ರಲಾಪಿಸಿ, ಹಾಗೆಯೇ ಕೊರಗಿ ಮಲಗಿ ಬಿಟ್ಟಳು. ರಾತ್ರಿ ಎಂಟು ಗಂಟೆಯ ಸಮಯದಲ್ಲಿ ಯಾರೋ ಕೊಠಡಿಯ ಬಾಗಿಲನ್ನು ತೆರೆದರು. ಗಾಬರಿಯಿಂದ ಆ ಸ್ತ್ರೀಯು ಎದ್ದು ನಿಂತಳು. ಬಾಗಿಲನ್ನು ತೆರೆದವನು ಬೇರೆ ಅಲ್ಲ; ಇವಳನ್ನು ಅಪಹರಿಸಿ ತಂದ ಯಜಮಾನ. ಅವನು ಒಳಕ್ಕೆ ಬಂದು:—''ಲಲಿತಾ, ಸುಖವಾಗಿರುವೆಯಾ?'' ಎಂದು ಹಾಸ್ಯವಾಗಿ ಕೇಳಿದನು. ಲಲಿತೆಗೆ ಧ್ವನಿ ಪರಿಚಯವಿದ್ದಂತೆ ತೋರಿತು; ಆದರೆ ವ್ಯಕ್ತಿ ಪರಿಚಯ ಮಾತ್ರ ಆಗಲಿಲ್ಲ. ಲಲಿತೆಯು:— ''ಯಾರದು ''? ಎಂದಳು.

ಯಜಮಾನ:— ನಾನು ನಿನ್ನ ಪ್ರೀತಿಪಾತ್ರನು. ಸದಾ ನಿನ್ನ ಯೋಚನೆಯಲ್ಲಿಯೇ ಕಾಲವನ್ನು ಕಳೆಯುತ್ತಲಿರುವವನು.

ಲಲಿತೆಯು ಸ್ವಲ್ಪ ಹಸನ್ಮುಖಿಯಾಗಿ:—"ಯಾರು ಭಾಸ್ಕರನೆ?"

ಯಜಮಾನ:—ಅಲ್ಲ, ಅವನ ವೈರಿ!

ಲಲಿತೆಯು ಕೋಪವನ್ನು ತಾಳಿ:— ನನ್ನ ಪ್ರೀತಿಪಾತ್ರನಾದ ಭಾಸ್ಕರನ ವೈರಿ; ಛೀ, ತೊಲಗು!

ಯಜಮಾನ:— ಅಲ್ಲ. ಅವನ ಪರಮ ಮಿತ್ರ.

ಲಲಿತೆ:—ಆತನ ಪರಮ ಮಿತ್ರನೋ ಅಥವಾ ವೈರಿಯೋ? ನನ್ನನ್ನು ಇಲ್ಲಿಗೆ ಯಾಕೆ ತಂದಿರುವೆ?

ಯಜಮಾನ:—ನಾನು ನಿನ್ನನ್ನು ವರಿಸುವದಕ್ಕಾಗಿ.

ಈ ಮಾತನ್ನು ಕೇಳಿದೊಡನೆಯೇ ಲಲಿತೆಗೆ ಉಂಟಾದ ಕೋಪವನ್ನೂ, ದುಃಖವನ್ನೂ ವರ್ಣಿಸಲಾಸಾಧ್ಯ. ಆದರೂ ಕೋಪವು ಇಮ್ಮಡಿಯಾಗಿತ್ತು. ಆಗ ಅವಳ ಮುಖಭಾವವನ್ನು ನೋಡಿದ್ದರೆ, ಎಂಥ ಧೈರ್ಯವಂತನಾದರೂ ತತ್ತರಿಸಿ ಹೋಗುತಲಿದ್ದನು; ಆದರೆ ಕತ್ತಲೆಯಾದುದರಿಂದ ಯಜಮಾನನಿಗೆ ಆಕೆಯ ಮುಖವು ಕಾಣಲಿಲ್ಲ. ಲಲಿತೆಯು ಯಜಮಾನನಿಗೆ:—"ಮೂರ್ಖಾ, ನನ್ನನ್ನು ವರಿಸುವುದಕ್ಕಾಗಿ ಈ ರೀತಿಯಾಗಿ ಕಳ್ಳತನದಿಂದ ಹೊತ್ತು ತಂದಿರುವೆಯಾ? ನನ್ನ ಪ್ರೀತಿಪಾತ್ರರ ಸ್ನೇಹಿತನೆಂದು ಹೇಳುವೆ? ಆಗ ನಾನು ನಿನ್ನ ಸಹೋದರಿಯರ ಸಮಾನಳಾಗಲಿಲ್ಲವೆ? ಇರಲಿ. ನೀನು ಮೊದಲು ಇಲ್ಲಿಂದ ತೊಲಗು.

ಯಜಮಾನ: -ನೀನು ತೊಲಗೆಂದರೆ ನಾನು ಹೋಗುವೆನೆ? ಎಂದು ಹೇಳುತ್ತಾ, ಆ ಕತ್ತಲಿನಲ್ಲಿಯೇ ಮುಂದುವರಿದು ಲಲಿತೆಯ ಕೈ ಹಿಡಿದುಕೊಂಡನು. ಲಲಿತೆಯು ಬಹಳ ಕೋಪದಿಂದ ಯಜಮಾನನನ್ನು ಝಾಡಿಸಿ ಒದ್ದಳು. ಯಜಮಾನನಾದರೊ ಕೂಗಿಕೊಳ್ಳುತ್ತಾ ಕೆಳಗೆ ಬಿದ್ದನು.

ಹೊರಗಡೆ ನಿಂತಿದ್ದ ಅವನ ಕಡೆಯವರು ಬಂದು ಅವನನ್ನು ಹೊರಕ್ಕೆ ಎತ್ತಿಕೊಂಡು ಹೋಗಿ, ಕೊಠಡಿಗೆ ಬೀಗವನ್ನು ಹಾಕಿದರು. ಬಹಳ ಹೊತ್ತಾದ ಮೇಲೆ ಯಜಮಾನನಿಗೆ ಎಚ್ಚರವಾಯಿತು. ಸ್ವಲ್ಪ ಹೊತ್ತು ವಿಶ್ರಾಂತಿಯನ್ನು ತೆಗೆದುಕೊಂಡು, ಯಾರ ಹತ್ತಿರಲೂ ಮಾತನಾಡದೆ, ಏನೋ ಯೋಚನೆಯಿಂದ ಅಲ್ಲಿಂದ ಎದ್ದು ಹೊರಟನು. ಇತರರೂ ಅವನನ್ನು ಹಿಂಬಾಲಿಸಿದರು.

# ಅಧ್ಯಾಯ ೫

"ಭಾಸ್ಕರ, ನೀನು ಸುಮ್ಮನೆ ಈ ರೀತಿಯಾಗಿ ಖಿನ್ನಮನಸ್ಕನಾಗಿರಬೇಡ. ಯಾರೋ ದುರಾತ್ಮರು ನಮ್ಮ ಲಲಿತೆಯನ್ನು ಕಳ್ಳತನದಿಂದ ಹೊತ್ತು ಕೊಂಡು ಹೋಗಿರಬೇಕು. ಅವರನ್ನು ಹಿಡಿಯುವುದಕ್ಕಾಗಿ ಎಲ್ಲರೂ ತಕ್ಕ ಪ್ರಯತ್ನಗಳನ್ನು ಮಾಡೋಣ. ಯಾವ ಪ್ರಯತ್ನವನ್ನೂ ಮಾಡದೆ, ಹೀಗೆಯೆ ಯೋಚಿಸುತ್ತಾ ಕುಳಿತಿದ್ದರೆ ಏನು ಪ್ರಯೋಜನ" ಎಂದು ವಿಮಲೆಯು ಭಾಸ್ಕರನಿಗೆ ಸಮಾಧಾನವನ್ನು ಹೇಳುತಲಿದ್ದಳು.

ಭಾಸ್ಕರ:—ಅಮ್ಮಾ, ನಾನು ಸುಮ್ಮನೆ ಕುಳಿತಿರುವ ಕಾರಣವೇನೆಂದರೆ, ನನಗೆ ಈಗ ಏನು ಮಾಡಬೇಕೆಂಬುದೇ ಗೊತ್ತಾಗುವುದಿಲ್ಲ; ಅದಕ್ಕೇನು ಮಾಡುವುದು?

ವಿಮಲೆ:—ಭಾಸ್ಕರ, ಏನು? ನಿನಗೂ ಈ ರೀತಿಯಾಗಿ ಮನಸ್ಸು ಶೂನ್ಯವಾಗಿದೆಯೆ? ಈಗ ನೀನು ಪೋಲೀಸ ಠಾಣೆಗೆ ಹೋಗಿ, ಏನು ವಿಷಯ ನಡೆದಿದೆ ಎಂಬುದನ್ನು ತಿಳಿದುಕೊಂಡು ಬಾ.

ಭಾಸ್ಕರ:—ತಾಯಿ, ಈಗ ಮುಖ್ಯವಾಗಿ ನಾವು ಪೋಲೀಸಿಗೆ ಈ ವಿಚಾರವನ್ನು ತಿಳಿಸಿದ್ದರೂ, ಪತ್ತೆ ಮಾಡುವ ಕಾರ್ಯವು ಅವರಿಂದ ಆಗುವದೂ ಕಷ್ಟ. ಲಲಿತೆಯನ್ನು ಅಪಹರಿಸಿಕೊಂಡು ಹೋಗಿರುವ ಕಳ್ಳರು ದ್ರವ್ಯದ ಆಶೆಯನ್ನು ತೋರಿಸಿ, ಪತ್ತೆಗೆ ಹೆಚ್ಚಾಗಿ ಅವಕಾಶವನ್ನೂ ಕೊಡುವುದಿಲ್ಲ. ಆದುದರಿಂದ ಕಾರ್ಯವು ಹೇಗೆ ಜರುಗುವುದು?

ವಿಮಲೆ:—ಭಾಸ್ಕರ, ಈಗ ನಾವೂ ಅವರ ಜೊತೆಗೆ ಸಹಾಯ ಮಾಡುವುದುತ್ತಮ. ಮುಖ್ಯವಾಗಿ ನಮ್ಮ ಹುಡಿಗಿಯು ನಮಗೆ ಸಿಕ್ಕಿದರೆ ಸರಿ. ಯಾರು ಹುಡುಕಿದರೇನು?

ಭಾಸ್ಕರ: "ತಾಯಿ, ಹಾಗಾದರೆ ನಾನು ಪೋಲೀಸ ಠಾಣೆಯ ಹತ್ತಿರ ಹೋಗಿ ಬರುವೆನು" ಎಂದು ಹೇಳಿ, ಅಲ್ಲಿಂದ ಪೋಲೀಸ ಠಾಣೆಗೆ ಹೊರಟನು.

ಭಾಸ್ಕರನು ಪೋಲೀಸ ಠಾಣೆಗೆ ಹೋದಾಗ ಮಾಧವರಾಯರು ಪೋಲೀಸ ಇನ್‌ಸ್ಪೆಕ್ಟರರೊಡನೆ ಮಾತನಾಡುತ್ತಲಿದ್ದರು. ಭಾಸ್ಕರನು ಠಾಣೆಯೊಳಕ್ಕೆ ಬಂದೊಡನೆಯೇ ಮಾಧವರಾಯರು:-"ಭಾಸ್ಕರ, ಹೆಚ್ಚಿಗೆ ಸಂಗತಿಯೇನು?" ಎಂದು ಕೇಳಿದರು.

ಭಾಸ್ಕರ:-ಏನೂ ಇಲ್ಲ. ಪತ್ತೆ ಹಚ್ಚುವ ಕಾರ್ಯಗಳು ಎಲ್ಲಿಯು ವರೆಗೆ ನಡೆದಿವೆ? ಎಂಬುದನ್ನು ತಿಳಿದುಕೊಳ್ಳುವದಕ್ಕಾಗಿ ಬಂದಿರುತ್ತೇನೆ.

ಪೋಲೀಸ ಇನ್‌ಸ್ಪೆಕ್ಟರರನ್ನು ಕುರಿತು: "ಸ್ವಾಮೀ, ಈಗ ಕೆಲಸವು ಎಲ್ಲಿಯು ವರೆಗೆ ಬಂದಿದೆ?" ಎಂದನು.

ಪೋ. ಇನ್.:-ಭಾಸ್ಕರರಾಯರೇ, ನಾವು ಈಗ ಪೋಲೀಸಿನವರನ್ನು ಎಲ್ಲಾ ಕಡೆಗೂ ಹುಡುಕುವುದಕ್ಕಾಗಿ ಕಳುಹಿಸಿರುತ್ತೇವೆ. ಅದೂ ಅಲ್ಲದೆ, ಇತರೇ ಮುಖ್ಯ ಊರುಗಳಿಗೆಲ್ಲ ತಂತಿ ಕೊಟ್ಟಿರುತ್ತೇವೆ.

ಭಾಸ್ಕರ: ನೀವು ತಂತಿಯನ್ನು ಕೊಟ್ಟಿರುವಿರಿ; ಅಲ್ಲದೆ, ಪೋಲೀಸಿನವರನ್ನು ಎಲ್ಲ ದಿಕ್ಕಿಗೂ ಕಳುಹಿಸಿರುವಿರಿ? ಆದರೆ ಕಳ್ಳರ ನೆಲೆಯು ಅವರಿಗೆ ಹೇಗೆ ಗೊತ್ತಾಗುವುದು? ಯಾರ ಮೇಲಾದರೂ ಅನುಮಾನ ವಿದ್ದರೆ, ನೀವು ಆಗ ಅವರನ್ನು ಹಿಡತರಿಸಿ, ಪತ್ತೆ ಮಾಡಲು ಪ್ರಯತ್ನಿಸ ಬಹುದು; ಆದರೆ ಈಗ ಯಾರ ಮೇಲೂ ಅನುಮಾನವಿಲ್ಲ. ಅದಕ್ಕಾಗಿ ಮುಂದಿನ ಕಾರ್ಯಕ್ರಮವು ಹೇಗೆ? ಎಂದನು.

ಅಷ್ಟರಲ್ಲಿಯೇ ಒಬ್ಬ ಪೋಲೀಸ್ ಜವಾನನು ಬಂದು ಇನ್‌ಸ್ಪೆಕ್ಟರರಿಗೆ ಸಲಾಮು ಮಾಡಿ: "ನಾರಾಯಣರಾಯರು ಬಂದಿರುತ್ತಾರೆ" ಎಂದು ಹೇಳಿದನು. ಇನ್‌ಸ್ಪೆಕ್ಟರರು "ಅವರನ್ನು ಒಳಕ್ಕೆ ಬರಹೇಳು" ಎಂದರು. ನಾರಾಯಣರಾಯರು ಒಳಕ್ಕೆ ಬಂದು ಅಲ್ಲಿ ಹಾಕಿದ್ದ ಕುರ್ಚಿಯ ಮೇಲೆ ಕುಳಿತನು. ಇನ್‌ಸ್ಪೆಕ್ಟರರು:-ನಾರಾಯಣರಾಯರೇ, ಏನು ಇತ್ತ ಕಡೆ ಸವಾರಿ?

ನಾರಾಯಣ: ಏನೂ ಇಲ್ಲ. ಲಲಿತೆಯ ವಿಚಾರವಾಗಿ ತಿಳಿದು ಕೊಳ್ಳೋಣವೆಂದು ಬಂದೆ, ಎಂದು ಹೇಳುತ್ತಾ, ಸೋದರಮಾವನಾದ ಮಾಧವರಾಯರನ್ನು ಕುರಿತು: "ಏನಾದರೂ ಪತ್ತೆಯಾಯಿತೆ?" ಎಂದನು.

ಮಾಧವರಾಯರು ಉದಾಸೀನದಿಂದ: "ಏನೂ ಇಲ್ಲ. ನಾರಾಯಣ ರಾಯ, ಏನೇ ಆಗಲಿ ನೀವುಗಳೆಲ್ಲರೂ ಸೇರಿ ಪತ್ತೇ ಹಚ್ಚಬೇಕು. ಇಲ್ಲ ದಿದ್ದರೆ ಆ ದುರ್ಮಾರ್ಗರು ಏನು ಮಾಡುವರೋ?"

ನಾರಾಯಣ:— ನಾನೂ ಸಾಧ್ಯವಾದ ಮಟ್ಟಿಗೂ ಪ್ರಯತ್ನ ಪಡುತ್ತೇನೆ. ಅದಕ್ಕಾಗಿ ಸಾವಿರಾರು ರೂಪಾಯಿಗಳು ಖರ್ಚಾದರೂ ಚಿಂತೆಯಿಲ್ಲ; ಆದರೆ ಬಾಸ್ಕರನ, ನಿಮ್ಮ, ಅಲ್ಲದೆ ಪೋಲಿಸಿನವರ ಸಹಾ ಯವು ಬಹಳ ಅವಶ್ಯಕ. ನನಗೆ ಬೇಕಾದಾಗ ನೀವುಗಳು ಸಹಾಯ ಮಾಡಿ ದರೆ ಸಾಕು.

ಮಾಧವ:— ಅದಕ್ಕೇನು? ಎಲ್ಲರೂ ಸಿದ್ಧ.

ಭಾಸ್ಕರನು ನಡುವೇ ಬಾಯಿ ಹಾಕಿ: "ನಾನೂ ಸಹ ಹುಡುಕುವು ದಕ್ಕೆ ಹೊರಡುತ್ತೇನೆ. ನೀನೂ ಹೊರಡು. ಇಬ್ಬರೂ ಪ್ರಯತ್ನಪಡೋಣ"

ನಾರಾಯಣ: ಭಾಸ್ಕರ, ಇಂಥಾ ಕೆಲಸಗಳಿಗೆಲ್ಲಾ ದುಡ್ಡು ಹೆಚ್ಚಾಗಿ ಖರ್ಚು ಮಾಡಬೇಕು. ನಾನು ಈ ವಿಷಯದಲ್ಲಿ ಸ್ವಲ್ಪವೂ ಹಿಂತೆ ಗೆಯುವುದಿಲ್ಲ. ನೀನು ಮಾತ್ರ ನಾನು ಸಹಾಯ ಕೋರಿದಾಗ ಬಂದರೆ ಸಾಕು.

ಇನ್‌ಸ್ಪೆಕ್ಟರ್:— ನೀವು ಯಾರು ಬೇಕಾದರೂ ಪ್ರಯತ್ನ ಪಡಿ. ನಾವು ಸಹಾಯ ಮಾಡಲು ಸಿದ್ಧರಾಗಿದ್ದೇವೆ.

ಮಾಧವ: ನೀವು ದುಡ್ಡಿನ ವಿಷಯದಲ್ಲಿ ಹೆಚ್ಚಾಗಿ ಯೋಚಿಸ ಬೇಕಾಗಿಲ್ಲ ನಾನು ನಿಮಗೆ ಎಷ್ಟು ಬೇಕಾದರೂ ಕೊಡುವೆನು. ನಮ್ಮ ಹುಡುಗಿ ಸಿಕ್ಕಿದರೆ ಸಾಕು.

ನಾರಾಯಣ:— ಹಾಗಾದರೆ, ನಾನು ಈ ದಿನದಿಂದಲೇ ಪ್ರಯತ್ನಿ ಸುತ್ತೇನೆ. ಭಾಸ್ಕರನನ್ನು ಮಾತ್ರ ನಾನು ಹೇಳಿಕಳುಹಿಸಿದಾಗ ಕಳು ಹಿಸು. ಅಲ್ಲದೆ, ನಾನು ಒಂದು ಕಡೆ ಹುಡುಕಿಕೊಂಡು ಕೆಲಸಕ್ಕೆ ಪ್ರಾರಂಭ ಮಾಡಿದರೆ, ಅವನೂ ಪತ್ತೆ ಮಾಡುತ್ತಾ ಹೊರಟರೆ, ಕೆಲಸವು ಕೆಟ್ಟು ಹೋಗಬಹುದು.

ಭಾಸ್ಕರ:— ಕೆಲಸವು ಕೆಟ್ಟು ಹೋಗುವದೂ ಇಲ್ಲ. ಏನೂ ಇಲ್ಲ.

ಇನ್ನೂ ಚೆನ್ನಾಗಿ ಆಗುವುದು.

ನಾರಾಯಣನು ಇನ್‌ಸ್ಪೆಕ್ಟರರನ್ನು ಕುರಿತು:— "ಇನ್‌ಸ್ಪೆಕ್ಟರೇ, ನನಗೆ ನಂಬಿಗಸ್ಥರಾಗಿರುವ ನಾಲ್ಕು ಜನ ಪೋಲೀಸಿನವರನ್ನು ನಾನು ಈಗ ಚುನಾಯಿಸಿಕೊಳ್ಳುವೆನು. ಇನ್ನು ಅವರನ್ನು ನನ್ನ ಇಷ್ಟಾನುಸಾರವಾಗಿ ತರಬೇತು ಮಾಡಿಕೊಂಡು ಕೆಲಸವನ್ನು ಪ್ರಾರಂಭಿಸುವೆನು. ಇನ್ನು ನನಗೆ ಹೊರಡಲು ಅಪ್ಪಣೆಯನ್ನು ಕೊಡಿ" ಎಂದು ಹೇಳಿ ಎದ್ದನು. ಪುನಃ "ಸ್ವಾಮಿ ಇನ್‌ಸ್ಪೆಕ್ಟರೇ, ಇನ್ನೊಂದು ಮಾತನ್ನು ಹೇಳುವದು ಮರೆತೆ. ಆ ಐದು ಜನ ಪೋಲೀಸಿನವರೊಂದಿಗೆ ಒಬ್ಬನಿಗಾಗುವ ಪೋ-ಲೀಸ್ ದಿರುಸನ್ನು ಹೆಚ್ಚಾಗಿ ಕೊಟ್ಟಿರ್ರಿ. ಸಮಯದಲ್ಲಿ ಉಪಯೋಗಿಸ ಬೇಕಾಗುತ್ತೆ" ಎಂದು ಹೇಳಿ ಮಾಧವರಾಯರಿಗೂ, ಇನ್‌ಸ್ಪೆಕ್ಟರರಿಗೂ ವಂದಿಸಿ, ಹೊರಟು ಹೋದನು.

ಅವನು ಹೊರಟು ಹೋದ ಮೇಲೆ ಸ್ವಲ್ಪ ಹೊತ್ತಿನವರೆಗೆ ಮಾಧವ ರಾಯರೂ, ಇನ್‌ಸ್ಪೆಕ್ಟರರೂ ಮಾತನಾಡುತ್ತಿದ್ದು, ಊಟದ ಹೊತ್ತು ಬಂದುದರಿಂದ ಎಲ್ಲರೂ ಎದ್ದರು.

ಸಾಯಂಕಾಲ ನಾರಾಯಣರಾಯನು ಪೋಲೀಸ್ ಇನ್‌ಸ್ಪೆಕ್ಟರನ್ನು ಕಾಣುವದಕ್ಕಾಗಿ ಅವರ ಮನೆಗೆ ಹೋದನು. ಇನ್‌ಸ್ಪೆಕ್ಟರರು ಆಗ ತಾನೇ ಕಚೇರಿಯಿಂದ ಮನೆಗೆ ಬಂದು ವಿಶ್ರಮಿಸಿಕೊಳ್ಳುತ್ತಿದ್ದರು. ನಾರಾಯಣರಾಯನು ಬಂದ ಸಂಗತಿಯನ್ನು ಕೇಳಿ, ಇನ್‌ಸ್ಪೆಕ್ಟರರು ಕೆಳಗಿನ ಹಜಾರಕ್ಕೆ ಬಂದು ಕುಳಿತರು. ನಾರಾಯಣರಾಯನೂ ಬಂದು ಕುಳಿತನು. ಇಬ್ಬರಿಗೂ ಬಹಳ ಹೊತ್ತು ಮಾತು-ಕಥೆಗಳು ನಡೆದವು. ಕೊನೆಗೆ ಇನ್‌ಸ್ಪೆಕ್ಟರು:—

"ರಾಯರೇ, ತಮ್ಮ ಇಷ್ಟಾನುಸಾರವಾಗಿ ತಾವು ಹೇಳಿದ ಐದು ಜನ ಪೋಲೀಸಿನವರಿಗೆ ಹುಕುಂ ಕೊಟ್ಟಿರುತ್ತೇನೆ. ಅವರು ನೀವು ಹೇಳಿದ ಹಾಗೆ ಕೇಳಿಕೊಂಡು ಕೆಲಸ ಮಾಡುವರು. ಅವರು ಏನಾದರೂ ವ್ಯತ್ಯಾಸವಾಗಿ ನಡೆದರೆ, ನನಗೆ ತಿಳಿಸಿ. ನಾನು ಅವರಿಗೆ ತಕ್ಕ ಶಿಕ್ಷೆ ಮಾಡುವೆನು; ಅದೂ ಅಲ್ಲದೆ, ಅವರ ಹತ್ತಿರ ಹೆಚ್ಚಾಗಿ ಒಂದು ಪೋಲೀಸ

ದಿರುಸನ್ನೂ ಕೊಟ್ಟಿರುತ್ತೇನೆ. ಅದನ್ನು ನೀವು ಉಪಯೋಗಿಸಿಕೊಳ್ಳ ಬಹುದು; ಎಂದು ಹೇಳಿದ ಮೇಲೆ ಇಬ್ಬರೂ ಎದ್ದರು.

ನಮ್ಮ ಪಾಠಕ ಮಹಾಶಯರಿಗೆ ಈ ನಾರಾಯಣರಾಯನಾರೋ, ಎಂಬುದನ್ನು ಪರಿಚಯ ಮಾಡಿಸಬೇಕಾಗಿಲ್ಲ. ಈತನೇ ಮಾಧವರಾಯರ ಅಕ್ಕನ ಮಗ.

---

## ಅಧ್ಯಾಯ ೬

ಶಾಮರಾಯರೆಂಬುವವರು ಈಗ ರಿಟೈರಾದ ಪೋಲೀಸ್ ಇನ್ಸ್ಪೆಕ್ಟರರು. ಇವರು ಕೆಲಸದಲ್ಲಿದ್ದಾಗ ಬಹಳ ಪ್ರಖ್ಯಾತರಾಗಿದ್ದರು. ಪತ್ತೆದಾರಿ ಕೆಲಸದಲ್ಲಿ ನಿಪುಣರು. ಎಂಥಾ ಕಷ್ಟಕರವಾದ ಪತ್ತೆ ಹಚ್ಚುವ ಕಾರ್ಯಗಳು ಬಂದರೂ, ಯಾವ ತೊಂದರೆಯೂ ಇಲ್ಲದೆ ಕಂಡು ಹಿಡಿಯುತಲಿದ್ದರು. ಒರಿಯ ಊಹೆಯಿಂದಲೇ ಕುಳಿತೆಡೆಯಲ್ಲಿಯೋ, ಇಂಥವರು ಈ ಕಾರ್ಯವನ್ನು ಮಾಡಿರುವರೆಂದು ಹೇಳುವಷ್ಟು ಸಾಮರ್ಥ್ಯವು ಇವರಿಗಿದ್ದಿತು!

ಹೀಗಿರುವಲ್ಲಿ ಇವರನ್ನು ಕಾಣಲೋಸುಗ ಭಾಸ್ಕರನು ಒಂದು ದಿನ ಬಂದನು. ಶಾಮರಾಯರು ಇವನು ಬಂದದ್ದನ್ನು ನೋಡಿ, ಯಾವದೋ ಮಹತ್ಕಾರ್ಯಕ್ಕೆ ಬಂದಿರಬಹುದೆಂದು ಒಳಕ್ಕೆ ಕರೆದುಕೊಂಡು ತಮ್ಮ ಕೊಠಡಿಗೆ ಹೋದರು. ಅನಂತರ ಭಾಸ್ಕರನನ್ನುದ್ದೇಶಿಸಿ: ''ಸ್ವಾಮಿ, ತಾವು ಯಾವದೋ ಮಹತ್ಕಾರ್ಯಕ್ಕಾಗಿ ಬಂದಿರುವ ಹಾಗೆ ಕಾಣುತ್ತದೆ? ತಮ್ಮ ಮನೆಯಲ್ಲಿ ಯಾರೋ ಅಪಹೃತರಾಗಿರುವರೋ?'' ಎಂದರು.

ಭಾಸ್ಕರ: ಹೌದು. ನಮ್ಮ ಸೋದರಮಾವನವರಾದ ಮಾಧವರಾಯರ ಮಗಳನ್ನು ಯಾರೋ ಅಪಹರಿಸಿರುವರು.

ಶಾಮರಾಯ:—ತಮ್ಮ ಹೆಸರೇನು?

ಭಾಸ್ಕರ: —ನನ್ನ ಹೆಸರು ಭಾಸ್ಕರ.

ಶಾ:—ಅಪಹೃತಳಾಗಿರುವಾಕೆಯ ವಯಸ್ಸೆಷ್ಟು?

ಭಾ: —ಹದಿನೈದು ವರುಷವಿರಬಹುದು.

ಶಾ: —ಇನ್ನೂ ಮದುವೆಯಾಗಿಲ್ಲವೋ?

ಭಾ: —ಇಲ್ಲ.

ಶಾ: —ಮದುವೆಯೇನಾದರೂ ನಿಷ್ಕರ್ಷೆಯಾಗಿದ್ದಿತೋ?

ಭಾ: —ಆಗಿದ್ದಿತು. ಮದುವೆಯ ಹಿಂದಿನ ದಿನ ರಾತ್ರಿಯೇ, ಆ ಹುಡುಗಿಯನ್ನು ಯಾರೋ ಅಪಹರಿಸಿರುವರು.

ಶಾ: ಈ ಹುಡುಗಿಯನ್ನು ಯಾರಿಗೆ ಕೊಡಬೇಕೆಂದು ನಿರ್ಧರಿಸಿದ್ದರು?

ಭಾ: —ನನಗೇ ಕೊಡಬೇಕೆಂದಿದ್ದರು.

ಶಾ. —ಆ ಹುಡುಗಿಗೆ ಇದು ಸಮ್ಮತವಾಗಿದ್ದಿತೋ?

ಭಾ: —ಸಮ್ಮತವಾಗಿದ್ದಿತು.

ಶಾ: —ಆ ಹುಡುಗಿಯನ್ನು ಮತ್ಯಾರಾದರೂ ಪ್ರೀತಿಸುತಲಿದ್ದರೊ?

ಭಾ: —ಕಾಣಲಿಲ್ಲ.

ಶಾ: —ಕಾಣಲಿಲ್ಲವೆಂದರೆ, ನಿಮಗೆ ಆ ವಿಚಾರವು ಸರಿಯಾಗಿ ಗೊತ್ತಿಲ್ಲವೋ?

ಭಾ: —ಗೊತ್ತಿಲ್ಲ.

ಶಾ: —ಹಾಗಾದರೆ ಯಾರೊ ಅವಳನ್ನು ಪ್ರೀತಿಸುತಲಿದ್ದು, ಅವಳ ಮದುವೆಗೆ ವಿಘ್ನ ಮಾಡಿ ಹೊತ್ತುಕೊಂಡು ಹೋಗಿರಬೇಕು. ಅದು ಹೋಗಲಿ. ಈಗ ತಮಗೆ ನನ್ನಿಂದೇನಾಗಬೇಕು?

ಭಾ: —ಆ ಹುಡುಗಿಯನ್ನು ಹುಡುಕುವುದಕ್ಕೆ ತಮ್ಮ ಸಹಾಯವು ಬೇಕು.

ಶಾ: —ಯಾಕೆ? ಪೋಲೀಸಿನವರಿಗೆ ತಿಳಿಸಿ. ಅವರು ಹುಡುಕುವರು.

ಭಾಸ್ಕರ: —ತಿಳಿಸಿದುದಾಯಿತು. ಏನೂ ಪ್ರಯೋಜನವಾಗುವ ಹಾಗೆ ಕಾಣುವುದಿಲ್ಲ.

ಶಾ: —ಹಾಗಾದರೆ, ನನ್ನ ಹತ್ತಿರ ಸೀತಾರಾಮನೆಂಬ ಶಿಷ್ಯನಿರುವನು. ಅವನು ಪತ್ತೆ ಹಚ್ಚುವ ಕೆಲಸದಲ್ಲಿ ಇತ್ತೀಚೆಗೆ ಬಹು ನಿಪುಣ

ನಾಗುತ್ತ ಇದ್ದಾನೆ. ಅವನನ್ನು ನಿಮ್ಮ ಸಹಾಯಕ್ಕೆ ಕಳುಹಿಸುತ್ತೇನೆ. ಹುಡುಕುವುದಕ್ಕೆ ಪ್ರಯತ್ನಿಸಿ. ಆಗಾಗ ಬಂದು ನನಗೆ ಸಮಾಚಾರವನ್ನು ತಿಳಿಸಿದರೆ, ಮುಂದಿನ ಆಲೋಚನೆಯನ್ನು ಮಾಡೋಣ.

ಭಾ:-ಆಗಬಹುದು. ಹೇಗಾದರೂ ತಮ್ಮ ಸಹಾಯದಿಂದ ಈ ಕಾರ್ಯವನ್ನು ಸಾಧಿಸಬೇಕು. ಇನ್ನು ನಾನು ಹೊರಡುವೆನು, ಎಂದು ಹೇಳಿ ಅಲ್ಲಿಂದ ಹೊರಟು ಹೋದನು.

ಹೀಗಿರುವಲ್ಲಿ ಒಂದು ದಿನ ರಾತ್ರಿ ಸುಮಾರು ಎರಡು ಗಂಟೆಯ ಹೊತ್ತಿನಲ್ಲಿ ಓರ್ವ ಹಕ್ಕಿ ಶಕುನ ಹೇಳುವ ಬುಡುಬುಡುಕೆಯವನು ತನ್ನ ಮೈಮೇಲೆ ಹರಕುಬಟ್ಟೆಗಳನ್ನು ಹಾಕಿಕೊಂಡು, ಕಂಕುಳಲ್ಲಿ ಒಂದು ದಪ್ಪ ದೋಕ್ಷೆಯನ್ನು ಇಟ್ಟುಕೊಂಡು, ಎಡಗೈಯಲ್ಲಿ ಒಂದು ಕಂದೀಲು ಹಿಡಿದು, ಬಲಗೈಯಲ್ಲಿ ಬುಡುಬುಡುಕೆಯನ್ನು ಆಡಿಸುತ್ತಾ, ರಾಗವಾಗಿ ಏನೇನೊ ಕೂಗುತ್ತಾ ರಾಮಚಂದ್ರಪುರದ ಮುಖ್ಯ ಬೀದಿಯಲ್ಲಿ ಬರುತ್ತಿದ್ದನು. ಆ ಸಮರಾತ್ರಿಯಲ್ಲಿ ಅನೇಕರು ಎದ್ದು ಬಂದು ಅವನಿಗೆ ವಿಧವಿಧವಾದ ಪ್ರಶ್ನೆಗಳನ್ನು ಹಾಕುತ್ತಾ ಅವುಗಳಿಗೆಲ್ಲ ಹಕ್ಕಿಯನ್ನು ಕೇಳಿ, ಉತ್ತರವನ್ನು ಪಡೆದು, ಮಾರನೆಯ ದಿನ ತಿಳಿಸಬೇಕೆಂದು ಕೇಳಿಕೊಳ್ಳುತ್ತಿದ್ದರು. ಅವನು ಅವರುಗಳಿಗೆಲ್ಲ ಸಮಂಜಸವಾದ ಉತ್ತರವನ್ನು ಹೇಳುತ್ತಾ ಮುಂದೆ ನಡೆದನು. ಸ್ವಲ್ಪ ದೂರದಲ್ಲಿಯೇ ಮೂವರು ಯಾವುದೋ ಮಾತನಾಡುತ್ತಾ ಹೋಗುತ್ತಿದ್ದರು. ಹಿಂದೆ ಬುಡುಬುಡುಕೆಯವನು ಬರುತ್ತಿದ್ದುದನ್ನು ಕಂಡು ತಮ್ಮ ಮಾತನ್ನು ನಿಲ್ಲಿಸಿದರು. ಕಗ್ಗತ್ತಲೆಯಾದುದರಿಂದ ಬುಡುಬುಡುಕೆಯವನು ದೀಪವನ್ನು ಹೊತ್ತಿಸಿಕೊಂಡು ಹೋಗುತಲಿದ್ದನು. ಆ ಮೂವರು ಪಥಿಕರು ಯಾವ ಮಾತನ್ನೂ ಆಡದೆ, ಆ ದೀಪದ ಬೆಳಕಿನಲ್ಲಿಯೇ ಸ್ವಲ್ಪ ದೂರ ಹೋಗಿ, ಒಂದು ಅಡ್ಡದಾರಿಗೆ ತಿರುಗಿದರು. ಅವರು ತಿರುಗಿ ಮುಂದಕ್ಕೆ ಹೋದೊಡನೆಯೆ ಆ ಬುಡುಬುಡುಕೆಯವನು ದೀಪವನ್ನು ಆರಿಸಿ, ತನ್ನ ಮೈ ಮೇಲಿದ್ದ ಬಟ್ಟೆಗಳನ್ನೆಲ್ಲ ತೆಗೆದು, ಗಂಟು ಕಟ್ಟಿಕೊಂಡು ಅವರನ್ನು ಹಿಂಬಾಲಿಸಿದನು. ಆ ಮೂವರೂ ಬಹಳ ದೂರ ಹೋಗಿ, ಒಂದು ಮನೆ ಮುಂದೆ ನಿಂತರು. ಮನೆಯ ಬಾಗಿಲಿಗೆ

ಬೀಗ ಹಾಕಿದ್ದುದರಿಂದ, ಅದನ್ನು ತೆಗೆದು, ಬಾಗಿಲನ್ನು ಸ್ವಲ್ಪ ಶಬ್ದ ಮಾಡಲು, ಯಾರೋ ಬಂದು ತೆರೆದರು. ಬಾಗಿಲು ತೆರೆದ ಕೂಡಲೆ ಒಳಗೆ ಹೊತ್ತಿಸಿಟ್ಟಿದ್ದ ದೀಪವು ಗಾಳಿಯಿಂದ ಆರಿಹೋಯಿತು. ಆ ಮೂವರೂ ಮನೆಯನ್ನು ಪ್ರವೇಶಿಸಿದರು. ಅವರ ಹಿಂದೆ ಆ ಬುಡುಬುಡಿಕೆಯುವನೂ ಹೊರಟನು. ತಮ್ಮವರಲ್ಲಿ ಇವನೂ ಒಬ್ಬನೆಂದು ತಿಳಿದು, ಬಾಗಿಲು ತೆಗೆದವನು ನಾಲ್ವರೂ ಒಳಕ್ಕೆ ಹೋದ ಮೇಲೆ ಬಾಗಿಲನ್ನು ಹಾಕಿಕೊಂಡು ತನ್ನ ಸ್ಥಳಕ್ಕೆ ಹೋಗಿ ಮಲಗಿದನು. ಈ ಮೂವರನ್ನು ಹಿಂಬಾಲಿಸಿದ ಆ ಬುಡುಬುಡುಕೆಯುವನು, ಅವರು ಹಂತವನ್ನು ಹತ್ತಿ ಹೋಗಿ, ಮೇಲಿನ ಕೊಠಡಿಯನ್ನು ಪ್ರವೇಶಿಸಿ, ಬಾಗಿಲನ್ನು ಹಾಕಿಕೊಳ್ಳುವವರೆಗೂ ಸುಮ್ಮನೆ ಒಂದು ಕಡೆ ನಿಂತಿದ್ದನು. ಅನಂತರ ಬಾಗಿಲು ತೆರೆದವನ ಹತ್ತಿರ ಹೋಗಿ ಕುಳಿತು, ತನ್ನ ಹತ್ತಿರಿದ್ದ 'ಕ್ಲೋರೊಫಾರ್ಮ'ನ್ನು ಅವನ ಮೂಗಿಗೆ ಹಿಡಿದನು. ಅವನು ಚಲಿಸದೆಯೇ ಬಿದ್ದದ್ದನ್ನು ನೋಡಿ, ಅವನ ದಿರುಸನ್ನೆಲ್ಲ ತಾನು ಹಾಕಿಕೊಂಡು ತನ್ನ ದಿರುಸನ್ನೆಲ್ಲ ಒಂದು ಮೂಲೆಯಲ್ಲಿ ಬೇಗ ಸಿಕ್ಕುವ ಹಾಗೆ ಇಟ್ಟುಕೊಂಡು, ಮೇಲಿನ ಕೊಠಡಿಯ ಬಾಗಿಲದ ಹತ್ತಿರ ಹೋಗಿ ನಿಂತನು. ಒಳಗಿದ್ದವರು ಸ್ವಲ್ಪ ಹೊತ್ತಿನ ವರೆಗೆ ಯಾರೂ ಮಾತನಾಡಲಿಲ್ಲ. ಅವರಲ್ಲೊಬ್ಬನು:— "ರಾಮಾ ರಾಮಾ" ಎಂದು ಗಟ್ಟಿಯಾಗಿ ಕೂಗಿದನು. ರಾಮನ ಹೆಸರು ಬಾಗಿಲು ತೆರೆದವನದೇ, ಎಂದು ಆ ಬುಡುಬುಡುಕೆಯುವನು ಊಹಿಸಿ, ಬಾಗಿಲನ್ನು ತಟ್ಟಿದನು. ಅನಂತರ ಒಳಹೊಕ್ಕು ಸುಮ್ಮನೆ ನಿಂತನು. ಯಾರಿಗೂ ಆ ಕೃತ್ರಿಮ ವೇಷವು ಗೊತ್ತಾಗಲಿಲ್ಲ. ಆಗ ಅವರಲ್ಲೊಬ್ಬನು:— "ಹೆಚ್ಚಿಗೆ ಸಂಗತಿಗಳೇನಾದರೂ ಉಂಟೆ?"ಎಂದು ಕೇಳಿದನು. ಕೃತ್ರಿಮ ರಾಮನು: 'ಏನೂ ಇಲ್ಲ'ವೆಂದು ಉತ್ತರಕೊಡಲು, 'ನೀನು ಹೋಗು' ಎಂದು ಅವರು ಹೇಳಲು, ಅಲ್ಲಿಂದ ಬಾಗಿಲನ್ನು ಮುಚ್ಚಿಕೊಂಡು ಹೊರಕ್ಕೆ ಬಂದು, ಅಲ್ಲಿಯೇ ಅವರಿಗೆ ಕಾಣದ ಹಾಗೆ ನಿಂತು, ಅವರ ಮಾತುಗಳನ್ನು ಕೇಳಲಾರಂಭಿಸಿದನು.

ಒಬ್ಬನು: "ಅಪೂರ್, ನಮ್ಮ ಪ್ರಥಮ ಕಾರ್ಯವು ನಿರ್ವಿಘ್ನವಾಗಿ

ನಡೆಯಿತು. ಆದರೆ ಲಲಿತೆಯು ನಾವು ಹೇಳುವ ಹಾಗೆ ಕೇಳುವುದಿಲ್ಲವಲ್ಲ?''

ಮತ್ತೊಬ್ಬ:— ಹೌದು. ಸ್ತ್ರೀಯರನ್ನು ಮಾತನಾಡಿಸುವುದು ಬಹು ಕಷ್ಟ. ನಾವುಗಳು ಸ್ವಲ್ಪ ಹೆಚ್ಚು ಮಾತನಾಡಿದರೆ ಪ್ರಾಣವನ್ನೇ ಕಳೆದುಕೊಳ್ಳುವರು. ಪ್ರಾಣಕಳೆದುಕೊಳ್ಳುವುದಕ್ಕೆ ಯಾವ ಆಯುಧವೂ ಸಿಕ್ಕದಿದ್ದರೆ, ಉಪವಾಸವನ್ನಾದರೂ ಮಾಡಿಯೊ, ಅಥವಾ ಕೊನೆಗೆ ತಮ್ಮ ತಲೆಕೂದಲನ್ನೇ ಕತ್ತಿಗೆ ಭದ್ರವಾಗಿ ಕಟ್ಟಿಕೊಂಡೋ ಪ್ರಾಣ ಕಳೆದುಕೊಳ್ಳುವರು. ನಾವು ಬಲಾತ್ಕಾರ ಮಾಡಲಾಗದು. ಉಪಾಯ ದಿಂದಲೇ ಕಾರ್ಯಸಾಧನೆ ಮಾಡಿಕೊಳ್ಳಬೇಕು.

ಅಪೂರ್: ನರಸಿಂಗ, ನೀವು ಹೇಳುವುದೂ ಸಹಜ. ಅದಕ್ಕೆ ಏನು ಮಾಡುವುದು?

ನರಸಿಂಗ:— ನಾನು ಒಂದು ಉಪಾಯವನ್ನು ಹೇಳುವೆನು; ಅದು ಸಮಂಜಸವಾಗಿ ಕಂಡು ಬಂದರೆ, ಮಾಡಬಹುದು.

ಮೊದಲು ಮಾತು ಪ್ರಾರಂಭ ಮಾಡಿದ ಯಜಮಾನನು ನರಸಿಂಗ ನನ್ನು ಕುರಿತು:—''ಅದುಏನು? ಹೇಳು. ಅದನ್ನು ನಾಳೆಯೇ ಮಾ- ಡೋಣ.'' ಎಂದನು

ನರಸಿಂಗ: ಭಾಸ್ಕರನು ಬರೆದ ಹಾಗೆ ಪತ್ರಗಳನ್ನು ಬರೆದು, ನಾವು ಅವಳಿಗೆ ಉಪಾಯಾಂತರದಿಂದ ಆಗಾಗ ತಲಿಪಿಸುತ್ತಾ ಇದ್ದರೆ, ಅವಳು ತನ್ನ ಬಿಡುಗಡೆಯು ಎಂದಾದರೂ ಆಗಬಹುದೆಂದು ಅನ್ನ-ನೀರು ಗಳನ್ನು ಬಿಡದೆ ಇರುವಳು. ಅನಂತರ ನಾವು ಬೇರೆ ಉಪಾಯ ಮಾಡಿ, ಅವಳನ್ನು ಸ್ವಾಧೀನಪಡಿಸಿಕೊಳ್ಳೋಣ.

ಯಜಮಾನನಿಗೆ ಇದು ಸಮಂಜಸವಾಗಿ ಕಂಡಿತು; ಆದರೆ ''ಅದನ್ನು ತಲುಪಿಸುವವರು ಯಾರು?'' ಎಂದನು.

ನರಸಿಂಗ: ಗೋಪಾಲರಾಯರೇ, ತಾವು ಅದನ್ನು ಬರೆದು ಕೊಡಿ. ತಲುಪಿಸುವದು ನನ್ನ ಭಾರ.

ಯಜಮಾನನು, ಭಾಸ್ಕರನು ಬರೆದ ಹಾಗೆ ಒಂದು ಪತ್ರವನ್ನು ಬರೆದು ಅದನ್ನು ನರಸಿಂಗನ ಕೈಗೆ ಕೊಟ್ಟನು. ಅನಂತರ ಎಲ್ಲರೂ ಎದ್ದರು ಅವರೆಲ್ಲರೂ ಎದ್ದ ಶಬ್ದವನ್ನು ಕೇಳಿ ಕೃತ್ರಿಮ ರಾಮನು

ಹೋಗಿ, ನಿಜವಾದ ರಾಮನನ್ನು ಮಗ್ಗುಲಲ್ಲಿಯೇ ಇದ್ದ ಒಂದು ಕೋಣೆ ಯಲ್ಲಿ ಮಲಗಿಸಿ, ಅವರೆಲ್ಲರೂ ಕೆಳಕ್ಕೆ ಬರುವದನ್ನೇ ಕಾದಿದ್ದನು. ಅವ ರೆಲ್ಲರೂ ಬಂದನಂತರ ಅವರಿಗೆ ದೀಪವನ್ನು ತೋರಿಸಲು, ಎಲ್ಲರೂ ಹೊ- ರಕ್ಕೆ ಹೊರಡುವದರಲ್ಲಿದ್ದರು. ಅಷ್ಟರಲ್ಲಿ ಯಜಮಾನನು ನರಸಿಂಗ ನನ್ನು ಕೂಗಿ: "ನರಸಿಂಗಾ, ಅದನ್ನು ನಾಳೆ ಮಧ್ಯಾಹ್ನವೇ ತಿಳಿಪಿಸು," ಎಂದು ಹೇಳುತ್ತಾ ಹೊರಕ್ಕೆ ಹೋದನು. ಕೃತ್ರಿಮ ರಾಮನ ಸಿನಹ ಎಲ್ಲರೂ ಅವನನ್ನು ಹಿಂಬಾಲಿಸಿದರು. ಅವರು ಹೊರಟು ಹೋಗುವ ದನ್ನೇ ಕಾದುಕೊಂಡಿದ್ದ ಕೃತ್ರಿಮ ರಾಮನು ತನ್ನ ಬುಡುಬುಡುಕೆಯ ಬಟ್ಟೆಗಳನ್ನೆಲ್ಲಾ ಮತ್ತೆ ಹಾಕಿಕೊಂಡು ರಾಮನ ಬಟ್ಟೆಗಳನ್ನೆಲ್ಲಾ ಒಂದು ಗಂಟು ಕಟ್ಟಿ ತೆಗೆದುಕೊಂಡು, ಆ ಮನೆಯನ್ನೆಲ್ಲಾ ತನ್ನ ಹತ್ತಿರವಿದ್ದ ಬ್ಯಾಟರೀ ದೀಪದ ಸಹಾಯದಿಂದ ಪರೀಕ್ಷಿಸಿ, ಮನೆಯ ಹಿಂಭಾಗಕ್ಕೆ ಹೋಗಿ ಬಾಗಿಲನ್ನು ತೆರೆದುಕೊಂಡು, ಅಲ್ಲಿಂದ ಮನೆಯ ಮುಂಭಾಗಕ್ಕೆ ಬಂದು ಅಲ್ಲಿ ಔತಿಟ್ಟಿದ್ದ ಕಂದೀಲನ್ನು ಹತ್ತಿಸಿಕೊಂಡು, ಮನೆಯ ನಂಬ ರನ್ನು ಗುರ್ತುಮಾಡಿಕೊಂಡು, ಲಗುಬಗೆಯಿಂದ ತನ್ನ ಗುಪ್ತ ವೇಷದಲ್ಲಿ ಯೇ ಊರನ್ನೆಲ್ಲಾ ಸುತ್ತಿ, ಕೊನೆಗೆ ಶಾಮರಾಯರ ಮನೆಯ ಹತ್ತಿರಕ್ಕೆ ಬಂದನು. ಆಗ ಬೆಳಗಿನ ಜಾವ. ಸುಮಾರು ಐದು ಗಂಟೆಯ ಸಮಯ ವಾಗಿತ್ತು. ಶಾಮರಾಯರು ಇನ್ನೂ ಎದ್ದಿರಲಿಲ್ಲ. ಬುಡುಬುಡುಕೆಯ ವನು ಬಂದ ಶಬ್ದವನ್ನು ಕೇಳಿ, ಶಾಮರಾಯರ ಹೆಂಡತಿಯು ಅವನನ್ನು ಪ್ರಶ್ನೆ ಕೇಳುವದಕ್ಕಾಗಿ ಹೊರಕ್ಕೆ ಬಂದಳು. ಆಕೆ ಬಂದದ್ದನ್ನು ನೋಡಿ ಅವನು ಬೇರೆ ಯಾವ ಕಡೆಗೊ ಹೋಗುವ ಹಾಗೆ ನಟಿಸಿದನು. ಆಗ ಶಾಮರಾಯರ ಪತ್ನಿಯು ಅವನನ್ನು ಕೂಗಿ ಪ್ರಶ್ನೆ ಕೇಳಲಾರಂಭಿಸಿದಳು. ಆ ಸಮಯಕ್ಕೆ ಸರಿಯಾಗಿ ಶಾಮರಾಯರೂ ಎದ್ದು ಹೊರಕ್ಕೆ ಬಂದರು. ಆಗ ಬುಡುಬುಡುಕೆಯವನು ಶಾಮರಾಯರನ್ನು ಕುರಿತು: "ಸ್ವಾಮಿ, ಅಮ್ಮನವರು ನನ್ನನ್ನು ಕೆಲವು ಪ್ರಶ್ನೆ ಕೇಳಿದರು. ಅವುಗಳಿಗೆಲ್ಲಾ ಉತ್ತ ರವನ್ನು ಹೇಳಿರುತ್ತೇನೆ. ಅದಕ್ಕೇನಾದರೂ ಬಹುಮಾನವನ್ನು ಕೊಡಿ" ಎಂದನು. ಅಷ್ಟರಲ್ಲಿಯೇ ಶಾಮರಾಯರ ಪತ್ನಿಯು: "ನಾನು ಕೇಳುವ

ಪ್ರಶ್ನೆಗಳಿಗೆಲ್ಲಾ ಸ್ವಲ್ಪವೂ ತಪ್ಪಿಲ್ಲದೆ ನಿಜವನ್ನೇ ಹೇಳಿರುತ್ತಾನೆ. ಅವನಿಗೇನಾದರೂ ಬಹುಮಾನವನ್ನು ಕೊಡಬೇಕು'' ಎಂದಳು. ಅದಕ್ಕೆ ಶಾಮರಾಯರು:''ಸರಿ-ಸರಿ, ಒಳ್ಳೇ ಪ್ರಶ್ನೆ ಕೇಳುವುದು ಒಳ್ಳೇ ಉತ್ತರ ಹೇಳುವದು? ಹೆಂಗಸರಿಗೆ ಇನ್ನೇನೂ ಕೆಲಸವೇ ಇಲ್ಲ. ಮೇಲೆ ಹೋಗಿ ಅಲ್ಲಿರುವ ನನ್ನ ಹಳೆಯ ಕೋಟನ್ನು ತಂದು ಕೊಡು''ಎಂದರು. ಆಗ ಶಾಮರಾಯರ ಪತ್ನಿಗೂ, ಬುಡುಬುಡುಕೆಯುವನಿಗೂ ಆದ ಸಂತೋಷಕ್ಕೆ ಪಾರವೇ ಇಲ್ಲ. ಆಕೆಯು ಒಳಕ್ಕೆ ಹೋಗಿ ಬಂದು ಹಳೆಯ ಅಂಗಿಯನ್ನು ತಂದು ಕೊಟ್ಟಳು. ಅದರ ಜೊತೆಗೆ ಒಂದು ಸೊಗಸಾದ ಪಂಚೆಯೂ ಸಿಕ್ಕಿತು. ಅವನು ಬಹಳ ಸಂತೋಷವನ್ನು ತೋರ್ಪಡಿಸುತ್ತಾ ಅಲ್ಲಿಂದ ಎದ್ದು ಹೊರಟು ಹೋದನು.

ಬೆಳಿಗ್ಗೆ ಸುಮಾರು ಎಂಟು ಗಂಟೆಯ ಹೊತ್ತಿಗೆ ಸರಿಯಾಗಿ ಶಾಮರಾಯರನ್ನು ಕಾಣುವುದಕ್ಕಾಗಿ ಅವರ ಪ್ರಿಯಶಿಷ್ಯ ಸೀತಾರಾಮುವು ಬಂದನು. ಆಗ ತಾನೆ ಶಾಮರಾಯರು ತಮ್ಮ ನಿತ್ಯಕರ್ಮಗಳನ್ನೆಲ್ಲಾ ತೀರಿಸಿಕೊಂಡು ಒಂದು ಕುಳಿತಿದ್ದರು. ಸೀತಾರಾಮುವನ್ನು ನೋಡಿದೊಡನೆಯೇ ರಾಯರಿಗೆ ಅತ್ಯಾಶ್ಚರ್ಯವಾಯಿತು. ಕೂಡಲೆ ಅವರು ಅವನನ್ನು ಕುರಿತು: ''ಸೀತಾರಾಮು, ನನ್ನ ಹೆಂಡತಿಯು ಬೆಳಿಗ್ಗೆ ಆ ಬುಡುಬುಡುಕೆಯುವನಿಗೆ ಕೊಟ್ಟ ಕೋಟು-ಪಂಚೆಗಳು ನಿನಗೆ ಎಲ್ಲಿ ಸಿಕ್ಕಿದವು?'' ಎಂದು ಕೇಳಿದರು. ಸೀತಾರಾಮುವು ನಗುತ್ತಾ ನಿಂತನು. ಆ ಸಮಯಕ್ಕೆ ಸರಿಯಾಗಿ ಶಾಮರಾಯರ ಪತ್ನಿಯೂ ಅಲ್ಲಿಗೆ ಬಂದಳು. ಆಕೆಗೂ ಸೀತಾರಾಮುವನ್ನು ನೋಡಿ ಆಶ್ಚರ್ಯವಾಯಿತು! ಆಕೆಯು: ''ಸೀತಾರಾಮು, ಇದೇನು? ಈ ಬಟ್ಟೆಗಳೆಲ್ಲ ಎಲ್ಲಿ ಸಿಕ್ಕಿದವು? ಬೆಳಿಗ್ಗೆ ನಾನು ಇವನ್ನು ಆ ಬುಡುಬುಡುಕೆಯುವನಿಗೆ ಕೊಟ್ಟಿದ್ದೆನಲ್ಲ!'' ಎಂದಳು. ಆಗ ಸೀತಾರಾಮುವು ಅವರೀರ್ವರನ್ನೂ ಕುರಿತು: 'ನಾನೇ ಆ ಬುಡುಬುಡುಕೆಯುವನು' ಎಂದನು. ಆಗ ಅವರಿಗೆ ಬಹಳ ಸಂತೋಷವಾಯಿತು!

ಶಾಮರಾಯರು: —'ಸೀತಾರಾಮು, ನೀನು ನನ್ನ ಶಿಷ್ಯನಾದುದಕ್ಕೆ ಈಗ ಸಾರ್ಥಕವಾಯಿತು. ಈ ನಿನ್ನ ವೇಷವು ನನಗೂ ಮೋಸ ಪಡಿಸಿತು.

ಇನ್ನು ನಿನಗೆ ಹೆಸರು ಬರುವುದಕ್ಕೆ ಸಂಶಯವೇ ಇಲ್ಲ. ಬುಡುಬುಡು ಕೆಯುವನ ಒಟ್ಟೆಗಳು ನಿನಗೆ ಹೇಗೆ ಸಿಕ್ಕಿದುವು?'

ಸೀತಾರಾಮು: — ಈ ಊರಿನಲ್ಲಿಯೇ ಒಬ್ಬ ಮುದುಕ ಬುಡು ಬುಡುಕೆಯುವನಿರುವನು. ಅವನಿಗೂ ನನಗೂ ಸ್ವಲ್ಪ ಪರಿಚಯುವುಂಟು. ಅವನ ಹತ್ತಿರ ಹೋಗಿ ಇವುಗಳನ್ನೆಲ್ಲ ತೆಗೆದುಕೊಂಡು ಬಂದೆನು. ಪತ್ತೆ ಹಚ್ಚುವ ಕೆಲಸದಲ್ಲಿರುವವರಿಗೆ ಇಂಥವುಗಳೇ ಮುಖ್ಯವಾದ ವಸ್ತುಗಳ ಲ್ಲವೆ? ಎಂದನು.

ಈ ನಡುವೆ ಶಾಮರಾಯರು ಒಂದು ಸಲ ತಮ್ಮ ಪತ್ನಿಯ ಕಡೆಗೆ ನೋಡಲು, ಪತಿಯ ಇಂಗಿತವನ್ನರಿತ ಆಕೆಯು, ಅಲ್ಲಿಂದ ಹೊರಟು ಹೋದಳು. ಅನಂತರ ಶಾಮರಾಯರು: ಸೀತಾರಾಮು, ಏನಾದರೂ ಹೆಚ್ಚಿಗೆ ಸಮಾಚಾರವಿದೆಯೇನು?

ಸೀತಾರಾಮು: — ನಿನ್ನೆ ರಾತ್ರಿ ಸ್ವಲ್ಪ ಹೆಚ್ಚಿಗೆ ನಡೆದಿದೆ..

ಶಾಮರಾಯ: ಅದೇನು? ಯಾವ ವಿಚಾರವಾಗಿ?

ಸೀತಾರಾಮು: "ಲಲಿತೆಯ ವಿಚಾರವಾಗಿಯೇ. ನಾನು ನಿನ್ನೆ ರಾತ್ರಿ ಆ ಬುಡುಬುಡುಕೆಯ ವೇಷದಲ್ಲಿಯೇ ಆ ಕಳ್ಳರ ಕಣ್ಣಿಗೆ ಮಣ್ಣ ನ್ನು ಎರಚಿ, ಅವರ ಗುಪ್ತಸ್ಥಳವನ್ನು ಸ್ವಲ್ಪ ಕಂಡು ಹಿಡಿದಿರುವೆನು.

ಶಾಮರಾಯ: ಹಾಗಾದರೆ, ಆ ಗುಪ್ತಸ್ಥಳದಲ್ಲಿಯೇ ಲಲಿತೆಯಿ ರುವಳೇ?

ಸೀತಾರಾಮು: ಇಲ್ಲ. ಅವರೆಲ್ಲರೂ ಕುಳಿತು ನಿಲ್ಲುವ ಸ್ಥಳ ವನ್ನು ಮಾತ್ರ ನೋಡಿದೆನು. ಕೊನೆಗೆ ಆ ಮನೆಯನ್ನೆಲ್ಲ ಹುಡುಕಿದೆ. ಲಲಿತೆಯಿರುವ ಸುಳಿವೇ ಕಾಣಬರಲಿಲ್ಲ.

ಶಾಮರಾಯ: — ಹಾಗಾದರೆ ಆ ಮನೆಯಲ್ಲೇನಿದೆ?

ಸೀತಾರಾಮು: ಕೆಲವು ಆಯುಧಗಳೂ, ದ್ರವ್ಯ ಮತ್ತು ಇತರೇ ಸಣ್ಣ ಪುಟ್ಟ ಸಾಮಾನುಗಳೂ ಇರುವವು. ಅವುಗಳನ್ನೆಲ್ಲ ನೋಡಿಕೊ ಳ್ಳುವುದಕ್ಕೆ ಒಬ್ಬ ಕಾವಲುಗಾರ.

ಶಾಮರಾಯ: — ಕಾವಲುಗಾರನಿದ್ದರೆ ಅಲ್ಲಿಗೆ ಹೇಗೆ ಹೋದೆ?

ಸೀತಾರಾಮು:—ಅವರಲ್ಲಿ ಮೂವರು ಮುಖಂಡರು ಸೇರಿ, ಆ ಮನೆಯ ಬೀಗವನ್ನು ತೆರೆದರು. ಒಬ್ಬನು ಒಳಗಿನಿಂದ ಒಂದು ದೀಪವನ್ನು ತೆಗೆದುಕೊಂಡು ಬಂದು, ಬಾಗಿಲನ್ನು ತೆರೆದನು. ಗಾಳಿಯಿಂದ ದೀಪವು ಆರಿಹೋಯಿತು. ಆ ಕತ್ತಲಲ್ಲಿ ಆ ಮೂವರೂ ಹೊರಟರು. ನಾನೂ ಅವರ ಹಿಂದೆಯೇ ಹೋದೆನು. ಅವರು ಹಂತವನ್ನು ಹತ್ತಿ ಕೊಠಡಿಗೆ ಪ್ರವೇಶಿಸುವ ವರೆಗೂ ಸುಮ್ಮನಿದ್ದು, ಆ ಮೇಲೆ ಜವಾನನಿಗೆ ಕ್ಲೋರೋ ಫಾರಂ ಕೊಟ್ಟು, ಅವನ ಒಟ್ಟೆಯನ್ನೆಲ್ಲ ನಾನೇ ಹಾಕಿಕೊಂಡು, ಅವನ ಹಾಗೆಯೇ ನಟಿಸಿದೆನು.

ಶಾಮರಾಯ: ಆಗ ನಿನಗೆ ಅಲ್ಲಿ ಹೆಚ್ಚಿಗೆ ವಿಷಯವೇನಾದರೂ ಗೊತ್ತಾಯಿತೇ?

ಸೀತಾರಾಮು:-ಭಾಸ್ಕರನು ಬರೆದ ಹಾಗೆ ಅವರು ಒಂದು ಪತ್ರವನ್ನು ಬರೆದು ಲಲಿತೆಗೆ ತಲುಪಿಸಬೇಕೆಂದಿರುವರು. ಅವರಲ್ಲಿ ಯಜಮಾನನು ಗೋಪಾಲರಾಯನೆಂದೂ, ಮಿಕ್ಕವರು ನರಸಿಂಗ ಮತ್ತು ಅಮೂರರೆಂದೂ ಗೊತ್ತಾಯಿತು. ಅವರಲ್ಲಿ ನರಸಿಂಗನು ಸ್ವಲ್ಪ ಬುದ್ಧಿವಂತನೆಂದು ಕಾಣುತ್ತದೆ. ಅವನೇ ಆ ಕಾಗದವನ್ನು ನಾಳೆ ಮಧ್ಯಾಹ್ನ ಲಲಿತೆಗೆ ತಲುಪಿಸುವೆನೆಂದು ಹೇಳುತ್ತಿದ್ದಾನೆ. ಅಲ್ಲಿಗೆ ಹೋಗಿ ಅವನನ್ನು ಹಿಡಿಯಬೇಕು.

ಶಾಮರಾಯ: ಲಲಿತೆಯನ್ನು ಇಟ್ಟಿರುವ ಸ್ಥಳವು ಗೊತ್ತಾದರೆ ತಾನೆ ಹಾಗೆ ಮಾಡುವುದು?

ಸೀತಾರಾಮು: -ಕಂಡು ಹಿಡಿಯುವುದಕ್ಕೆ ಪ್ರಯತ್ನಪಡುವೆನು. ಇನ್ನು ನಾನು ಹೊರಡುವೆನು, ಎಂದು ಹೇಳಿ, ಅಲ್ಲಿಂದ ಹೊರಟು, ಭಾಸ್ಕರನ ಮನೆಗೆ ಬಂದು, ಅವನಿಗೂ ನಡೆದ ಸಂಗತಿಯನ್ನೆಲ್ಲ ತಿಳಿಸಿ, ತನ್ನ ಮನೆಯನ್ನು ಸೇರಿದನು.

# ಅಧ್ಯಾಯ ೭

ಸೀತಾರಾಮುವು ಅಂದಿನ ರಾತ್ರಿಯನ್ನೆಲ್ಲ ಯೋಚನೆಯಲ್ಲಿಯೇ ಕಳೆದನು. ಬೆಳಗಾದೊಡನೆಯೇ ಪೋಲೀಸಠಾಣೆಗೆ ಹೋಗಬೇಕೆಂದು ಯೋಚಿಸಿ, ತನ್ನ ಉಡುಪನ್ನು ಹಾಕಿಕೊಂಡನು. ಹೊರಡುವ ಸಮಯಕ್ಕೆ ಸರಿಯಾಗಿ ಅವನ ಪತ್ನಿ ಸುಶೀಲೆಯು ಅವನಿಗಾಗಿ ಒಂದು ಬಟ್ಟಲು ಚಹವನ್ನೂ, ಒಂದು ತಟ್ಟೆಯಲ್ಲಿ ಸ್ವಲ್ಪ ತಿಂಡಿಯನ್ನೂ ತಂದಳು. ಸೀತಾರಾಮುವಿಗಾದರೋ ತಿಂಡಿಯಾಗಲಿ, ಪಾನೀಯವಾಗಲಿ ಬೇಕಾಗಿರಲಿಲ್ಲ; ಆದರೂ ಸುಶೀಲೆಯ ಬಲವಂತದಿಂದ ಸ್ವಲ್ಪವನ್ನು ಸ್ವೀಕರಿಸಿ, ಲಗುಬಗೆಯಿಂದ ಹೊರಹೊರಟನು. ಅವನು ಠಾಣೆಯೊಳಕ್ಕೆ ಹೋದಾಗ ಇನ್ಸ್ಪೆಕ್ಟರರು ಯಾವುದೋ ಕೆಲಸದಲ್ಲಿದ್ದರು.

ಯಥಾವಿಧಿಯಾಗಿ ಸೀತಾರಾಮುವು ತನ್ನ ಹತ್ತಿರಿದ್ದ ವಿಜಿಟಿಂಗ ಕಾರ್ಡನ್ನು ಒಬ್ಬ ಪೋಲೀಸಿನವನ ಹತ್ತಿರ ಕೊಟ್ಟನು. ಒಳಗಿದ್ದ ಇನ್ಸ್ಪೆಕ್ಟರರು ಅದನ್ನು ನೋಡುತ್ತಲೇ ಸೀತಾರಾಮುವನ್ನು ಬರಹೇಳಿದರು. ಸೀತಾರಾಮುವು ಒಳಕ್ಕೆ ಪ್ರವೇಶಿಸಿ, ಇನ್ಸ್ಪೆಕ್ಟರರಿಗೆ ವಂದಿಸಿ, ಹತ್ತಿರದಲ್ಲಿಯೇ ಇದ್ದ ಒಂದು ಕುರ್ಚಿಯ ಮೇಲೆ ಕುಳಿತನು. ಇನ್ಸ್ಪೆಕ್ಟರರು ಅವನನ್ನು ಕುರಿತು:-- "ಸ್ವಾಮೀ, ತಾವು ಯಾರು? ಇಷ್ಟು ದೂರ ಬರಲು ಕಾರಣವೇನು?" ಎಂದು ಕೇಳಿದರು.

ಸೀತಾರಾಮು: ಇನ್ಸ್ಪೆಕ್ಟರೇ, ತಮ್ಮ ಹತ್ತಿರ ಒಂದು ವಿಚಾರವನ್ನು ಹೇಳಿ, ಅದಕ್ಕೆ ಬೇಕಾದ ಸಹಾಯವನ್ನು ಪಡೆಯಬೇಕೆಂದು ಬಂದಿರುತ್ತೇನೆ.

ಇನ್: —ಅದೇನು, ಅಂಥ ವಿಚಾರ? ತಿಳಿಸಿದರೆ ಬೇಕಾದ ಸಹಾಯವನ್ನು ಮಾಡುವೆವು. ನಮ್ಮ ಇಲಾಖೆ ಇರುವುದೇ ಜನರಿಗೆ ಸಹಾಯ ಮಾಡುವುದಕ್ಕಾಗಿ.

**ಸೀತಾರಾಮು:—ಈಗ ಸ್ವಲ್ಪ ದಿವಸಗಳ ಹಿಂದೆ ಅಪಹರಿತಳಾದ ಮಾಧವರಾಯರ ಮಗಳ ಪತ್ತೆಯೇನಾದರೂ ಆಯಿತೇ?**

ಇನ್:— ತಮಗೂ ಈ ವಿಚಾರಕ್ಕೂ ಸಂಬಂಧವೇನು?

ಸೀತಾರಾಮು:—ನಾನು ಅವರ ಕುಟುಂಬಕ್ಕೆ ಸೇರಿದವನು. ಮನೆಯಲ್ಲಿ ಸರಿಯಾದ ವಿಚಾರ ಗೊತ್ತಾಗಲಿಲ್ಲವಾಗಿ ನಿಮ್ಮನ್ನು ಕೇಳುವುದಕ್ಕೆ ಬಂದಿರುತ್ತೇನೆ. ಸ್ವಲ್ಪ ತೊಂದರೆಯನ್ನು ತೆಗೆದುಕೊಂಡು ವಿಚಾರವನ್ನು ತಿಳಿಸಿ.

ಇನ್: ಪತ್ತೆಯೇನೋ ನಡೆಯುತ್ತಿರುವುದು; ಆದರೆ ಇನ್ನೂ ಪೂರ್ತಿಯಾಗಿರುವುದಿಲ್ಲ.

ಸೀತಾರಾಮು:—ಪತ್ತೆ ಹಚ್ಚುವ ಕೆಲಸವನ್ನು ಯಾರು ಮಾಡುತ್ತಿರುವರು?

ಇನ್:—ಮಾಧವರಾಯರ ಸೋದರಳಿಯಂದಿರಾದ ನಾರಾಯಣರಾಯರೇ ಈ ಕೆಲಸವನ್ನು ಮಾಡುತ್ತಿರುವರು. ನಾನು ಅವರಿಗೆ ಬೇಕಾದ ಸಹಾಯವನ್ನು ಮಾಡುತಲಿದ್ದೇನೆ.

ಸೀತಾರಾಮು: ಈಗ ಅದರ ವಿಚಾರವಾಗಿ ಕೆಲವು ವಿಷಯಗಳಾದರೂ ತಿಳಿದಿಲ್ಲವೆ?

ಇನ್:—ಏನೂ ಇಲ್ಲ. ಸ್ವಲ್ಪವೂ ತಿಳಿದಿಲ್ಲ.

ಸೀತಾರಾಮು:—ಈಗ ನನಗೆ ಈ ವಿಚಾರವಾಗಿ ಕೆಲವು ವಿಷಗಳು ಗೊತ್ತಾಗಿವೆ. ಅವುಗಳನ್ನು ನಿಮಗೆ ತಿಳಿಸುವೆನು. ಅದಕ್ಕೆ ಬೇಕಾದ ಸಹಾಯವನ್ನು ತಾವು ಮಾಡುವಿರಾ?

ಇನ್:—ಸ್ವಾಮಿ, ತಾವು ನನಗೆ ಈ ವಿಷಯಗಳನ್ನು ತಿಳಿಸುವುದಕ್ಕಿಂತಲೂ, ನಾರಾಯಣರಾಯರಿಗೇ ತಿಳಿಸಿದರೆ ಬಹಳ ಉತ್ತಮ. ಏಕೆಂದರೆ, ಈ ಪತ್ತೆ ಹಚ್ಚುವ ಕೆಲಸವನ್ನು ಅವರೇ ಮಾಡುತ್ತಿರುವರು. ನೀವು ಹೇಳುವ ವಿಚಾರಗಳು ಅವರಿಗೆ ಸಹಾಯಕವಾಗಬಹುದು.

ಸೀತಾರಾಮು: - ಅದು ಆಗಬಹುದು; ಆದರೆ ನಾನು ಈಗ ಅವರಲ್ಲಿ ಹೋಗಲು ಸಾಧ್ಯವಿಲ್ಲ.

ಇನ್:—ನಾನೇ ಅವರನ್ನು ಕರೆ ಕಳುಹಿಸುವೆನು; ಎಂಬುದಾಗಿ ಹೇಳಿ, ಹತ್ತಿರದಲ್ಲಿಯೇ ಇದ್ದ ಒಬ್ಬ ಪೋಲೀಸಿನವನನ್ನು ಕರೆದು, ನಾರಾ

ಯಣರಾಯರಿಗೆ ಹೇಳಿ ಕಳುಹಿಸಿದನು.

ಸ್ವಲ್ಪ ಹೊತ್ತಿನೊಳಗಾಗಿಯೇ ಒಂದು ಮೋಟಾರು ಬಂಡಿಯು ಠಾಣೆಯ ಮುಂದುಗಡೆ ಬಂದು ನಿಂತಿತು. ಅದರಿಂದ ಓರ್ವ ೨೨-೨೩ ವರ್ಷದ ತರುಣನು ಇಳಿದನು. ಅವನನ್ನು ನೋಡಿದೊಡನೆಯೇ ದೊಡ್ಡ ಸಾಹುಕಾರನ ಹಾಗೆ ಭಾಸವಾಗುತಲಿತ್ತು. ಆತನೇ ನಾರಾಯಣರಾಯ.

ನಾರಾಯಣರಾಯನು ಒಳಕ್ಕೆ ಹೋಗುತ್ತಲೇ ಇನ್‌ಸ್ಪೆಕ್ಟರು ಅವನಿಗೆ ವಂದಿಸಿ, ಪಕ್ಕದಲ್ಲಿಯೇ ಇದ್ದ ಕುರ್ಚಿಯನ್ನು ಕೊಟ್ಟರು ಅನಂತರ ಸೀತಾರಾಮುವನ್ನು ಪರಿಚಯ ಮಾಡಿಸಿದರು.

ಇನ್:- ನಾರಾಯಣರಾಯರೇ, ಇವರು ತಮ್ಮನ್ನು ನೋಡು ವುದಕ್ಕಾಗಿ ಬಂದಿರುತ್ತಾರೆ. ಅಪಹರಿತಳಾದ ಮಾಧರಾಯರ ಮಗಳ ಕಳವಿನ ವಿಚಾರವಾಗಿ ಇವರಿಗೆ ಸ್ವಲ್ಪ ವಿಷಯಗಳು ಗೊತ್ತಿವೆಯಂತೆ. ಅವುಗಳನ್ನು ತಿಳಿಸಲು ಬಂದಿರುವರು.

ನಾರಾಯಣರಾಯ (ಸ್ವಲ್ಪ ದರ್ಪದಿಂದ): ನನಗೆ ತಿಳಿಸಬೇಕಾಗಿದ್ದರೆ, ನನ್ನ ಮನೆಗೆ ಬರಬಹುದಾಗಿತ್ತಲ್ಲ? ಇಲ್ಲಿಗೇ ನನ್ನನ್ನು ಬರಮಾಡಿದ್ದು ಅನವಶ್ಯಕ.

ಇನ್:—ಈ ವಿಷಯಗಳನ್ನು ನನಗೆ ತಿಳಿಸಬೇಕೆಂದು ಬಂದರು. ಇದರಲ್ಲಿ ನಿಮಗೆ ಹೆಚ್ಚು ಪರಿಶ್ರಮವಿರುವುದರಿಂದ ನಿಮಗೆ ಈ ವಿಚಾರಗಳು ತಿಳಿದರೆ, ಪ್ರಯೋಜನವಾಗಬಹುದೆಂದು ಇವರಿಗೆ ನಾನೇ ತಿಳಿಸಿ, ನಿಮಗೆ ಹೇಳಿ ಕಳುಹಿಸಿದೆನು.

ನಾರಾಯಣರಾಯ:—ಆದರೂ ಚಿಂತೆಯಿಲ್ಲ; ಎಂದು ಹೇಳುತ್ತ ಸೀತಾರಾಮುವನ್ನು ಕುರಿತು: ಸ್ವಾಮಿ, ತಮಗೆ ಯಾವ ಯಾವ ವಿಚಾರಗಳು ತಿಳಿದಿವೆಯೋ, ಅವುಗಳನ್ನೆಲ್ಲ ತಿಳಿಸಿ, ಎಂದನು.

ಸೀತಾರಾಮು: ತಾವು ಈ ವಿಚಾರದಲ್ಲಿ ಬಹು ಶ್ರಮವನ್ನು ವಹಿಸುತ್ತಿರುವುದಾಗಿ ಕೇಳಿ, ನನಗೆ ಬಹಳ ಸಂತೋಷವಾಯಿತು; ಆದರೆ ಸ್ವಲ್ಪವೂ ಪತ್ತೆಯಾಗಲಿಲ್ಲವೆಂಬುದನ್ನು ಕೇಳಿ ವಿಷಾದಪಡುತ್ತೇನೆ. ತಮಗೆ ಇದೇ ಊರಲ್ಲಿರುವ ಮುಖ್ಯಬೀದಿಯ ಅ೨ನೇ ನಂಬರಿನ ಮನೆಯು ಗೊತ್ತಿದೆಯೇ?

ನಾರಾಯಣರಾಯ(ಸ್ವಲ್ಪ ಆಶ್ಚರ್ಯದಿಂದ):— ಆ ಖಾಲಿ ಮನೆಯೇ? ಸದಾ ಬಾಗಿಲಿಗೆ ಬೀಗವು ಹಾಕಿಯೇ ಇರುತ್ತದೆ.

ಸೀತಾರಾಮು:— ಸದಾ ಬೀಗ ಹಾಕಿದ್ದರೂ, ಒಳಗಡೆ ಅನೇಕ ಸಂಧಾನಗಳು ನಡೆಯುತ್ತಲೇ ಇರುತ್ತವೆ.

ನಾರಾಯಣ: ಅದು ನಿಮಗೆ ಹೇಗೆ ಗೊತ್ತು?

ಸೀತಾರಾಮು: ಬೀಗವನ್ನು ಹಾಕಿದ್ದರೂ ಒಳಗಡೆ ಒಬ್ಬನು ಇದ್ದೇ ಇರುವನು. ಅದೂ ಅಲ್ಲದೆ, ನಿನ್ನೆ ರಾತ್ರಿ ಕೆಲವು ಪುಂಡರು ಅಲ್ಲಿ ಸೇರಿ, ಲಲಿತೆಯ ವಿಚಾರವಾಗಿ ಮಾತನಾಡುತ್ತಾ ಇದ್ದದ್ದನ್ನು ನಾನೇ ಕೇಳಿದೆನು. ಅಲ್ಲಿ ತಿಳಿದ ವಿಷಯಗಳಲ್ಲಿ ಆ ಲಲಿತೆಯನ್ನು ಬೇರೆ ಎಲ್ಲೋ ಗುಪ್ತ ಸ್ಥಳದಲ್ಲಿ ಇಟ್ಟಿರುವಂತೆಯೂ, ಭಾಸ್ಕರನು ಬರೆದ ಹಾಗೆ ಪತ್ರವನ್ನು ಆ ದುರಾತ್ಮರೇ ಬರೆಯುವ ಹಾಗೂ ಮಾತನಾಡುತಲಿದ್ದರು.

ಈ ಮಾತನ್ನು ಕೇಳುವಾಗ ನಾರಾಯಣರಾಯರಿಗೆ ಬಹಳ ಕೋಪ ವುಂಟಾಯಿತು. ಏತಕ್ಕೋ ಕೈಯನ್ನು ಎತ್ತಿದನು. ಅಷ್ಟರಲ್ಲೇ ಸುಮ್ಮನೆ ಕುಳಿತನು. ಸೀತಾರಾಮುವನ್ನು ಕುರಿತು:— "ಅವರು ಕಾಗದವನ್ನು ಭಾಸ್ಕರನು ಬರೆದ ಹಾಗೆ ಬರೆಯಲು ಕಾರಣವೇನು?" ಎಂದು ಕೇಳಿದನು.

ಸೀತಾರಾಮು: ಈಗ ಲಲಿತೆಯು ಅನ್ನಾಹಾರಗಳನ್ನು ಬಿಟ್ಟಿರುವಂತೆ ಕಾಣುತ್ತೆ. ಭಾಸ್ಕರನು ಬರೆದ ಹಾಗೆ ಪತ್ರವನ್ನು ತಾವು ಬರೆದು ಅವಳಿಗೆ ತಲುಪಿಸಿದರೆ, ಅವಳ ಕೋಪವೂ, ದುಃಖವೂ ಸ್ವಲ್ಪ ಕಡಿಮೆಯಾಗಿ ಆಹಾರವನ್ನು ತೆಗೆದುಕೊಳ್ಳಬಹುದೆಂದೂ, ಅನಂತರ ಉಪಾಯಾಂತರದಿಂದ ಅವಳನ್ನು ತಾವು ವಶಪಡಿಸಿಕೊಳ್ಳಬಹುದೆಂದೂ ಯೋಚಿಸಿರುವರು

ನಾರಾಯಣ:— ಹಾಗಾದರೆ, ನಾವು ಈಗ ಏನು ಮಾಡಬೇಕು? ಸೀತಾರಾಮು, ಈಗ ನಾವು ರಾತ್ರಿ ಎರಡು ಗಂಟೆಯಾದನಂತರ ಆ ೨೪ನೇ ನಂಬರ ಮನೆಯ ಹತ್ತಿರ ಯಾರಿಗೂ ಗೊತ್ತಾಗದೇ ಸುಳಿದಾಡುತ್ತಲಿದ್ದು, ಅಲ್ಲಿಗೆ ಬರುವ ಜನರನ್ನು ಸೆರೆ ಹಿಡಿದರೆ, ಆಗ ಎಲ್ಲಾ ವಿಷಯಗಳೂ ಗೊತ್ತಾಗುತ್ತವೆ.

ನಾರಾಯಣ: - ಅದಕ್ಕಾಗಿ ನನ್ನ ಸಹಾಯವೇನು ಬೇಕು?

ಸೀತಾರಾಮು: — ತಮ್ಮ ಹತ್ತಿರಿರುವ ಪೋಲಿಸಿನವರನ್ನು ರಾತ್ರಿ ಎರಡು ಗಂಟೆಗೆ ನನ್ನ ಮನೆಯ ಹತ್ತಿರ ಕಳುಹಿಸಿ. ಅವರನ್ನು ಕರೆದುಕೊಂಡು ನಾನು ಬೇಕಾದ ಸಾಮಾನುಗಳನ್ನೆಲ್ಲ ತೆಗೆಯಿಸಿಕೊಂಡು ಅಲ್ಲಿಗೆ ಹೋಗುವೆನು. ತಾವೂ, ಅಲ್ಲದೆ ಇನ್‌ಸ್ಪೆಕ್ಟರರೂ ನಮ್ಮ ಜೊತೆಯಲ್ಲಿ ಬಂದರೆ ಉತ್ತಮ. ಅನಂತರ ನಾವು ಅವರನ್ನು ದಸ್ತಗಿರಿ ಮಾಡೋಣ.

ನಾರಾಯಣ: ತಾವು ಹೇಳುವುದು ಬಹಳ ಸಮಂಜವಾಗಿ ಕಾಣುವುದು. ನಾನು ಅಲ್ಲಿಗೆ ಎರಡು ಗಂಟೆಗೆ ಬರುವೆನು. ನೀವೂ ನನ್ನ ಪೋಲಿಸಿನವರೊಡನೆ ಬನ್ನಿ. ಅನಂತರ ಉಪಾಯಾಂತರದಿಂದ ಕಳ್ಳರನ್ನು ಹಿಡಿಯೋಣ.

ಎಂದು ಹೇಳಿದ ಸ್ವಲ್ಪ ಹೊತ್ತಿನಲ್ಲಿಯೇ ಸೀತಾರಾಮುವು ತನ್ನ ಮನೆಯನ್ನು ಕುರಿತು ಹೊರಟನು.

ಸೀತಾರಾಮುವು ಮನೆಗೆ ಬಂದೊಡನೆಯೇ ಬಹಳ ಜಾಗ್ರತೆಯಾಗಿ ಊಟಮಾಡಿ ಎದ್ದನು. ಪುನಃ ತನ್ನ ಉಡುಪನ್ನು ಹಾಕಿಕೊಂಡು ಹೊರಡುವದರಲ್ಲಿದ್ದನು. ಅಷ್ಟರಲ್ಲಿ ಸುಶೀಲೆಯು ತಾಂಬೂಲವನ್ನು ತೆಗೆದುಕೊಂಡು ಬಂದಳು. ಗಂಡನು ತ್ವರೆಯಿಂದ ಹೊರಟಿರುವದನ್ನು ನೋಡಿ, ಅವಳು: "ಇದೇನು, ನೀವು ಯಾವಾಗಲೂ ಮನೆಯಲ್ಲಿ ನಿಲ್ಲದೆಯೇ, ಹೊತ್ತಿಲ್ಲದ ಹೊತ್ತಿನಲ್ಲಿ ಬಂದು ಊಟಮಾಡಿಕೊಂಡು ಬಹಳ ಕಷ್ಟಕೆಲಸವನ್ನು ಮಾಡುತ್ತಿರುವ ಹಾಗೆ ಕಾಣುತ್ತೆ. ನೀವು ಈ ರೀತಿಯಾಗಿ ದೇಹಶ್ರಮಪಡುತ್ತಲಿದ್ದರೆ, ನಿಮ್ಮ ಶರೀರಸ್ಥಿತಿ ಕೆಟ್ಟು ಹೋಗುವುದಿಲ್ಲವೇ? ನೀವು ಈಗ ಯಾವ ಕೆಲಸಕ್ಕೆ ಕೈಹಾಕಿರುವಿರಿ ತಿಳಿಸಿ. ನಾನು ಅನೇಕ ದಿವಸಗಳಿಂದಲೂ ಈ ವಿಚಾರವನ್ನು ಪ್ರಸ್ತಾಪಿಸಬೇಕೆಂದಿದ್ದೆ. ಈ ದಿನ ಸ್ವಲ್ಪ ಅವಕಾಶ ಸಿಕ್ಕಿದ ಹಾಗೆ ಕಾಣುತ್ತೆ" ಎಂದಳು.

ಸೀತಾರಾಮು:—ನನ್ನ ದೇಹಸ್ಥಿತಿ ಕೆಟ್ಟು ಹೋಗುವುದೆಂದು ನೀನು ಹೇಳುವುದು ಸಮಂಜಸವಾದರೂ, ಗುರುಗಳು ನನಗೆ ಈ ಕೆಲಸ

ವನ್ನು ಆಜ್ಞಾಪಿಸಿರುವರು. ಕೆಲಸವನ್ನು ಪೂರ್ತಿಗೊಳಿಸುವವರೆಗೂ ನನ್ನ ಸುಖವನ್ನು ನಾನು ಕೋರುವುದಿಲ್ಲ. ನನ್ನ ಗುರುಗಳನ್ನು ಮೆಚ್ಚಿಸ ಬೇಕೆಂದು, ಈ ಕೆಲಸಕ್ಕಾಗಿ ಸಹಾಯಕ್ಕೆ-ಬಂದ ಭಾಸ್ಕರನನ್ನು ಬೇಡವೆಂದು ಹೇಳಿದೆ. ಈ ದಿನ ನಾನು ಆ ಕಳ್ಳರನ್ನು ಹಿಡಿದರೆ, ಆ ಕೆಲಸವೆಲ್ಲವೂ ಪೂರೈಸುವುದು.

ಸುಶೀಲೆ: —ಯಾವ ಕೆಲಸ? ಯಾವ ಕಳ್ಳರು? ನನಗೆ ಸ್ವಲ್ಪ ತಿಳಿಸಿ.

ಸೀತಾರಾಮು: —ಈಗ ತಿಳಿಸುವುದಕ್ಕೆ ಹೊತ್ತಾಯಿತು ನಾನು ಹೋಗಬೇಕು.

ಸುಶೀಲೆ: —"ತಾವು ತಿಳಿಸಿ ಹೊರಟು ಹೋಗಿ. ಇಲ್ಲದಿದ್ದರೆ ನಾನು ನಿಮ್ಮನ್ನು ಹೊರಕ್ಕೆ ಬಿಡುವುದೇ ಇಲ್ಲ" ಎಂದು ಹಾಸ್ಯವಾಗಿ ಹೇಳುತ್ತಾ ಕೊಠಡಿಯ ಬಾಗಿಲನ್ನು ಮುಚ್ಚಿ, ಅಡ್ಡವಾಗಿ ನಿಂತುಕೊಂಡಳು.

ಸೀತಾರಾಮುವಿಗೆ ಬಹಳ ಕೋಪ ಬಂದಿತು. ಸುಶೀಲೆಯನ್ನು ಅತ್ತಕಡೆ ದೂಡಿ, ತಾನು ಹೊರಕ್ಕೆ ಹೊರಡಬೇಕೆಂದು ಯೋಚಿಸಿ, ಅವಳ ಕೈ ಹಿಡಿದೆಳೆಯುವುದರಲ್ಲಿದ್ದನು. ಅಷ್ಟರಲ್ಲಿ ಅವನ ದೃಷ್ಟಿಯು ಆ ಶಾಂತಮೂರ್ತಿಯ ಪ್ರಫುಲ್ಲಿತವಾದ ಮುಖದ ಮೇಲೆ ಬೀಳಲು, ಕೋಪ ವೆಲ್ಲವೂ ಮಾಯವಾಯಿತು. ಆಗ ಅವನು ಹತ್ತಿರದಲ್ಲಿಯೇ ಇದ್ದ ಕುರ್ಚಿಯ ಮೇಲೆ ಕುಳಿತನು. ಸುಶೀಲೆಯನ್ನು ತನ್ನ ಮಗ್ಗುಲಲ್ಲಿಯೇ ಇದ್ದ ಮತ್ತೊಂದು ಕುರ್ಚಿಯ ಮೇಲೆ ಕೂಡಲು ಸನ್ನೆ ಮಾಡಿದನು. ಆಕೆಯೂ ಬಂದು ಕುಳಿತಳು.

ಸೀತಾರಾಮು: —ನೀನು ಮಾಧವರಾಯರ ಮಗಳಾದ ಲಲಿತೆಯನ್ನು ನೋಡಿರುವೆಯಾ?

ಸುಶೀಲೆ: —ನೋಡಿರುವೆನು.

ಸೀತಾರಾಮು: —ಅವಳ ಮದುವೆಯ ದಿನದ ಹಿಂದಿನ ದಿನ ಆದ ವಿಚಾರಗಳೆಲ್ಲವೂ ನಿನಗೆ ಗೊತ್ತಿಲ್ಲವೆ?

ಸುಶೀಲೆ: —ನನಗೆ ಹೇಗೆ ಗೊತ್ತಾಗಬೇಕು? ಆಗ ನಾನು ಊರ ಲ್ಲಿರಲಿಲ್ಲವಲ್ಲ.

ಸೀತಾರಾಮು: — ಅವಳನ್ನು ಮದುವೆಯ ಹಿಂದಿನ ದಿನ ರಾತ್ರಿ ಯಾರೋ ದುರಾತ್ಮರು ಅಪಹರಿಸಿಕೊಂಡು ಹೋಗಿರುವರು.

ಸುಶೀಲೆ: – ಯಾರು ಹಾಗೆ ಮಾಡಿರುವರೆಂಬದು ಗೊತ್ತಿಲ್ಲವೆ?

ಸೀತಾರಾಮು: – ಅಷ್ಟೆಲ್ಲ ಗೊತ್ತಿದ್ದರೆ ನಮಗೆ ಇಷ್ಟು ತೊಂದರೆಯೇ ಇರುತ್ತಿರಲಿಲ್ಲ.

ಸುಶೀಲೆ: ನೀವು ಈ ಕೆಲಸದಲ್ಲಿ ತೊಡಗಿದ್ದೀರೇನು?

ಸೀತಾರಾಮು: — ಹೌದು ನಮ್ಮ ಗುರುಗಳಿಗೆ ಈ ವಿಚಾರವನ್ನು ಭಾಸ್ಕರನು ತಿಳಿಸಿದನು. ಅವರು ನನಗೆ ಈ ಕೆಲಸವನ್ನು ವಹಿಸಿರುತ್ತಾರೆ; ಆದ್ದರಿಂದ ನಾನು ನಿದ್ರಾಹಾರಗಳಿಗೆ ಸಹ ಗಮನ ಕೊಡದೆ, ಕೆಲಸ ಮಾಡುತಲಿದ್ದೇನೆ.

ಸುಶೀಲೆ: ಆ ಭಾಸ್ಕರನಾರು?

ಸೀತಾರಾಮು: ಭಾಸ್ಕರನಿಗೇ ಆ ಲಲಿತೆಯನ್ನು ಕೊಟ್ಟು ಮದುವೆಯನ್ನು ಮಾಡಬೇಕೆಂದಿದ್ದುದು.

ಸುಶೀಲೆ ಅದು ಹೋಗಲಿ. ಈಗ ನಿಮ್ಮ ಕಾರ್ಯವು ಎಲ್ಲಿಯವರೆಗೆ ಬಂದಿದೆ?

ಸೀತಾರಾಮು: ಆ ದುಷ್ಟರಿರುವ ಸ್ಥಳವನ್ನು ಗೊತ್ತು ಮಾಡಿರುತ್ತೇನೆ. ರಾತ್ರಿ ಹೋಗಿ ಅವರನ್ನು ದಸ್ತಗಿರಿ ಮಾಡುತ್ತೇನೆ.

ಸುಶೀಲೆ:—ಹಾಗಾದರೆ ಈಗ ನೀವು ಎಲ್ಲಿಗೆ ಹೊರಟಿರುವಿರಿ?

ಸೀತಾರಾಮು: ಮಧ್ಯಾಹ್ನ ಆ ಪುಂಡರಲ್ಲೊಬ್ಬನು ಭಾಸ್ಕರನು ಬರೆದ ಹಾಗೆ ಒಂದು ಪತ್ರವನ್ನು ಬರೆದು ಲಲಿತೆಗೆ ತಲುಪಿಸುವನು. ಆದ್ದರಿಂದ ಲಲಿತೆಯಿರುವ ಸ್ಥಳವನ್ನು ಗೊತ್ತು ಮಾಡಬಹುದಾಗಿದೆಯಾದ್ದರಿಂದ ಹೋಗುವೆನು.

ಸುಶೀಲೆ: — ರಾತ್ರಿ ನೀವು ಎಲ್ಲರನ್ನೂ ದಸ್ತಗಿರಿ ಮಾಡುವಿರೆಂದು ಹೇಳುವಿರಿ; ಆಗ ಅದು ಗೊತ್ತೇ ಆಗುವುದು. ಅಲ್ಲದೆ, ಯಾವ ವೇಷದಲ್ಲಿ, ಯಾವ ದಾರಿಯಲ್ಲಿ ಅವನು ಹೋಗುತ್ತಾನೋ, ಅದು ನಿಮಗೆ ತಿಳಿಯುವುದು ಹೇಗೆ? ದಸ್ತಗಿರಿ ಮಾಡಿದ ಮೇಲೆ ಅವರ ಪ್ರಾಣದ

ಆಶೆಯ ಮೇಲೆ ಲಲಿತೆಯನ್ನು ಅವರೇ ಒಪ್ಪಿಸುವರು. ನೀವು ನಿನ್ನಿನ ರಾತ್ರಿಯೂ ಸಹ ನಿದ್ದೆಯಿಲ್ಲದೆ ಬಹು ಆಯಾಸಪಟ್ಟಿರುವಿರಿ; ಪುನಃ ಈ ರಾತ್ರಿಯೂ ಹೋಗಬೇಕು; ಆದುದರಿಂದ ಈಗ ಸ್ವಲ್ಪ ವಿಶ್ರಮಿಸಿಕೊಳ್ಳಿ, ಎಂದು ಹೇಳಿದಳು. ಸೀತಾರಾಮುವಿಗೂ ಸುತ್ತಿ-ಸುತ್ತಿ ಬಹಳ ಆಯಾಸವಾಗಿತ್ತು; ಅಲ್ಲದೆ, ತನ್ನ ಹೆಂಡತಿಯು ಹೇಳಿದ್ದು ಸಮಂಜಸವಾಗಿ ಕಾಣಿಸಿದುದರಿಂದ, ವಿಶ್ರಾಂತಿಗಾಗಿ ಮನೆಯಲ್ಲಿಯೇ ನಿಂತನು.

## ಅಧ್ಯಾಯ ೮

ಇತ್ತಲಾಗಿ ಲಲಿತೆಯು ಗುಪ್ತಸ್ಥಳದಲ್ಲಿ ತನ್ನನ್ನು ಅಪಹರಿಸಿ ತಂದು ಹಾಕಿರುವುದಕ್ಕಾಗಿ ಬಹಳವಾಗಿ ಚಿಂತಿಸತೊಡಗಿದಳು. ಅವಳಿಗೆ ಕಾಲ ಕಾಲಕ್ಕೆ ಸರಿಯಾಗಿ ಒಬ್ಬ ಮುದುಕಿಯು ಬಂದು ಆಹಾರಾದಿಗಳನ್ನು ಕೊಟ್ಟು ಹೋಗುತಲಿದ್ದಳು. ಪ್ರಾರಂಭದಲ್ಲಿ ಒಂದೆರಡು ದಿವಸ ಲಲಿತೆಯು ಆಹಾರವನ್ನು ಸ್ವೀಕರಿಸಿದಳು. ಕೆಲವು ವೇಳೆ ಆ ಮುದುಕಿಯನ್ನು ಮಾತನಾಡಿಸಬೇಕೆಂದು ಆಲೋಚಿಸುತಲಿದ್ದಳು; ಆದರೆ ಅವಳ ಹಿಂದೆ ಉಸ್ಮಾನನು ಇರುತ್ತಲೇ ಇದ್ದನು.

ಒಂದು ದಿನ ಮುದುಕಿಯು ಆಹಾರವನ್ನು ತೆಗೆದುಕೊಂಡು ಬಂದಾಗ, ಹಿಂದಿನ ದಿನ ತಾನು ತಂದಿಟ್ಟಿದ್ದ ಆಹಾರವು ಹಾಗೆಯೇ ಇರುವುದನ್ನು ನೋಡಿದಳು. ಒಂದು ಸಲ ಲಲಿತೆಯ ಕಡೆ ನೋಡಿದಳು. ಲಲಿತೆಯಾದರೋ ಅಳುತ್ತ ಮಲಗಿದ್ದಳು. ಮುದುಕಿಯು ಅವಳ ಹತ್ತಿರ ಹೋಗಿ, ಅವಳ ಶರೀರವನ್ನು ಮುಟ್ಟಲು, ಗಾಬರಿಯಿಂದ ಲಲಿತೆಯು ಎದ್ದು ನಿಂತಳು. ಮುದುಕಿಯು ಬಹಳ ಕನಿಕರವನ್ನು ತೋರಿಸುತ್ತಾ: "ಅಮ್ಮಾ ಲಲಿತೆ, ನೀನು ನಿನ್ನೆ ಆಹಾರವನ್ನು ಯಾಕೆ ತೆಗೆದುಕೊಳ್ಳಲಿಲ್ಲ?" ಎಂದಳು. ಅಷ್ಟರಲ್ಲಿಯೇ ಉಸ್ಮಾನನು ಆ ಮುದುಕಿಯನ್ನು ಕುರಿತು: "ತಾಯಿ, ಎಷ್ಟು ಹೊತ್ತು ಒಳಗಿರುವುದು? ಬನ್ನಿ" ಎಂದು ಕೂಗಲು, ಮುದುಕಿಯು ಹೊರಕ್ಕೆ ಬಂದು ಬಿಟ್ಟಳು. ಈ ರೀತಿಯಾಗಿ ಮೂರನೇ ದಿನವೂ ನಡೆಯಿತು. ಲಲಿತೆಯು ಆಹಾರವನ್ನು ತೆಗೆದುಕೊಳ್ಳುವುದನ್ನು

ಸಂಪೂರ್ಣವಾಗಿ ಬಿಟ್ಟೇಬಿಟ್ಟಳು. ಇನ್ನು ಸುಮ್ಮನಿದ್ದರೆ, ಪ್ರಯೋಜನ ವಿಲ್ಲೆಂದು ಮುದುಕಿಯು ಯಜಮಾನನಿಗೆ ಈ ವಿಚಾರವನ್ನು ತಿಳಿಸಿದಳು. ಅವನೇ ಮಾರನೆಯ ದಿನ ಆಹಾರವನ್ನು ತೆಗೆದುಕೊಂಡು ಹೋಗಿ, ಲಲಿತೆಯನ್ನು ಕುರಿತು:-- "ಲಲಿತೇ, ನೀನು ಆಹಾರವನ್ನು ಯಾಕೆ ತೆಗೆ ದುಕೊಳ್ಳುವದಿಲ್ಲಾ? ಈ ದಿನ ನಾನೇ,-ನಿನ್ನ ಪ್ರೀತಿಪಾತ್ರನೇ,-ಆಹಾರ ವನ್ನು ತಂದಿರುತ್ತೇನೆ, ಸ್ವೀಕರಿಸು" ಎಂದು ಹೇಳಿದನು.

ಲಲಿತೆಯು ಅವನನ್ನು ನೋಡಿದೊಡನೆಯೇ ಹಸಿದ ಹುಲಿಯಂತೆ, ಅವನು ತಂದಿದ್ದ ಆಹಾರವನ್ನು ಅವನ ಮೇಲೆ ಚಲ್ಲಿ, ಒಂದು ಸಲ ತನ್ನ ಉಗ್ರವಾದ ಕಣ್ಣುಗಳಿಂದ ಅವನನ್ನು ನೋಡಿ:- "ಎಲಾ, ಮೂರ್ಖಾ, ನೀನು ಪುನಃ ನನಗೆ ಮುಖವನ್ನು ತೋರಿಸುವುದಕ್ಕೆ ಒಂದೆಯಾ? ನಡೆ, ಹೊರಕ್ಕೆ" ಎಂದು ಹೇಳುತ್ತಾ, ಹತ್ತಿರದಲ್ಲಿಯೇ ಇದ್ದ ನೀರಿನ ಹೂಜಿ ಯನ್ನು ತೆಗೆದು ಅವನ ಮೇಲೆ ರಭಸದಿಂದ ಬಿಸಾಡಿದಳು. ಯಜಮಾನ ನಾದರೋ, ಗಾಬರಿಯಿಂದ ಬಾಗಿಲ ಹೊರಕ್ಕೆ ಹೋಗಿ ಬಿದ್ದನು. ಲಲಿತೆ ಯಾದರೋ, ಬಾಗಿಲನ್ನು ಇಕ್ಕಿಕೊಂಡು, ಅಡ್ಡಳಾಗಿ ಅಲ್ಲಿಯೇ ನಿಂತಳು. ಯಜಮಾನನು ಅವಮಾನಿತನಾಗಿ ಕೊಠಡಿಯ ಬಾಗಿಲಿಗೆ ಬೀಗವನ್ನು ಹಾಕಿಕೊಂಡು ಹೊರಟು ಹೋದನು.

ಸ್ವಲ್ಪ ಹೊತ್ತಿನ ಮೇಲೆ ಲಲಿತೆಯು ಅಳುತ್ತಾ ಬಂದು, ಮಂಚದ ಮೇಲೆ ಬಿದ್ದುಕೊಂಡಳು. ತನ್ನ ಮನಸ್ಸಿನಲಿಯೇ:- "ಹಾ! ದೈವವೇ, ನನ್ನನ್ನು ಎಷ್ಟು ದಿವಸಗಳ ವರೆಗೆ, ಈ ರೀತಿಯಾಗಿ ತೊಂದರೆಗೆ ಸಿಕ್ಕಿಸಿ, ನರಳಿಸುತ್ತಾ ಇರುತ್ತಿಯೆ? ಸ್ವಲ್ಪ ದಿವಸಗಳಲ್ಲಿಯೇ ನನ್ನ ಬಿಡುಗಡೆ ಯಾಗುತ್ತದೆಯೆಂದು ತಿಳಿದಿದ್ದೆನು. ನನ್ನ ಪ್ರಿಯ ಭಾಸ್ಕರರಾದರೋ, ನನ್ನೊಡನೆ ವಿವಾಹವಾಗದಿರುವುದಕ್ಕೆ ಚಿಂತಾಕ್ರಾಂತರಾಗಿ ಕುಳಿತಿರು ವರೆ! ಅಥವಾ ನನಗಾಗಿ ಎಲ್ಲೆಲ್ಲಿಯೋ ಹುಡುಕುತ್ತಲಿರುವರೇ? ನಾನು ಇಲ್ಲದ ಕಡೆಯಲ್ಲಿ ಅವರು ಹುಡುಕಿದರೆ, ನಾನು ಹೇಗೆ ಸಿಕ್ಕುವೆನು? ಆದರೆ ನಾನು ಇಲ್ಲಿರುವ ಸಂಗತಿಯು ಅವರಿಗೆ ಹೇಗೆ ಗೊತ್ತಾಗಬೇಕು? ಇದನ್ನು ತಿಳಿಸುವವರು ಯಾರಾದ್ರೂ ಇರುವರು? ನನಗೆ ಆಹಾರವನ್ನು

ತಂದು ಕೊಡುತ್ತಿರುವ ಮುದುಕಿಯನ್ನು ಮಾತನಾಡಿಸಿ, ನಾನು ಎಲ್ಲಿರುವೆನೆಂಬುದನ್ನು ತಿಳಕೊಳ್ಳೋಣವೆಂದರೆ, ಆ ಮುದುಕಿಯು ಮಾತನಾಡುವಳೇ? ಮಾತನಾಡಿದರೂ ಆ ಮುಸಲ್ಮಾನಕವನು ಕೂಡಲೆ ಹೊರಕ್ಕೆ ಬರುವ ಹಾಗೆ ಕೂಗಿಕೊಳ್ಳುವನಲ್ಲಾ? ಆ ಪಾಪಿ! ಚಂಡಾಲನಾದರೊ 'ನನ್ನನ್ನು ಮದುವೆ ಮಾಡಿಕೋ' ಎಂದು ಬಂದು ಪೀಡಿಸುತ್ತಾನಲ್ಲಾ? ನನ್ನ ಹೃದಯವು, ನನ್ನ ಶರೀರವು, ಅಲ್ಲ, ನನ್ನ ಸರ್ವಸ್ವವೂ ಒಬ್ಬರ ಅಧೀನವಾದ ಮೇಲೆ, ಮತ್ತೊಬ್ಬರಿಗೆ ಹೇಗೆ ಸೇರುವುದು? ಅಲ್ಲದೆ, ನನ್ನ ಪ್ರಿಯರು ಮದುವೆಗೆ ವಿಘ್ನ ಬಂದುದಕ್ಕೆ ನನ್ನಲ್ಲಿ ಉದಾಸೀನರಾಗಿ, ಬೇರೆ ಯಾವಳಲ್ಲಾದರೂ ಅನುರಕ್ತರಾಗಿರುವರೆ? ಛೀ! ಇಲ್ಲ. ಅವರು ನನ್ನ ವಿನಃ ಇತರ ಸ್ತ್ರೀಯರನ್ನೆಲ್ಲ ತಮ್ಮ ಸಹೋದರೆಯರಂತೆ ಭಾವಿಸಿ, ನನ್ನಲ್ಲಿ ಅಚಂಚಲವಾದ ಪ್ರೀತಿಯನ್ನಿಟ್ಟುಕೊಂಡಿರುವರಲ್ಲ! ಇದೇಕೆ, ನಾನು ಹೀಗೆ ಭಾವಿಸಬಹುದೇ? ನಾನು ಇಲ್ಲಿ-ಈ ಸೆರೆಯಲ್ಲಿ ಎಷ್ಟು ದಿವಸಗಳು ಇರುವದು ಸಾಧ್ಯ? ಆ ಪಾಪಿಯು ಯಾವಾಗ ಬಂದು, ಏನನ್ನು ಮಾಡುವನೋ? ಎಂದು ಯೋಚಿಸುತ್ತಿರುವಾಗ, ಗೋಡೆಯ ಹತ್ತಿರ ಬಿದ್ದಿದ್ದ ಒಂದು ಕಾಗದದ ಮೇಲೆ ಅವಳ ದೃಷ್ಟಿಯು ಬಿದ್ದಿತು. ಕೂಡಲೆ ಅದನ್ನು ತೆಗೆದುಕೊಂಡಳು. ಕೊಠಡಿಯಲ್ಲಿ ಸ್ವಲ್ಪ ಬೆಳಕಿದ್ದುದರಿಂದ, ಈ ಕಾಗದದಲ್ಲಿ ಏನಿದೆ? ಎಂಬುದನ್ನು ನೋಡುವುದಕ್ಕೆ ಅನುಕೂಲವಿತ್ತು. ಆ ಕಾಗದದ ಮೇಲೆ ವಿಳಾಸವೇನೂ ಇದ್ದಿಲ್ಲ. ಆದರೂ ಲಲಿತೆಯು ಅದನ್ನು ಬಿಚ್ಚಿ ಕಾಗದವನ್ನು ಓದಹತ್ತಿದಳು. ಕಣ್ಣುಗಳಲ್ಲಿ ನೀರು ಧಾರಾಕಾರವಾಗಿ ಸುರಿಯಲಾರಂಭಿಸಿದುವು! ಮುಖವು ಸ್ವಲ್ಪ ಕಳೆಗುಂದಿತು. ತನ್ನ ಬಿಡುಗಡೆಯ ಕಾಲವು ಬಂದಿತೆಂದು ತಿಳಿದಳು. ಪುನಃ ಪುನಃ ಆ ಕಾಗದವನ್ನು ಓದಿದಳು. ಅದು ತನ್ನ ಪ್ರಿಯನಾದ ಭಾಸ್ಕರನು ಬರೆದ ಪತ್ರವು! ಅವನ ಹಸ್ತಾಕ್ಷರಗಳು!! ಕಾಗದವನ್ನು ಎಷ್ಟು ಸಲ ಓದಿದರೂ ತೃಪ್ತಿಯೇ ಇಲ್ಲ!!!

ಅದರಲ್ಲಿ ಪ್ರಿಯೆ ಲಲಿತೆ:—

ನೀನು ಈಗ ಬಹಳ ಕಷ್ಟಕ್ಕೆ ಸಿಕ್ಕಿರುತ್ತೀಯೋ. ಆದರೂ ಚಿಂತಿಸಬೇಕಾ

ಗಿಲ್ಲ. ಬಹಳ ಕಷ್ಟಪಟ್ಟು ನೀನು ಇರುವ ಸ್ಥಳವನ್ನು ಗೊತ್ತು ಹಚ್ಚಿರು ತ್ತೇನೆ. ನಿನಗೆ ಸ್ವಲ್ಪ ದಿನಗಳಲ್ಲಿಯೇ ಬಿಡುಗಡೆಯಾಗುವುದು; ಆದರೆ ಆ ದಿನ ಬರುವವರಿಗೂ ನೀನು ಮಾತ್ರ ಆಹಾರಾದಿಗಳನ್ನು ಬಿಟ್ಟು ಸುಮ್ಮನೆ ದುಃಖಿಸಬೇಡ. ಸದಾ ನಿನ್ನ ಬಿಡುಗಡೆಯ ಕಾರ್ಯದಲ್ಲಿಯೇ ನಿರತನಾ ಗಿರುವ, ನಿನ್ನ ಪ್ರಿಯ ಭಾಸ್ಕರ.

ಎಂಬುದಾಗಿ ಬರೆದಿತ್ತು. ಲಲಿತೆಯು ಈ ಕಾಗದವನ್ನು ತೆಗೆದು ಭದ್ರ ವಾಗಿ ತನ್ನ ಉಡಿಲಿನಲ್ಲಿಟ್ಟುಕೊಂಡಳು. ಮುದುಕಿಯು ತಂದಿಟ್ಟಿದ್ದ ಆಹಾರವನ್ನು ತೆಗೆದುಕೊಂಡಳು. ಆಹಾರವಾದರೋ ಅಮೃತದೋಪಾ ದಿಯಲ್ಲಿದ್ದಿತು. ತನ್ನ ಬಿಡುಗಡೆಯ ಕಾಲವು ಸ್ವಲ್ಪ ದಿವಸಗಳಲ್ಲಿಯೇ ಬರುವದೆಂದು ತಿಳಿದು, ಅಂದಿನಿಂದ ಸರಿಯಾಗಿ ಆಹಾರವನ್ನು ತೆಗೆದುಕೊ ಳ್ಳುವದು ಉತ್ತಮವೆಂದು ನಿರ್ಧಾರ ಮಾಡಿಕೊಂಡಳು.

ಅತ್ತಲಾಗಿ, ಅದೇರಾತ್ರಿ ಸುಮಾರು ಒಂಬತ್ತು ಗಂಟೆಯ ಹೊತ್ತಿಗೆ ಸರಿಯಾಗಿ ಮೂರು ಜನ ಪೋಲೀಸಿನವರು ಸೀತಾರಾಮುವಿನ ಮನೆಗೆ ಬಂದರು ಅವರು ಬಂದದ್ದನ್ನು ಸೀತಾರಾಮುವು ಕಂಡು, ಯಾವ ಯಾವ ಸಾಮಾನುಗಳನ್ನು ತಂದಿರುವುದಾಗಿ ಕೇಳಿದನು ಅವರಲ್ಲೊಬ್ಬನು: "ಸ್ವಾಮಿ, ರಾಯರು ನಮ್ಮ ಹತ್ತಿರ ನಾಲ್ಕು ಜೊತೆ ಸ್ಪ್ರಿಂಗ್ ಕೋಳಗ ಳನ್ನು ಕೊಟ್ಟಿರುತ್ತಾರೆ. ಅಲ್ಲದೆ, ನಮ್ಮ ಹತ್ತಿರ ಪಿಸ್ತೂಲುಗಳು ಇದ್ದೇ ಇರುವವು" ಎಂದನು.

ಸೀತಾರಾಮು: ನಿಮ್ಮ ರಾಯರು ಯಾವಾಗ ಬರುವವೆಂದು ಹೇಳಿರುವರು? ಇಲ್ಲಿಗೇ ಬರುವರೋ ಅಥವಾ ನಾವು ಹೋಗುವ ಸ್ಥಳಕ್ಕೋ?

ಪೋಲೀಸ: —ಅವರು ನೀವು ಹೇಳಿರುವ ಸ್ಥಳಕ್ಕೇ ಬರುತ್ತೇ ವೆಂದು ಹೇಳಿರುತ್ತಾರೆ. ನಾವು ಇಲ್ಲಿಂದ ಹನ್ನೆರಡು ಗಂಟೆಗೆ ಹೊರ ಟರೆ, ಅವರು ಬರುವ ಹೊತ್ತಿಗೆ ನಾವೂ ಅಲ್ಲಿಗೆ ಹೋಗಬಹುದು.

ಸೀತಾರಾಮು: "ಹಾಗೆಯೇ ಆಗಲಿ. ಹನ್ನೆರಡು ಗಂಟೆಗೇ ಹೊರ ಡೋಣ. ಅಲ್ಲಿಯವರೆಗೂ ನೀವು ವಿಶ್ರಮಿಸಿಕೊಳ್ಳಿರಿ;" ಎಂದು ಹೇಳಿ

ಹತ್ತಿರದಲ್ಲಿಯೇ ಇದ್ದ ಕೊಠಡಿಯ ಬಾಗಿಲನ್ನು ತೆರೆದು, ಒಂದು ದೀಪವನ್ನು ತಂದಿಟ್ಟು, ತಾನು ಒಳಕ್ಕೆ ಹೊರಟು ಹೋದನು. ಪೋಲೀಸಿನವರಾದರೋ ಕೊಠಡಿಯನ್ನು ಪ್ರವೇಶಿಸಿ ಒಳಗೆ ಮಲಗಿಕೊಂಡರು.

ಸೀತಾರಾಮನು ತನ್ನ ಕಿರುಮನೆಗೆ ಹೋದವನು, ಹನ್ನೆರಡು ಗಂಟೆಯ ವರೆಗಿನ ಕಾಲವನ್ನು ಯೋಚನೆಯಲ್ಲಿಯೇ ಕಳೆದನು. ಯಾವಾಗ ಅವನ ದೃಷ್ಟಿಯು ಕೈಗಡಿಯಾರದ ಮೇಲೆ ಹೋಯಿತೋ, ಆಗ ಎದ್ದು ಬಂದು ಪೋಲೀಸಿನವರನ್ನು ಎಬ್ಬಿಸಿಕೊಂಡು, ಕಳ್ಳರ ಮನೆಯನ್ನು ಕುರಿತು ಹೊರಟನು ಅಲ್ಲಿಗೆ ಹೋಗಿ ಅವನು ಪೋಲೀಸಿನವರನ್ನು ಕುರಿತು: "ಅಯ್ಯಾ ಪೋಲೀಸಿನವರೇ, ಈಗಾಗಲೇ ಒಂದು ಗಂಟೆಯ ಸಮಯ. ನಿಮ್ಮ ರಾಯರು ಇನ್ನೂ ಬಂದಿರುವದಿಲ್ಲ. ಬರುವದು ತಡವಾಗುತ್ತದೆಯೊ ಏನೊ? ಆದರೂ ನಾವು ಈಗ ಗುಪ್ತ ಸ್ಥಳಗಳಲ್ಲಿ ಅಡಿತುಕೊಳ್ಳೋಣ" ಎಂದವನು. ಅದಕ್ಕೆ ಪೋಲೀಸಿನವರು: "ಸ್ವಾಮೀ, ತಾವು ಯಾವ ರೀತಿ ಹೇಳುವಿರೊ, ಹಾಗೆ ನಾವೆಲ್ಲರೂ ರಾಯರು ಬರುವ ವರೆಗೇನೋ ಎಲ್ಲಿಯಾದರೋ ಅಡಿತುಕೊಳ್ಳುವೆವು ನೀವೂ ಎಲ್ಲಾದರೂ ಅಡಿತುಕೊಳ್ಳಿರಿ. ರಾಯರು ಬಂದನಂತರ ನೀವು ನಿಮ್ಮ ಹತ್ತಿರವಿರುವ ಸಿಳ್ಳೆಯನ್ನು ಊದಿದರೆ, ನಾವೆಲ್ಲರೂ ಒಂದು ಸೇರುವೆವು" ಎಂದರು.

ಸೀತಾರಾಮ:—ಹೌದು. ನೀವು ಹಾಗೆಯೇ ಮಾಡಿರಿ. ಯಾಕೆಂದರೆ, ನಾವು ಇಲ್ಲಿರುವ ಸುಳಿವು ಆ ಕಳ್ಳರಿಗೆ ಗೊತ್ತಾಗಬಾರದು. ನೀವು ಇನ್ನು ಹೋಗಿರಿ; ನಾನು ಹತ್ತಿರದಲ್ಲಿಯೇ ಅಡಿತುಕೊಳ್ಳುವೆನು. ಸಿಳ್ಳೆಯ ಶಬ್ದವಾದೊಡನೆಯೇ ಎಲ್ಲರೂ ತಟ್ಟನೆ ಬಂದು ಬಿಡಿರಿ, ಎಂದು ಹೇಳುತ್ತ ಎದುರಿಗಿದ್ದ ಜಗುಲಿಯ ಮೇಲೆ ಹಳೆಯ ಒಂದು ಕಂಬಳಿಯನ್ನು ಹೊದ್ದುಕೊಂಡು ಸೀತಾರಾಮನು ಮಲಗಿದ ನಂತರ, ಪೋಲೀಸಿನವರು ಬೇರೆ ಬೇರೆ ಕಡೆಗೆ ಹೊರಟು ಹೋದರು. ಒಂದು ಗಂಟೆಯಾದ ಮೇಲೆ ಸೀತಾರಾಮನು ಮಲಗಿದ್ದ ಜಗುಲಿಯ ಮೇಲೆ ಎರಡು ವ್ಯಕ್ತಿಗಳು ಬಂದು ಕುಳಿತವು. ಸೀತಾರಾಮನ ಹತ್ತಿರ ಹೋಗಿ ಅವನ ಮೂಗಿಗೆ ಏನೋ ತೋರಿಸಿದರು. ಅವರಲ್ಲೊಬ್ಬನು:"ನರಸಿಂಗಾ, ಈ

ಸೀತಾರಾಮುವು ನಮ್ಮ ಒಳಗುಟ್ಟನ್ನೆಲ್ಲಾ ಬೈಲಿಗೆಳೆದು, ನಮಗೆ ಶಿಕ್ಷೆಗೊಡಿಸಬೇಕೆಂದು ಬಹಳವಾಗಿ ಕಷ್ಟಪಡುತ್ತಲಿದ್ದಾನೆ. ಇವನನ್ನು ಈಗಲೇ ಬಂಧಿಸಿ, ನಾವೇ ಇವನಿಗೆ ತಕ್ಕ ಶಿಕ್ಷೆ ಮಾಡದಿದ್ದರೆ, ನಮ್ಮ ಕಾರ್ಯವೆಲ್ಲವೂ ವ್ಯರ್ಥವಾಗುವದು. ಇವನು ನಮ್ಮ ಗುಪ್ತ ಸ್ಥಳವನ್ನು ಮೋಸದಿಂದ ಬಂದು ತಿಳಿದುಕೊಂಡು ಹೋದುದು ನಮಗೆ ಗೊತ್ತಾಗದಿದ್ದರೆ, ಎಷ್ಟು ಅನರ್ಥವಾಗುತಲಿತ್ತು? ಏನೇ ಆಗಲಿ, ಈಗ ಕೈಗೆ ಸಿಕ್ಕಿದವರನ್ನು ಬಿಡಬಾರದು. ನಿನ್ನ ಹತ್ತಿರಿರುವ ಸ್ಪ್ರಿಂಗ್‌ಕೋಳಗಳನ್ನು ಇವನಿಗೆ ತೊಡಿಸು'' ಎಂದು ಹೇಳಿದನು. ಇಬ್ಬರೂ ಸೇರಿ ಕೋಳಗಳನ್ನು ತೊಡಿಸಿದರು. ಅಷ್ಟು ಹೊತ್ತಿಗೆ ಸೀತಾರಾಮುವಿಗೆ ಎಚ್ಚರವಾಯಿತು. ಅವನು ಕಿರಿಚಿಕೊಳ್ಳುತ್ತಾ ಮೇಲಕ್ಕೇಳಲು ಹೋದನು. ಆಗಲಿಲ್ಲ. ಅಷ್ಟರಲ್ಲಿಯೇ ನರಸಿಂಗನು ಮುಂದುವರಿದು, ತನ್ನ ಹತ್ತಿರವಿದ್ದ ಹಗ್ಗದಿಂದ ಅವನ ಕಾಲುಗಳನ್ನು ಬಲವಾಗಿ ಬಿಗಿದನು. ಒಂದು ಬಟ್ಟೆಯಿಂದ ಅವನ ಕಣ್ಣುಗಳನ್ನು ಸಹ ಕಟ್ಟಿ ಅವನನ್ನು ಹೊತ್ತುಕೊಂಡು ಹೋದರು. ಸೀತಾರಾಮು, ಎಷ್ಟು ಬಾರಿ ಕೂಗಿದರೂ ಯಾರೂ ಬರಲಿಲ್ಲ. ಅವನು ತನ್ನ ಮನಸ್ಸಿನಲ್ಲಿ: ''ಈ ಪೋಲೀಸಿನವರು ನನಗೇನಾದರೂ ಈ ರೀತಿ ಮಾಡಿದರೆ? ಅವರಿಗೂ ಈ ಕಳ್ಳತನಕ್ಕೂ ಏನಾದರೂ ಸಂಬಂಧವಿದೆಯೆ? ಅಥವಾ ಆ ದುರಾತ್ಮರು ಅವರನ್ನೆಲ್ಲಾ ಕೀಲಿಸಿ, ನನ್ನನ್ನೂ ಹಿಡಿದಿರಬಹುದೇ'' ಎಂದು ನಾನಾ ರೀತಿ ಯೋಚಿಸುತ್ತಲಿರುವಲ್ಲಿ, ಕಳ್ಳರು ಅವನನ್ನು ಒಂದು ಕೊಠಡಿಯ ಒಳಕ್ಕೆ ಹೊತ್ತುಕೊಂಡು ಹೋಗಿ, ಅಲ್ಲಿಯೇ ಬಿಟ್ಟು ಕಣ್ಣಿನ ಬಟ್ಟೆಗಳನ್ನು ಮಾತ್ರ ಬಿಚ್ಚಿ ಅಲ್ಲಿಂದ ಬಾಗಿಲಿಗೆ ಬೀಗ ಹಾಕಿಕೊಂಡು ಹೊರಟು ಹೋದರು. ಸೀತಾರಾಮುವಾದರೋ ಮುಂದೆ ಏನು ಮಾಡಬೇಕೆಂದು ತಿಳಿಯದೆ ಶೋಕಿಸುತ್ತಾ, ಯೋಚನಾಪರವಶನಾಗಿ ಅಲ್ಲಿಯೇ ಕುಳಿತನು. ತಾನು ಸೆರೆಯಾದುದಕ್ಕಿಂತಲೂ, ತಾನು ಹಿಡಿದ ಕೆಲಸವು ಪೂರ್ತಿಯಾಗಲಿಲ್ಲವಲ್ಲ? ಎಂಬ ಯೋಚನೆಯೇ ಅವನನ್ನು ಬಹಳವಾಗಿ ತೊಂದರೆಪಡಿಸುತಲಿತ್ತು.

---

# ಅಧ್ಯಾಯ ೯

ಪ್ರತಿ ದಿವಸವೂ ಸೀತಾರಾಮುವು ಭಾಸ್ಕರನ ಮನೆಗೆ ತಪ್ಪದೆ ಹೋಗು ತಲಿದ್ದು, ಹೆಚ್ಚಿಗೆ ಸಂಗತಿಯನ್ನೆಲ್ಲ ಅವನಿಗೆ ತಿಳಿಸುತಲಿದ್ದನು. ಭಾಸ್ಕ ರನಾದರೊ ಮಾಧವರಾಯರ ಮನೆಯಲ್ಲಿಯೇ ಅಹೋರಾತ್ರಿ ನಿದ್ರಾ ಹಾರಾದಿಗಳನ್ನು ಬಿಟ್ಟು ಚಿಂತಿಸುತ್ತಲಿದ್ದುಬಿಟ್ಟನು. ಮಾಧವರಾಯರ ಪತ್ನಿ ವಿಮಲೆಯಾದರೋ ತನ್ನ ದುಃಖವನ್ನೆಲ್ಲ ತಾನೇ ನುಂಗಿಕೊಂಡು, ಭಾಸ್ಕರನಿಗೆ ಆಗಾಗ್ಗೆ ಸಮಾಧಾನೋಕ್ತಿಗಳನ್ನು ಹೇಳುತಲಿದ್ದಳು.

ಸೀತಾರಾಮುವು ಭಾಸ್ಕರನಿಗೆ ಪ್ರತಿದಿವಸವೂ ಬಂದು ಸಮಾಚಾರ ವನ್ನು ಹೇಗೆ ತಿಳಿಸುತಲಿದ್ದನೋ, ಹಾಗೆಯೇ ನಾರಾಯಣನೂ ಆಗಾಗ್ಗೆ ಬಂದು, ಮಾಧವರಾಯರಿಗೆ ಪತ್ತೆ ಹಚ್ಚುವ ಕೆಲಸದಲ್ಲಿ ತಾನು ಬಹಳ ಶ್ರಮ ವಹಿಸುತ್ತಿರುವುದಾಗಿಯೂ, ಪತ್ತೆಯಾಗುವ ಸಂಭವಗಳಿರುವುದಾ ಗಿಯೂ ತಿಳಿಸುತಲಿದ್ದನು.

ಹೀಗಿರುವಲ್ಲಿ ಪ್ರತಿ ದಿವಸವೂ ಬರುತ್ತಿದ್ದ ಸೀತಾರಾಮುವು ಈಗೆ ರಡು-ಮೂರು ದಿನಗಳಿಂದ ಭಾಸ್ಕರನನ್ನು ಕಾಣುವುದಕ್ಕೆ ಬರಲೇ ಇಲ್ಲ. ಭಾಸ್ಕರನಿಗಾದರೋ ಕಾಲವನ್ನು ಕಳೆವುದು ಬಹಳ ದುಸ್ತರವಾಗಿ ಹೋ ಯಿತು; ಆದರೂ ಸೀತಾರಾಮುವು ಪತ್ತೆ ಹಚ್ಚುವ ಕಾರ್ಯದಲ್ಲಿಯೇ ತನ್ನ ಕಾಲವನ್ನೆಲ್ಲ ಪೂರ್ಣವಾಗಿ ಕಳೆಯುತ್ತಿದ್ದು, ತನ್ನ ಮನೆಗೆ ಬರುವು ದಕ್ಕೂ ಅವಕಾಶವಿಲ್ಲವೆಂದು ಭಾಸ್ಕರನು ಮೊದಲೆರಡು ದಿನ ಯೋಚಿಸಿ ದನು. ಎಷ್ಟು ಯೋಚಿಸಿದರೂ ಅವನ ಮನಸ್ಸು ಸ್ಥಿರವಾಗಲಿಲ್ಲ. ಕಡೆಗೆ ಒಂದು ಸಲ ಸೀತಾರಾಮುವಿನ ಮನೆಗೆ ಹೋಗಿ ಬರೋಣವೆಂದು ಯೋಚಿಸಿ, ಅವನ ಮನೆಯನ್ನು ಕುರಿತು ಹೊರಟನು.

ಭಾಸ್ಕರನು ಸೀತಾರಾಮುವಿನ ಮನೆಯನ್ನು ಸೇರಿದನು. ಮನೆಯ ಬಾಗಿಲು ಮುಚ್ಚಿತ್ತು. "ಸೀತಾರಾಮು-ಸೀತಾರಾಮು"ಎಂದು ಎರಡು ಸಲ ಕೂಗಿದನು. ಅವನ ಆ ಕೂಗಿಗೆ ಉತ್ತರವೇ ಬರಲಿಲ್ಲ. ಸೀತಾ

ರಾಮುವು ಮನೆಯಲ್ಲಿಲ್ಲವೆಂದು ಹೊರಡುವುದರಲ್ಲಿದ್ದನು; ಅಷ್ಟರಲ್ಲಿಯೇ ಒಬ್ಬ ಮುದುಕಿಯು ಬಂದು ಬಾಗಿಲನ್ನು ತೆರೆದಳು. ಭಾಸ್ಕರನು ಮುದಕಿಯನ್ನು ಕುರಿತು:—'ಸೀತಾರಾಮುವು ಮನೆಯಲ್ಲಿಲ್ಲವೆ?' ಎಂದು ಕೇಳಿದನು. ಆ ಮುದುಕಿಯು: ಅಪ್ಪಾ, ಅವರು ಈಗ ಮೂರು ದಿವಸಗಳಿಂದ ಮನೆಗೇ ಬಂದಿರುವುದಿಲ್ಲ, ಎಂದು ಹೇಳಿ ಸುಮ್ಮನಾದಳು. ಭಾಸ್ಕರನು ಪುನಃ:— "ನಿಮ್ಮ ಯಜಮಾನನಿಯವರು ಏನು ಮಾಡುತಲಿದ್ದಾರೆ?"

ಮುದುಕಿ: ಅವರು ತಮ್ಮ ಕೊಠಡಿಯಲ್ಲಿರುವರು.

ಭಾಸ್ಕರ: ಭಾಸ್ಕರನು ತಮ್ಮನ್ನು ನೋಡುವುದಕ್ಕೆ ಬಂದಿರುವನೆಂದು ದಯವಿಟ್ಟು ತಿಳಿಸುವಿಯಾ?

ಮುದುಕಿ: ತಿಳಿಸುವೆನು. ಒಳಕ್ಕೆ ಬಂದು ಕುಳಿತುಕೊಳ್ಳಿರಿ, ಎಂದು ಹೇಳಿ ಹೊರಟು ಹೋದಳು. ಭಾಸ್ಕರನು ಒಳಕ್ಕೆ ಪ್ರವೇಶಿಸದೆ ಹೊರಗೇ ನಿಂತಿದ್ದನು. ಸುಶೀಲೆಯಾದರೊ ಮೂರು ದಿನಗಳಿಂದ ನಿದ್ರಾಹಾರಾದಿಗಳನ್ನು ಬಿಟ್ಟು, ತನ್ನ ಪತಿಯ ವಿಷಯವಾಗಿಯೇ ಚಿಂತಿಸುತ್ತಾ-ಅಳುತ್ತಾ ಕಾಲವನ್ನು ಕಳೆಯುತ್ತಲಿದ್ದಳು. ಕಳ್ಳರು ತನ್ನ ಪತಿಯನ್ನು ಸೆರೆಯಲ್ಲಿ ಹಾಕಿರಬೇಕೆಂದು ಆಗಾಗ್ಗೆ ಯೋಚಿಸುತಲಿದ್ದಳು. ಈ ಯೋಚನೆಯಲ್ಲಿಯೇ ಮಗ್ನಳಾಗಿರುವಾಗ ಮುದುಕಿಯು ಅವಳ ಹತ್ತಿರಕ್ಕೆ ಹೋಗಿ:— "ಅಮ್ಮಾ, ಭಾಸ್ಕರರಾಯರು ಬಂದಿರುವರು; ನಿಮಗೆ ತಿಳಿಸೆಂದು ಹೇಳಿದರು" ಎಂದಳು. ಭಾಸ್ಕರನನ್ನು ಕೇಳಿದರೆ, ತನ್ನ ಪತಿಯ ವಿಚಾರವಾವುದಾದರೂ ತಿಳಿಯಬಹುದೆಂದು ಯೋಚಿಸಿ, ಸುಶೀಲೆಯು ಅವನನ್ನು ಕಾಣುವುದಕ್ಕಾಗಿ ಕೊಠಡಿಯಿಂದ ಹೊರಕ್ಕೆ ಬಂದಳು. ಅನಂತರ ಭಾಸ್ಕರನೂ ಒಳಕ್ಕೆ ಬಂದು, ಒಂದು ಕುರ್ಚಿಯ ಮೇಲೆ ಕುಳಿತನು. ಸುಶೀಲೆಯೂ, ಮುದುಕಿಯೂ ಒತ್ತಟ್ಟಿಗೆ ನಿಂತಿದ್ದರು. ಭಾಸ್ಕರನು ಸುಶೀಲೆಯನ್ನುದ್ದೇಶಿಸಿ:— "ಅಮ್ಮಾ, ನಿಮ್ಮ ಯಜಮಾನರು ಈಗ ಮೂರು ದಿನಗಳಿಂದ ಮನೆಗೆ ಬರದಿರಲು ಕಾರಣವೇನು?" ಎಂದು ಕೇಳಿದನು.

ಇದೇ ಪ್ರಶ್ನೆಯ ಉತ್ತರ ನಿರೀಕ್ಷಣೆಗಾಗಿ ಬಂದಿದ್ದ ಸುಶೀಲೆಗೆ ಇದಕ್ಕೇನು ಉತ್ತರ ಕೊಡಬೇಕೆಂಬುದು ಗೊತ್ತಾಗಲಿಲ್ಲ. ಅಲ್ಲದೆ, ಪರ ಪುರುಷರೊಡನೆ ಮಾತನಾಡುವುದಕ್ಕೆ ಮನಸ್ಸು ಹಿಂತೆಗೆಯುತಲಿತ್ತು. ಭಾಸ್ಕರನು ಪುನಃ — "ತಾಯಿ, ನನ್ನನ್ನು ನಿಮ್ಮ ಸಹೋದರನೆಂದು ತಿಳಿದು, ತಾವು ನನ್ನ ಪ್ರಶ್ನೆಗಳಿಗೆಲ್ಲ ದಯವಿಟ್ಟು ಉತ್ತರವನ್ನು ಕೊಡಿ" ಎಂದನು. ಆಗ ಸುಶೀಲೆಗೆ ಸ್ವಲ್ಪ ಧೈರ್ಯ ಬಂದಿತು. ಆಕೆಯು:— ನನಗೆ ಈ ವಿಚಾರವೇ ಗೊತ್ತಿಲ್ಲ. ತಮಗೇನಾದರೂ ಗೊತ್ತಿದ್ದರೆ, ದಯವಿಟ್ಟು ತಿಳಿಸಬೇಕು" ಎಂದಳು.

ಭಾಸ್ಕರ:— ತಾಯಿ, ಸೀತಾರಾಮನು ಯಾವ ದಿನ ಮನೆಯಿಂದ ಹೊರಟು ಹೋದುದು?

ಸುಶೀಲೆ: ಅವರು ಹೊರಟು ಹೋಗಿ, ಇಂದಿಗಾಗಲೇ ಮೂರು ದಿನಗಳಾದವು.

ಭಾಸ್ಕರ: ಅವನು ಹೋಗುವ ಸ್ಥಳವನ್ನು ನಿಮಗೇನಾದರೂ ತಿಳಿಸಿರುವನೆ?

ಸುಶೀಲೆ: —ಅವರು ಮೊನ್ನೆ ಆದಿತ್ಯವಾರ ಬೆಳಿಗ್ಗೆ ಎಲ್ಲಿಗೋ ಹೋಗಿದ್ದು, ಮನೆಗೆ ಸುಮಾರು ಹನ್ನೊಂದು ಗಂಟೆಯ ಹೊತ್ತಿಗೆ ಬಂದರು. ಬಹಳ ಅವಸರದಿಂದ ಊಟಮಾಡಿ ಎದ್ದರು. ಅನಂತರ ತಮ್ಮ ಉಡು ಪನ್ನೆಲ್ಲಾ ಹಾಕಿಕೊಂಡು ಹೊರಟರು. ಅಷ್ಟರಲ್ಲಿ ನಾನು ಹೋಗಿ:— "ನೀವು ಈಗ ಎಲ್ಲಿಗೆ ಹೊರಟಿರಿ?" ಎಂದು ಕೇಳಿದೆ. ಸ್ವಲ್ಪ ಕೆಲಸವಿದೆ, ಎಂದು ಹೇಳಿದರು. ನಾನು ಬಹಳ ಒತ್ತಾಯ ಮಾಡಿ ಕೇಳಿದ್ದರಿಂದ, 'ಲಲಿತೆಯನ್ನು ಹೊತ್ತುಕೊಂಡು ಹೋಗಿರುವವರ ಸುಳಿವು ಗೊತ್ತಾಗಿದೆ. ಆ ಕಳ್ಳರು ಲಲಿತೆಗೆ ಒಂದು ಕಾಗದವನ್ನು ತಲುಪಿಸುವರು. ಅವರ ಗುಪ್ತ ಸ್ಥಳವನ್ನು ಕಂಡು ಹಿಡಿಯಲು ಹೋಗಬೇಕು' ಎಂದರು.

ಭಾಸ್ಕರ: — ಅನಂತರ ಹೊರಟನೇನು?

ಸುಶೀಲೆ: — ಇಲ್ಲ. ಕಳ್ಳರು ಇರುವ ಸ್ಥಳವು ಗೊತ್ತಾಗಿರುವದ ರಿಂದ, ಅವರನ್ನೆಲ್ಲಾ ರಾತ್ರಿಯಲ್ಲಿ ದಸ್ತಗಿರಿ ಮಾಡುವುದಾಗಿ ಹೇಳಿದರು;

ನಾನು ರಾತ್ರಿ ದಸ್ತಗಿರಿ ಮಾಡುವ ಹಾಗಿದ್ದರೆ ಈಗ ಯಾಕೆ ಹೋಗಬೇಕು? ರಾತ್ರಿಯೇ ಪೋಲೀಸಿನವರನ್ನು ಕರೆದುಕೊಂಡು ಹೋಗಿ, ಎಲ್ಲರನ್ನೂ ಹಿಡಿದ ಮೇಲೆ ಲಲಿತೆ ಇರುವ ಸ್ಥಳವು ತಾನಾಗಿಯೇ ಗೊತ್ತಾಗುವದು. ಈಗ ಸುಮ್ಮನೆ ಯಾಕೆ ತೊಂದರೆ? ಎಂದು ಹೇಳಿದೆ. ಅನಂತರ, ಅವರು ಮನೆಯನ್ನು ಬಿಟ್ಟು ಹೊರಡಲೇ ಇಲ್ಲ. ರಾತ್ರಿ ಸುಮಾರು ಹತ್ತು ಗಂಟೆಯ ಹೊತ್ತಿಗೆ ಮೂರು ಜನ ಪೋಲೀಸಿನವರು ಬಂದರು. ಅವರ ಜೊತೆಯಲ್ಲಿ ಹನ್ನೆರಡು ಗಂಟೆಗೆ ಹೊರಟು ಹೋದವರು ಇನ್ನೂ ಬಂದಿರುವದಿಲ್ಲ, ಎಂದು ಹೇಳಿ ಸುಮ್ಮನಾದಳು.

ಭಾಸ್ಕರ:—ಹಾಗಾದರೆ, ಆ ದುರಾತ್ಮರೇ ಸೀತಾರಾಮುವನ್ನು ಸೆರೆ ಹಿಡಿದಿರಬೇಕು! ಅದನ್ನು ನಾನು ಪತ್ತೆ ಹಚ್ಚುವೆನು. ಈಗ ನೀವು ಒಬ್ಬರೇ ಮನೆಯಲ್ಲಿರುವಿರೇನು?

ಸುಶೀಲೆ:—ಹೌದು. ನನ್ನ ಜೊತೆಗೆ ಈ ಮುದುಕಿಯೊಬ್ಬಳಿರುವಳು.

ಭಾಸ್ಕರ:— ನೀವು ಈ ಮನೆಯಲ್ಲಿರುವುದು ನನಗೆ ಹಿತವಾಗಿ ಕಾಣುವುದಿಲ್ಲ. ಆ ದುರಾತ್ಮರು ಮುಂದೇನು ಮಾಡುವರೋ ಹೇಳಲಾಗುವದಿಲ್ಲ!

ಸುಶೀಲೆ: ಅದಕ್ಕೆ ನಾವೇನು ಮಾಡಬೇಕು?

ಭಾಸ್ಕರ: ಹಾಗಾದರೆ, ನೀವು ನಿಮ್ಮ ತೌರುಮನೆಗೆ ಹೋಗುವಿರೇನು?

ಸುಶೀಲೆ:—ನಾನು ತೌರುಮನೆಗೆ ಹೇಗೆ ಹೋಗಲಿ? ಅವರ ವಿಚಾರವೇನೂ ನನಗೆ ತಿಳಿದಿಲ್ಲ. ಇಲ್ಲಿಯಾದರೆ ತಮ್ಮಂಥವರ ಸಹಾಯದಿಂದ ಅವರ ಪತ್ತೆ ಹಚ್ಚುವ ಕಾರ್ಯವನ್ನು ಮಾಡಬಹುದು. ಅಲ್ಲಿ ಹೋಗಿ ಕುಳಿತು, ನಾನೇನು ಮಾಡಲಿ?

ಭಾಸ್ಕರ: ಹಾಗಾದರೆ, ನಾನು ಮನೆಗೆ ಹೋಗಿ ನಮ್ಮ ಅತ್ತೆಯವರನ್ನು ಕಳುಹಿಸುವೆನು. ಅವರ ಜೊತೆಯಲ್ಲಿ ನಮ್ಮ ಮನೆಗೆ ಬಂದು, ಅಲ್ಲಿಯೇ ಇರ್ರಿ. ನಿಮಗೆ ಅಲ್ಲಿ ಯಾವ ರೀತಿಯಾದ ತೊಂದರೆಯೂ ಇಲ್ಲ. ಅದನ್ನು ನಿಮ್ಮ ಮನೆಯೆಂದೇ ತಿಳಿದು, ನೀವು ಇರಬಹುದು.

ನಾನೂ ನಿಮ್ಮ ಸಹೋದರನೆಂದೇ ತಿಳಿಯಿರಿ. ನಾನು ಸೀತಾರಾಮು ವನ್ನು ಪತ್ತೆ ಹಚ್ಚುವೆನು. ಆದಕ್ಕಾಗಿ ನೀವು ಸ್ವಲ್ಪವೂ ಯೋಚಿಸಬೇಕಾ ಗಿಲ್ಲ, ಎಂದು ಹೇಳಿ ಅಲ್ಲಿಂದ ಹೊರಟನು.

ಅಲ್ಲಿಂದ ಹೊರಟವನು ಇನ್ಸ್ಪೆಕ್ಟರರನ್ನು ಕಾಣಬೇಕೆಂದು ಠಾಣೆಗೆ ಬಂದನು. ಅವನು ಠಾಣೆಯನ್ನು ಪ್ರವೇಶ ಮಾಡಿದಾಗ ನಾರಾ ಯಣರಾಯರೂ, ಇನ್ಸ್ಪೆಕ್ಟರರೂ ಮಾತನಾಡುತ್ತ ಕುಳಿತಿದ್ದರು. ಮೇಜಿನ ಮೇಲೆ ಕೆಲವು ಕಾಗದಗಳು ಇದ್ದವು. ಭಾಸ್ಕರನು ಒಳಕ್ಕೆ ಪ್ರವೇಶಿಸಿದೊಡನೆಯೇ ಇನ್ಸ್ಪೆಕ್ಟರರು ಕಾಗದಗಳನ್ನೆಲ್ಲಾ ಡ್ರಾಯರ್ ನಲ್ಲಿ ಹಾಕಿ ಅದಕ್ಕೆ ಬೀಗ ಹಾಕಿದರು. ಭಾಸ್ಕರನು ಇನ್ಸ್ಪೆಕ್ಟರರಿಗೆ ವಂದಿಸಿ, ಒಂದು ಕುರ್ಚಿಯ ಮೇಲೆ ಕುಳಿತುಕೊಂಡನು.

ನಾರಾಯಣ: - ಭಾಸ್ಕರ ಇದೇನು? ಇಷ್ಟು ದೂರ ಬಂದಿರುವೆ ಯಲ್ಲಾ?

ಭಾಸ್ಕರ:-"ಇನ್ಸ್ಪೆಕ್ಟರವರ ಹತ್ತಿರ ಮಾತನಾಡಬೇಕಾಗಿತ್ತು" ಎಂದು ಹೇಳುತ್ತಾ, ಇನ್ಸ್ಪೆಕ್ಟರವರನ್ನು ಕುರಿತು: ಇನ್ಸ್ಪೆಕ್ಟರೇ, ಐದು ನಿಮಿಷ ಅವಕಾಶವಿದೆಯೇ? ಎಂದು ಕೇಳಿದನು.

ಇನ್:— ಓಹೋ! ಐದು ನಿಮಿಷವಲ್ಲದಿದ್ದರೆ ಹತ್ತು ನಿಮಿಷವಾಗಲಿ.

ಈ ಮಾತನ್ನು ಕೇಳಿ ನಾರಾಯಣರಾಯನು ಅಸಮಾಧಾನದಿಂದ ಎದ್ದು ಹೊರಟು ಹೋದನು.

ಭಾಸ್ಕರ: ಇನ್ಸ್ಪೆಕ್ಟರೇ, ಈಗ ಮೂರು ದಿವಸಗಳಿಂದ ಸೀತಾ ರಾಮುವು ಅದೃಶ್ಯವಾಗಿರುವ ವಿಚಾರವು ತಮಗೆ ತಿಳಿದಿದೆಯೇ?

ಇನ್:— ಓಹೋ ತಿಳಿದಿದೆ. ನಾರಾಯಣರಾಯರು ಈಗ ತಾನೇ ಹೇಳಿದರು.

ಭಾಸ್ಕರ:— ಈಗ ಲಲಿತೆಯ ಜೊತೆಗೆ ಸೀತಾರಾಮುವೂ ಇಲ್ಲದೆ ಆಗಿದ್ದಾನೆ. ಅದಕ್ಕೆ ಮುಂದೇನು ಮಾಡಬೇಕು?

ಇನ್:— ಸ್ವಾಮಿ, ಅವರು ಲಲಿತೆಯನ್ನು ಹುಡುಕುವ ಕಾರ್ಯಕ್ಕೆ ಏತಕ್ಕಾಗಿ ಹೋಗಬೇಕಾಗಿತ್ತು? ನಾರಾಯಣರಾಯರು ಬಹಳ ಶ್ರಮ

ದಿಂದ ಪತ್ತೆ ಹಚ್ಚುವ ಕೆಲಸವನ್ನು ಸಾಗಿಸುತ್ತಾ ಇದ್ದಾರೆ. ಅವರು ಮೊದಲೇ ಹೇಳಿದರಲ್ಲಾ, ಈ ಕಾರ್ಯಕ್ಕೆ ಹೋಗಬೇಡಿರೆಂದು?

ಭಾಸ್ಕರ:—ಏನೋ, ಆದದ್ದಾಗಿ ಹೋಯಿತು. ಈಗ ಏನು ಮಾಡಬೇಕು? ಸೀತಾರಾಮುವಿನ ಮನೆಯಲ್ಲಿಯಾದರೋ ಅವನ ಹೆಂಡತಿಯು ಆಹಾರಾದಿಗಳನ್ನು ಬಿಟ್ಟು ಸದಾ ಅಳುತ್ತಾ ಇರುವಳು. ಅಲ್ಲದೆ, ಅವರ ಮನೆಯಲ್ಲಿ ದೊಡ್ಡವರು ಮತ್ತಾರೂ ಇಲ್ಲ. ಈಗ ತಾನೆ ನಾನು ಅವರ ಮನೆಯಿಂದ ಬಂದಿರುತ್ತೇನೆ.

ಇನ್:—ಹಾಗಾದರೆ ಆಕೆಯನ್ನು ಅವರ ತೌರುಮನೆಗೆ ಕಳುಹಿಸಿ ಬಿಡೋಣ. ಅನಂತರ ನಾರಾಯಣರಾಯರೇ ಸೀತಾರಾಮುವನ್ನೂ ಹುಡುಕುವರು.

ಭಾಸ್ಕರ:—ಆಕೆಯು ತೌರುಮನೆಗೆ ಹೋಗುವುದಕ್ಕೆ ಒಪ್ಪುವ ಹಾಗೆ ಕಾಣಲಿಲ್ಲ. ಮಾಧವರಾಯರ ಮನೆಯಲ್ಲಿಯೇ ಬಂದು ಇರುವ ಹಾಗೆ ಹೇಳಿರುತ್ತೇನೆ.

ಇನ್:— ಈ ಏರ್ಪಾಡೂ ಒಳ್ಳೆಯದೆ. ನೀವು ಹಾಗೆಯೇ ಮಾಡಿ. ಸೀತಾರಾಮುವನ್ನು ಹುಡುಕುವ ಕೆಲಸವನ್ನು ಅನಂತರ ಮಾಡೋಣ, ಎಂದು ಹೇಳಿ ಮೇಲಕ್ಕೆದ್ದರು.

ಭಾಸ್ಕರನೂ ಅವರಿಂದ ಅಪ್ಪಣೆಯನ್ನು ಪಡೆದು, ಶಾಮರಾಯರ ಮನೆಯನ್ನು ಕುರಿತು ಅಲ್ಲಿಗೆ ಹೋಗಿ, ನಡೆದ ವಿಚಾರಗಳನ್ನೆಲ್ಲ ಅವರಿಗೆ ಅರುಹಿದನು. ಅವರೂ ಸಹ ಸುಶೀಲೆಯನ್ನು ಮಾಧವರಾಯರ ಮನೆಗೆ ಬರಹೇಳಿದ್ದು ಒಳ್ಳೆಯದಾಯ್ತೆಂದೂ, ಕಾರ್ಯವನ್ನು ಶೀಘ್ರವಾಗಿಯೇ ಮಾಡಬೇಕೆಂದೂ ಹೇಳಿದರು. ಭಾಸ್ಕರನು ತ್ವರಿತವಾಗಿ ಅಲ್ಲಿಂದ ಹೊರಟು ಮನೆಗೆ ಹೋಗಿ, ವಿಮಲೆಗೆ ಈ ಸಂಗತಿಗಳನ್ನೆಲ್ಲ ತಿಳಿಸಿ, ಆಕೆಯನ್ನು ಸೀತಾರಾಮುವಿನ ಮನೆಗೆ ಕಳುಹಿಸಿದನು.

ಭಾಸ್ಕರನು ಹೊರಟು ಹೋದ ಮೇಲೆ ಇನ್ಸ್ಪೆಕ್ಟರು ನಾರಾಯಣರಾಯರಿಗೆ ಈ ಸಮಾಚಾರವನ್ನೆಲ್ಲ ವಿಶದವಾಗಿ ತಿಳಿಸಿದರು. ಇದನ್ನು ಕೇಳಿ, ಅವನಿಗೆ ಸ್ವಲ್ಪ ಅಸಮಾಧಾನವಾಯಿತು. ಮುಂದಕ್ಕೆ ಏನೂ

ಮಾತನಾಡದೆ ಅಲ್ಲಿಂದ ಇಬ್ಬರೂ ಹೊರಟರು.

ಇತ್ತಲಾಗಿ ಸುಶೀಲೆಯು ಭಾಸ್ಕರನು ತನ್ನ ಮನೆಗೆ ಬಂದು ಇರು, ಎಂದು ಹೇಳಿದ ವಿಚಾರದಲ್ಲಿ ತರ್ಕ-ವಿತರ್ಕಗಳನ್ನು ಮಾಡುತಲಿದ್ದಳು. ಕೊನೆಗೆ ಈ ಮನೆಯಲ್ಲಿಯೇ ಇದ್ದರೆ ತನಗೇನಾದರೂ ಕೇಡು ಸಂಭವಿಸುವುದು ನಿಜವೆಂದು ತಿಳಿದು, ಮಾಧವರಾಯರ ಮನೆಗೆ ಹೋಗುವುದೇ ಲೇಸೆಂದು ನಿರ್ಧರಿಸಿಕೊಂಡಳು. ಈ ರೀತಿಯಾಗಿ ಇವಳು ಯೋಚನಾ ಪರವಶಳಾಗಿರಲು, ಬೀದಿಯ ಬಾಗಿಲನ್ನು ಯಾರೋ ತಟ್ಟಿದ ಹಾಗಾಯಿತು. ಮಾಧವರಾಯರ ಪತ್ನಿಯು ತನ್ನನ್ನು ಕರೆದುಕೊಂಡು ಹೋಗಲು ಬಂದಿರಬೇಕೆಂದು ಆಕೆಯು ಊಹಿಸಿ, ತಾನೇ ಎದ್ದು ಹೋಗಿ ಬಾಗಿಲನ್ನು ತೆರೆದಳು. ಮಾಧವರಾಯರ ಪತ್ನಿಯಲ್ಲದೆ, ಬೇರೆ ಒಂದು ಪುರುಷ ವ್ಯಕ್ತಿಯು ಬಾಗಿಲಲ್ಲಿ ನಿಂತಿತ್ತು. ಸುಶೀಲೆಗಾದರೋ ಏನು ಮಾಡಬೇಕೆಂಬುದು ತೋಚಲಿಲ್ಲ. ಆ ಸಮಯಕ್ಕೆ ಸರಿಯಾಗಿ ಮುದುಕಿಯು ಅವಳ ಹತ್ತಿರ ಬಂದು ನಿಂತಳು. ಆಗಂತುಕ ವ್ಯಕ್ತಿಯಾದರೋ ಸುಶೀಲೆಯನ್ನು ಎವೆಯಿಕ್ಕದೆ ನೋಡುತಲಿತ್ತು. ಸುಶೀಲೆಯು ಸ್ವಲ್ಪ ಮರೆಯಾದಳು. ಮುದುಕಿಯು ಮುಂದುವರಿದು ಆಗಂತುಕನನ್ನು ಕುರಿತು:''ತಾವು ಯಾರು'' ಎಂದು ಕೇಳಿದಳು.

ಆಗಂತುಕ:— ಮೂರು ನಾಲ್ಕು ದಿನಗಳ ಹಿಂದೆ ಯಾರೋ ಈ ಮನೆಯಿಂದ ಹೊರಟು ಹೋದವರು ಪುನಃ ಮನೆಗೆ ಬಂದಿಲ್ಲವೆಂದು ಕೇಳಿದೆ. ಅದು ನಿಜವೇ?

ಮರೆಯಲ್ಲಿ ನಿಂತಿದ್ದ ಸುಶೀಲೆಯು ಈ ಮಾತನ್ನು ಕೇಳಿದೊಡನೆಯೇ ಸ್ವಲ್ಪ ಮುಂದುವರಿದಳು. ಮುದುಕಿಯು: ''ಹೌದು. ನಮ್ಮ ರಾಯರು ಮೂರು ನಾಲ್ಕು ದಿನಗಳ ಕೆಳಗೆ ಕಾರ್ಯಾರ್ಥವಾಗಿ ಹೋದವರು ಇನ್ನೂ ಮನೆಗೆ ಬಂದಿಲ್ಲ. ಅವರ ಸುಳಿವು ತಮಗೇನಾದರೂ ಗೊತ್ತಿದೆಯೇ?'' ಎಂದಳು.

ಆಗಂತುಕ: -ಈ ಸಂದರ್ಭದಲ್ಲಿ ನಿಮ್ಮಿಂದ ಎಲ್ಲಾ ವಿಷಯಗಳನ್ನೂ ತಿಳಿದುಕೊಂಡು, ನಿಮಗೆ ಸಹಾಯ ಮಾಡಬೇಕೆಂದು ಬಂದಿರುತ್ತೇನೆ.

ಮುದುಕಿ:— ತಾವು ಯಾರು? ದಯವಿಟ್ಟು ತಿಳಿಸಿ. ನಮ್ಮಗಳ ಮೇಲೆ ಇಷ್ಟು ದಯೆಯಿಂದ ಇಲ್ಲಿಯ ವರೆಗೆ ತಾವು ಬಂದಿದ್ದಕ್ಕಾಗಿ ನಾವು ಬಹಳ ಕೃತಜ್ಞರಾಗಿದ್ದೇವೆ.

ಆಗಂತುಕ:— ಅಪಹೃತಳಾಗಿರುವ ಮಾಧವರಾಯರ ಮಗಳನ್ನು ಪತ್ತೆ ಮಾಡುವುದಕ್ಕಾಗಿ ಹೊರಟಿರುವವನು ನಾನೇ. ನನ್ನ ಹೆಸರು ನಾರಾಯಣರಾಯ. ನಾನು ಈ ವಿಷಯಗಳಲ್ಲಿ ನಿಮ್ಮ ಯಜಮಾನಿಯೊಡನೆ ಸ್ವಲ್ಪ ಮಾತನಾಡಬೇಕಾಗಿದೆ.

ಮುದುಕಿ:— ಸುಶೀಲೆಯನ್ನು ಕುರಿತು: 'ತಾಯಿ, ತಮ್ಮ ಅಭಿಪ್ರಾಯವೇನು?'

ಸುಶೀಲೆ: ಆಗಬಹುದು; ಹೇಗಾದರೂ ಅವರ ಪತ್ತೆಯಾದರೆ ಸಾಕು, ಎಂದಳು.

ಮುದುಕಿಯು ಪಕ್ಕದ ಕೋಣೆಗೆ ಹೋಗಿ ಅಲ್ಲಿಂದ ಒಂದು ಕುರ್ಚಿಯನ್ನು ತಂದಿರಿಸಿದಳು. ನಾರಾಯಣರಾಯನು ಅದರ ಮೇಲೆ ಕುಳಿತನು. ಜೇಬಿನಿಂದ ಒಂದು ಚುಟ್ಟವನ್ನು ತೆಗೆದು ಅದನ್ನು ಸೇದುತ್ತಾ, ಬಾರಿಬಾರಿಗೂ ಸುಶೀಲೆಯನ್ನು ನೋಡುತಲಿದ್ದನು. ಸುಶೀಲೆಯಾದರೊ ಒಂದು ಕಡೆ ತಲೆ ತಗ್ಗಿಸಿಕೊಂಡು ನಿಂತಿದ್ದಳು.

ನಾರಾಯಣರಾಯ:— ಯಾವ ಕೆಲಸಕ್ಕಾಗಿ ಹೋದರು?

ಸುಶೀಲೆ:— ಮಾಧವರಾಯರ ಮಗಳಾದ ಲಲಿತೆಯನ್ನು ಪತ್ತೆ ಹಚ್ಚುವುದರಲ್ಲಿ ಅವರೂ ಬಹಳ ಶ್ರಮಬಡುತ್ತಿರುವುದಾಗಿ ಅವರೇ ತಿಳಿಸಿದರು. ಅಲ್ಲದೆ, ಕಳ್ಳರ ಸುಳಿವು ಗೊತ್ತಾಗಿದೆಯೆಂದೂ, ಅವರನ್ನು ದಸ್ತಗಿರಿ ಮಾಡುವೆವೆಂದೂ ಹೇಳಿ, ಅದೇ ರಾತ್ರಿ ಹನ್ನೆರಡು ಗಂಟೆಗೆ ಮನೆಯನ್ನು ಬಿಟ್ಟವರು ಪುನಃ ಬಂದಿರುವುದಿಲ್ಲ.

ನಾರಾಯಣ— ಹಾಗಾದರೆ ನೀವಿಬ್ಬರೇ ಈ ಮನೆಯಲ್ಲಿರುವಿರೇನು?

ಸುಶೀಲೆ:— ಹೌದು.

ನಾರಾಯಣರಾಯ:— ನಿಮಗೆ ಇಲ್ಲಿರುವುದಕ್ಕೆ ಹೆದರಿಕೆಯಾಗುವುದಿಲ್ಲವೆ?

ಸುಶೀಲೆ: ಈಗ ಸ್ವಲ್ಪ ಹೊತ್ತಿಗೆ ಮುಂಚೆ ಭಾಸ್ಕರರಾಯರು ಬಂದಿದ್ದರು. ಅವರು ಮಾಧವರಾಯರ ಮನೆಗೇ ಬಂದು ಇರುವ ಹಾಗೆ ಹೇಳಿದರು. ಅಲ್ಲದೆ, ಮಾಧವರಾಯರ ಪತ್ನಿಯು ನಮ್ಮನ್ನು ಕರೆದುಕೊಂಡು ಹೋಗುವುದಕ್ಕೆ ಈಗ ಬರಬಹುದು.

ನಾರಾಯಣರಾಯ:— ಹಾಗಾದರೆ, ನೀವು ಅಲ್ಲಿಗೆ ಹೋಗಲು ಒಪ್ಪಿರುವಿರೇನು?

ಸುಶೀಲೆ: ಇಲ್ಲಿ ನಮಗೇನಾದರೂ ತೊಂದರೆಗಳು ಬಂದರೂ ಬರಬಹುದು. ಅಲ್ಲಿಗೆ ಹೋಗಿ ಇರುವುದೇ ಸಮಂಜಸವಾಗಿ ಕಾಣುತ್ತೆ.

ನಾರಾಯಣರಾಯ:— ನೀವು ಅಲ್ಲಿಗೆ ಹೋಗುವುದು ನನಗೆ ಸರಿಯಾಗಿ ಕಾಣುವುದಿಲ್ಲ. ನಾನು ಈ ಕಾರ್ಯದಲ್ಲಿ ತತ್ಪರನಾಗಿರುವುದರಿಂದ, ನಾನು ಹೇಳಿದ ಹಾಗೆ ನೀವು ಕೇಳಿದರೆ, ನಿಮಗೆ ಅದರಲ್ಲಿ ಸ್ವಲ್ಪವಾದರೂ ತೊಂದರೆಯುಂಟಾಗಲಾರದು.

ಸುಶೀಲೆ:--ಹಾಗಾದರೆ ನಾವು ಅಲ್ಲಿಗೆ ಹೋಗಬೇಡವೆಂದು ಹೇಳಲು ಕಾರಣಗಳೇನು?

ನಾರಾಯಣರಾಯ:-ಅದಕ್ಕೆ ಬೇಕಾದಷ್ಟು ಕಾರಣಗಳಿವೆ. ಅಲ್ಲಿಯೂ ನಿಮಗೆ ತೊಂದರೆ ತಪ್ಪುವುದಿಲ್ಲ. ಆದ್ದರಿಂದ ನಮ್ಮ ಮನೆಯಲ್ಲಿ ನಿಮಗೆ ಬೇಕಾದ ಸೌಕರ್ಯಗಳನ್ನೆಲ್ಲಾ ಮಾಡಿಸುವೆನು, ಎಂದು ಹೇಳುತ್ತಿರುವಾಗ ಮಾಧವರಾಯರ ಪತ್ನಿಯಾದ ವಿಮಲೆಯು ಮನೆಯೊಳಕ್ಕೆ ಬಂದಳು. ಆಕೆಯು ನಾರಾಯಣರಾಯರನ್ನು ಕುರಿತು: —"ನಾರಾಯಣ, ಇದೇನು? ನೀನು ಇಲ್ಲಿಗೆ ಬಂದಿರುವುದು?" ಎಂದಳು.

ನಾರಾಯಣರಾಯ: — ಈ ಮನೆಯಲ್ಲಿ ನಡೆದ ವಿದ್ಯಮಾನಗಳನ್ನೆಲ್ಲ ತಿಳಿದುಕೊಳ್ಳುವುದಕ್ಕಾಗಿ ಬಂದೆನು. ಇದಕ್ಕೂ, ಲಲಿತೆಯ ಅಪಹರಣಕ್ಕೂ ಏನೋ ಸಂಬಂಧವಿರಬೇಕೆಂದು ನಾನು ಊಹಿಸಿದೆನು. ಅದು ನಿಜವಾಯಿತು. ಇನ್ನು ನಾನು ಮುಂದಿನ ಕಾರ್ಯಕ್ಕೆ ಹೊರಟು, ಮುಂದಿನ ಕೆಲಸಗಳನ್ನೆಲ್ಲ ಬಹಳ ಜಾಗರೂಕತೆಯಿಂದ ಮಾಡಬೇಕಾಗಿದೆ. ಇರಲಿ. ಇನ್ನು ನಾನು ಹೊರಡುವೆನು, ಎಂದು ಹೇಳಿ ಎದ್ದು, ಸೀತಾರಾಮಯ್ಯನ

ಪತ್ನಿಯನ್ನು ಕುರಿತು: "ಇನ್ನು ನಾನು ಬರುವೆನು. ಅವಶ್ಯಬಿದ್ದರೆ ಪುನಃ ಬರುವೆನು" ಎಂದು ಹೇಳಿ, ಪುನಃ ಪುನಃ ಎವೆಯಿಕ್ಕದೆ ಹಿಂತಿರುಗಿ ಆಕೆಯನ್ನು ನೋಡುತ್ತಾ ಹೊರಟು ಹೋದನು.

ವಿಮಲೆಯಾದರೋ ಸುಶೀಲೆಗೆ ಬಹಳ ಉಪಚಾರವನ್ನು ಹೇಳಿ, ಮೊದಲು ಆಕೆಯು ಒಪ್ಪದಿದ್ದರೂ, ಒತ್ತಾಯ ಆಕೆಯನ್ನು ಮಾಡಿ ತಮ್ಮ ಮನೆಗೆ ಕರೆದುಕೊಂಡು ಹೋದಳು. ಅಲ್ಲಿ ಆಕೆಗೆ ಯಾವ ಅನಾನುಕೂಲಗಳೂ ಆಗದ ಹಾಗೆ ತಾನೇ ಆಕೆಯನ್ನು ಉಪಚರಿಸಲಾರಂಭಿಸಿದಳು.

---

## ಅಧ್ಯಾಯ ೧೦

ಅತ್ತಲಾಗಿ ಸೀತಾರಾಮುವು ಕಳ್ಳರೇ ತನ್ನ ಕೈಗೆ ಸಿಕ್ಕುವ ಸಮಯದಲ್ಲಿ ತಾನೇ ಆ ದುರಾತ್ಮರಿಗೆ ಸೆರೆಯಾದುದಕ್ಕಾಗಿ ಬಹಳವಾಗಿ ಅವರನ್ನು ನಿಂದಿಸಿ, ಮುಂದೆ ತನ್ನ ಮತ್ತು ಲಲಿತೆಯ ಬಿಡುಗಡೆಯ ಯೋಚನೆಯಲ್ಲಿಯೇ ಮಗ್ನನಾದನು. ಮೊದಲು ಸೀತಾರಾಮುವು ಲಲಿತೆಯನ್ನು ಹುಡುಕುವುದರಲ್ಲಿ ತತ್ಪರನಾಗಿದ್ದ ಕಾರಣ ಭಾಸ್ಕರನು ಲಲಿತೆಯು ಬೇಗ ತನ್ನ ಕೈಸೇರುವಳೆಂದು ತಿಳಿದ್ದನು. ಯಾವಾಗ ಸೀತಾರಾಮುವೂ, ಕಳ್ಳರ ಪಾಲಾದನೋ ಆಗಿನಿಂದ ಭಾಸ್ಕರನಿಗೆ ಯೋಚನೆ ಹೆಚ್ಚಾಯಿತು. ಮುಂದಕ್ಕೆ ಏನು ಮಾಡಬೇಕೆಂಬುದೇ ಅವನಿಗೆ ಹರಿಯದು.

ಹೀಗೆ ಯೋಚನಾಪರವಶನಾಗಿಲು, ಒಂದು ದಿನ ಭಾಸ್ಕರನು ವಿಮಲೆಯ ಹತ್ತಿರಕ್ಕೆ ಹೋಗಿ ಸೀತಾರಾಮುವಿನ ಮನೆಯ ಬೀಗದ ಕೈಯನ್ನು ಸುಶೀಲೆಯನ್ನು ಕೇಳಿ ತಂದುಕೊಡೆಂದು ಕೇಳಿದನು. ವಿಮಲೆಯು ಸುಶೀಲೆಯ ಬಳಿಗೆ ಹೋಗಿ ಕೇಳಿದಳು. ಸೀತಾರಾಮುವನ್ನು ಹುಡುಕುವುದಕ್ಕೆ ಪ್ರಯತ್ನ ಪಡುತ್ತಿರುವ ಭಾಸ್ಕರನಿಗೆ ತನ್ನ ಮನೆಯ ಬೀಗದ ಕೈಯನ್ನು ಕೊಟ್ಟರೆ ಯಾವ ಕುಂದುವೂ ಇಲ್ಲವೆಂದು ಸುಶೀಲೆಯು ಯೋಚಿಸಿ, ತನ್ನ ಮನೆಯ ಬೀಗದ ಕೈಯನ್ನು ವಿಮಲೆಗೆ ಕೊಟ್ಟಳು.

ಭಾಸ್ಕರನು ಆ ಬೀಗದ ಕೈಯನ್ನು ತೆಗೆದುಕೊಂಡು ಅಲ್ಲಿಂದ ಸೀತಾರಾಮಯ್ಯನ ಮನೆಗೆ ಬಂದನು. ಬಾಗಿಲನ್ನು ತೆಗೆದು ಸೀತಾರಾಮಯ್ಯನ ಕೊಠಡಿಗೆ ಹೋದನು. ಆ ಕೊಠಡಿಯಲ್ಲಿ ಒಂದು ಮೇಜೂ, ಒಂದು ಕುರ್ಚಿಯೂ, ಹತ್ತಿರವೇ ದೊಡ್ಡದಾದ ಒಂದು ಬೀರುವೂ ಇದ್ದವು. ಬೀರುವಿಗೆ ಬೀಗವು ಹಾಕಿತ್ತು. ಭಾಸ್ಕರನು ಮೇಜಿನ ಡ್ರಾಯರನ್ನು ಎಳೆದು, ಅದರಲ್ಲಿ ಯಾವುದಾದರೂ ಬೀಗದ ಕೈಗಳಿವೆಯೆ? ಎಂದು ಹುಡುಕಿದನು. ಯಾವುವೂ ಸಿಕ್ಕಲಿಲ್ಲ; ಆದರೆ ಅದರಲ್ಲಿದ್ದ ಒಂದು ಮೊಳೆಯನ್ನು ತೆಗೆದುಕೊಂಡು ಅದರ ಸಹಾಯದಿಂದ ಬೀರುವಿನ ಬೀಗವನ್ನು ಸರಾಗವಾಗಿ ತೆಗೆದನು. ಅದರಲ್ಲಿದ್ದ ಒಟ್ಟೆಗಳನ್ನೆಲ್ಲಾ ತೆಗೆದು ಹೊರಗೆ ಹಾಕಿದನು. ಆಗ ಅವನಿಗೆ ಒಂದು ಗಂಟು ಸಿಕ್ಕಿತು. ಅದರಲ್ಲಿ ಹಿಂದೆ ಸೀತಾರಾಮಯ್ಯವು ಕಳ್ಳರ ಮನೆಗೆ ಹೋಗಿ ಜವಾನರಾಮನನ್ನು ಮೋಸಪಡಿಸಿ ತಂದಿದ್ದ ಒಟ್ಟೆಗಳಿದ್ದುವು. ಅವುಗಳನ್ನು ಭಾಸ್ಕರನು ಮಾತ್ರ ತೆಗೆದುಕೊಂಡು ತನ್ನ ಮನೆಗೆ ಹಿಂತಿರುಗಿದನು.

ರಾತ್ರಿ ಸುಮಾರು ಹನ್ನೊಂದು ಗಂಟೆಯ ಹೊತ್ತಿಗೆ ಭಾಸ್ಕರನು ತಾನು ತಂದಿದ್ದ ಜವಾನ ರಾಮನ ಉಡುಪನ್ನು ಹಾಕಿಕೊಂಡು, ಮಾಧವರಾಯರ ಮನೆಯಿಂದ ಹೊರಟನು. ದೂರದಲ್ಲಿಯೇ ಇಬ್ಬರು ವ್ಯಕ್ತಿಗಳು ನಿಂತು ಮಾತನಾಡುತ್ತಿರುವ ಹಾಗೆ ಅವನಿಗೆ ಭಾಸವಾಯಿತು. ಅವರು ಎತ್ತ ಕಡೆಗೋ ಹೊರಟದ್ದನ್ನು ನೋಡಿ, ಅವನೂ ಅವರನ್ನು ಹಿಂಬಾಲಿಸಿದನು ಆ ಇಬ್ಬರು ವ್ಯಕ್ತಿಗಳಿಗೆ ತಮ್ಮನ್ನು ಯಾರೋ ಹಿಂಬಾಲಿಸುತ್ತಿರುವುದು ಗೊತ್ತಾಗಲೇ ಇಲ್ಲ. ಅವರು ಸ್ವಲ್ಪ ದೂರ ಹೋಗುವುದರೊಳಗಾಗಿಯೇ ಸಂಕೇತ ಪ್ರಕಾರ ಸಿಳ್ಳೆಯನ್ನು ಊದಿದರು. ಒಂದು ಮನೆಯ ಬಾಗಿಲು ತೆರೆಯಲ್ಪಟ್ಟಿತು. ಆ ಇಬ್ಬರು ವ್ಯಕ್ತಿಗಳೂ ಒಳಕ್ಕೆ ಪ್ರವೇಶಿಸಿದರು. ಭಾಸ್ಕರನಿಗಾದರೋ ಒಳಕ್ಕೆ ಹೋಗಲು ಆಗಲಿಲ್ಲ; ಆದರೂ ಹೊರಗಡೆಯೇ ನಿಂತಿದ್ದನು. ಸ್ವಲ್ಪ ಹೊತ್ತಿನಲ್ಲಿಯೇ ಆ ಇಬ್ಬರು ವ್ಯಕ್ತಿಗಳು ಬೇರೆ ಬಗೆಯ ಉಡುಪನ್ನು ಹಾಕಿಕೊಂಡು ಹೊರಕ್ಕೆ ಬಂದು, ಎತ್ತಲೋ ಹೊರಟು ಹೋದರು. ಅವರು ಮರೆಯಾಗುವ

ವರೆಗೂ ಭಾಸ್ಕರನು ಸುಮ್ಮನಿದ್ದು, ಅನಂತರ ಬಾಗಿಲನ್ನು ತಟ್ಟಿದನು. ಬಾಗಿಲನ್ನು ಯಾರೋ ತೆಗೆದರು ಭಾಸ್ಕರನು ಒಳಕ್ಕೆ ಪ್ರವೇಶಿಸುತ್ತಲೇ, ತನ್ನ ಹತ್ತಿರಿದ್ದ ಕ್ಲೋರೋ ಫಾರ್ಮನ್ನು ಬಾಗಿಲು ತೆರೆದ ವ್ಯಕ್ತಿಯ ಮೂಗಿನ ಹತ್ತಿರ ಹಿಡಿಯಲು, ಅವನು ಕೆಳಗೆ ಬಿದ್ದನು. ಭಾಸ್ಕರನು ಕೂಡಲೆ ಬಾಗಿಲನ್ನು ಮುಚ್ಚಿ, ಬಾಗಿಲನ್ನು ತೆಗೆದ ವ್ಯಕ್ತಿಯನ್ನು ಪಕ್ಕದ ಕೋಣೆಗೆ ತೆಗೆದುಕೊಂಡು ಹೋಗಿ ಮಲಗಿಸಿ, ತನ್ನ ಹತ್ತಿರಿದ್ದ ಕೈದೀಪದ ಸಹಾಯದಿಂದ ಮನೆಯನ್ನೆಲ್ಲಾ ಶೋಧಿಸಿದನು. ಮನೆಯೆಲ್ಲವೂ ವಾಸಕ್ಕೆ ಅನರ್ಹವಾಗಿರುವ ಹಾಗೆ ಕಾಣುತ್ತಿತ್ತು. ಅಲ್ಲಿ ಅವನಿಗೆ ಮೂರು ಕೊಠಡಿಗಳು ಕಾಣಿಸಿದವು. ಒಳಕ್ಕೆ ಹೋಗಿ ನೋಡಲು, ಆವುದೂ ಅವನಿಗೆ ಕಾಣಲಿಲ್ಲ. ಮಗ್ಗುಲಲ್ಲಿಯೇ ಒಂದು ಹಂತವು ಕಾಣಿಸಿತು. ಹಂತವನ್ನು ಮೆಲ್ಲನೆ ಹತ್ತಿಹೋದನು. ಅಲ್ಲಿ ಒಂದು ಕೊಠಡಿಯನ್ನು ನೋಡಿದನು. ಅದರಲ್ಲಿ ದೀಪವು ಇರಲಿಲ್ಲ. ಅದರ ಹತ್ತಿರವೇ ನಾಲ್ಕೈದು ಸಲ ಓಡಾಡಿ ಒಳಗೆ ಯಾರೂ ಇಲ್ಲವೆಂದು ನಿರ್ಧರಿಸಿಕೊಂಡು, ಅನಂತರ ಬಾಗಿಲನ್ನು ನೂಕಿದನು. ಸರಾಗವಾಗಿ ಬಾಗಿಲು ತೆರೆಯಿತು. ಒಳಗೆ ಪ್ರವೇಶಿಸಿದನು. ಅಲ್ಲಿ ಒಂದು ಮಂಚವೂ, ಒಂದು ಮೇಜೂ, ನಾಲ್ಕಾರು ಕುರ್ಚಿಗಳೂ ಇದ್ದವು. ಮಂಚದ ಮೇಲೆ ಒಂದು ಹಾಸಿಗೆ ಬಿದ್ದಿತ್ತು; ಮತ್ತೆ ಇನ್ನಾವ ವಸ್ತುವೂ ಇರಲಿಲ್ಲ. ಮೇಜಿನ ಬಾಗಿಲನ್ನು ತೆಗೆದನು. ಅದರಲ್ಲಿ ಕೆಲವು ಅಪ್ರಯೋಜಕವಾದ ಕಾಗದಗಳಿದ್ದವು. ಅವುಗಳ ನಡುವೆ ಒಂದು ಚಿತ್ರಪಟವೂ ಅವನ ಕಣ್ಣಿಗೆ ಬಿತ್ತು. ಅದನ್ನು ಕೈಯಲ್ಲಿ ತೆಗೆದುಕೊಂಡನು. ಅದನ್ನು ನೋಡಿ ಡೊಡನೆಯೇ ಅವನ ಮುಖವರ್ಣವು ಬದಲಾಯಿಸಿತು. ಆ ಚಿತ್ರದ ಕೆಳಬದಿಯಲ್ಲಿ 'ಗೋಪಾಲರಾವ' ಎಂದು ಬರೆದಿತ್ತು.

ಆ ಹೆಸರು ಯಾರದೆಂದು ಬಹಳವಾಗಿ ಅವನು ಯೋಚಿಸಿದನು. ಬಗೆ ಹರಿಯಲಿಲ್ಲ; ಆದರೂ ಚಿತ್ರಪಟವನ್ನು ತನ್ನ ಕಿಸೆಯಲ್ಲಿಟ್ಟುಕೊಂಡು ಕೆಳಕ್ಕಿಳಿದನು. ಜ್ಞಾನ ತಪ್ಪಿ ಬಿದ್ದಿದ್ದವನ ಉಡುಪನ್ನೆಲ್ಲಾ ತಾನು ತೆಗೆದು ಹಾಕಿಕೊಂಡು, ಅಲ್ಲಿಂದ ಹೊರಡುವುದರಲ್ಲಿದ್ದನು. ಅಷ್ಟರಲ್ಲಿ ಯಾರೋ

ಬಾಗಿಲನ್ನು ತಟ್ಟಿದ ಹಾಗಾಯಿತು. ಬಾಗಿಲನ್ನು ತಾನೇ ಹೋಗಿ ತೆರೆದನು. ಯಾರೋ ಇಬ್ಬರು ಪೋಲೀಸ ದಿರುಸಿನಲ್ಲಿದ್ದ ವ್ಯಕ್ತಿಗಳು ಒಳಗೆ ಪ್ರವೇಶಿಸಿ, ಭಾಸ್ಕರನ್ನು ನೋಡಿಯೂ ಅವನನ್ನು ಗುರ್ತಿಸದೆ, ಮಹಡಿಯ ಮೇಲಕ್ಕೆ ಹೊರಟು ಹೋದರು. ಇಬ್ಬರೂ ಮೇಲಕ್ಕೆ ಹೋದವರು ಮಂಚದ ಮೇಲೆ ಕುಳಿತರು. ಇವರೀರ್ವರನ್ನೂ ಭಾಸ್ಕರನು ಹಿಂಬಾಲಿಸಿದನೆಂದು ಹೇಳಬೇಕಾಗಿಲ್ಲ. ಒಳಗಿದ್ದ ವ್ಯಕ್ತಿಗಳಲ್ಲಿ ಒಬ್ಬನು: "ನರಸಿಂಗಾ. ಈಗ ನಮ್ಮ ರಾಯರು ಲಲಿತೆಯನ್ನು ಅಪಹರಿಸಿಕೊಂಡು ತಂದಿರುವರು. ಅಲ್ಲದೆ ಸೀತಾರಾಮುವನ್ನು ಸೆರೆ ಹಿಡಿದಿರುವರು. ಇನ್ನು ಭಾಸ್ಕರನೊಬ್ಬನನ್ನು ಸೆರೆ ಹಿಡಿದರೆ ನಮ್ಮ ಕಾರ್ಯವೆಲ್ಲವೂ ಮುಂದಕ್ಕೆ ಯಾವ ಪ್ರತಿಬಂಧಕವೂ ಇಲ್ಲದೆ ನಡೆದು ಹೋಗುವುದೆಂದು ಅವರು ಯೋಚಿಸಿರುವರು."

ನರಸಿಂಗ: ಅಪೂರ್, ಅವರು ಹಾಗೆ ಮಾಡಬೇಕಾದರೆ ಸ್ವಲ್ಪ ಕಷ್ಟವಾಗುವದು. ಸುಮ್ಮನೆ ಎಲ್ಲರನ್ನೂ ಸೆರೆಹಿಡಿದ ಮಾತ್ರಕ್ಕೆ ಕಾರ್ಯವನ್ನು ಸಾಧಿಸಿದಂತಾಗುವುದೇ?

ಅಪೂರ್: - ಅವರೆಲ್ಲರನ್ನೂ ಸೆರೆ ಹಿಡಿದು, ಭಾಸ್ಕರನನ್ನು ಯಮಪುರಿಗೆ ಕಳುಹಿ, ಸೀತಾರಾಮುವನ್ನು ಈ ಪತ್ತೆ ಮಾಡುವ ಕೆಲಸಕ್ಕೆ ಹೋಗಬೇಡವೆಂದು ತಿಳಿಸುವರು. ಅದನ್ನು ಅವನು ಕೇಳದಿದ್ದರೆ, ಅವನ ಗತಿಯೂ ಭಾಸ್ಕರನ ಹಾಗೇ ಆಗುವದು. ಅನಂತರ ಲಲಿತೆಯು ಸುಲಭವಾಗಿಯೇ ಕೈಸೇರುವಳು.

ನರಸಿಂಗ: —ಕೊನೆಗೆ ಎಲ್ಲರನ್ನೂ ತೀರಿಸಿ ಲಲಿತೆಯನ್ನು ಮದುವೆಯಾದರೆ, ಮಾಧವರಾಯರಿಗೆ ಇವೆಲ್ಲಾ ಗೊತ್ತೇ ಆಗುವವು. ಆಗ ಎಲ್ಲರ ಗತಿಯೂ ನೆಟ್ಟಗಾಗುತ್ತದೆ.

ಅಪೂರ್: —ಹಾಗೇನಾದರೂ ಮಾಧವರಾಯರಿಗೆ ತಿಳಿದು ನಮಗೆ ತೊಂದರೆಯಾಗುವುದಾದರೇ, ಅವರನ್ನೂ ತೀರಿಸಿಯೇ ಬಿಡುವುದು. ಅಲ್ಲದೆ, ಲಲಿತೆಯು ಜೀವಸಹಿತ ಇರುವಳೆಂದು ಅವಳ ತಂದೆ ತಾಯಿಗಳಿಗೆ ತಿಳಿದರೆ, ಅಷ್ಟಕ್ಕೇ ಅವರು ಸಂತೋಷಿಸುವರು. ಯಾರು ಮದುವೆಯಾದರೇನು?

ಹುಡುಗಿ ಬದುಕಿದ್ದರೆ ಸಾಕು, ಎಂದು ಹೇಳಿ ಸುಮ್ಮನಾದಾರು.

ಆ ಸಮಯಕ್ಕೆ ಸರಿಯಾಗಿ ಪುನಃ ಬಾಗಿಲಲ್ಲಿ ಮತ್ಯಾರದೋ ಶಬ್ದವಾದುದು ಭಾಸ್ಕರನಿಗೆ ಕೇಳಿಸಿತು. ಕೂಡಲೆ ಹೋಗಿ ಬಾಗಿಲನ್ನು ತೆರೆದನು. ಮತ್ತೆ ಒಬ್ಬನು ಪೋಲೀಸ್ ದಿರುಸಿನಲ್ಲಿ ನರಸಿಂಗ, ಅಮೀರ್ ರಿದ್ದ ಕೊಠಡಿಯೊಳಕ್ಕೆ ಹೋದನು. ಅವನು: "ನರಸಿಂಗಾ! ಈ ದಿನ ನಾವು ಲಲಿತೆಯನ್ನು ನೋಡಲು ಹೋಗಲಾಗಲಿಲ್ಲ. ಅವಳ ದೇಹಸ್ಥಿತಿಯ ವಿಚಾರವಾಗಿ ಏನೂ ಗೊತ್ತಿಲ್ಲ. ಆಹಾರಾದಿಗಳನ್ನು ಸರಿಯಾಗಿ ತೆಗೆದು ಕೊಳ್ಳುವಳೋ-ಇಲ್ಲವೋ ಎಂಬ ವಿಚಾರವನ್ನು ನೀನು ವಿಚಾರಿಸಿಕೊಂಡು ಬಾ. ನಾನು ಬಹಳ ದಣಿದಿರುವುದರಿಂದ ಹೋಗಲಾರೆ" ಎಂದನು.

ನರಸಿಂಗ:-ರಾಯರೇ ಆಗಬಹುದು. ನನ್ನ ಜೊತೆಯಲ್ಲಿ ಮತ್ಯಾರನ್ನಾದರೂ ಕರೆದುಕೊಂಡು ಹೋಗಬಹುದೇ?

ಗೋಪಾಲರಾಯ:—"ಬೇಕಾದರೆ ಯಾರನ್ನಾದರೂ ಕರೆದುಕೊಂಡು ಹೋಗು' ಎಂದು ಅಸಡ್ಡೆಯಿಂದ ಹೇಳಿ, ಸುಮ್ಮನಾದನು.

ನರಸಿಂಗ: —"ರಾಮನನ್ನು ನನ್ನ ಜೊತೆಯಲ್ಲಿ ಕರೆದುಕೊಂಡು ಹೋಗುವೆನು" ಎಂದು ಹೇಳುತ್ತಾ, ಅಲ್ಲಿಂದ ಬಂದು, ಕೃತ್ರಿಮ ರಾಮನಾದ ಭಾಸ್ಕರನನ್ನು ನಿಜವಾದ ರಾಮನೆಂದೇ ತಿಳಿದು, ಅವನನ್ನು ಕರೆದುಕೊಂಡು, ಲಲಿತೆಯನ್ನು ಸೆರೆಹಾಕಿದ್ದ ಗುಪ್ತಸ್ಥಳಕ್ಕೆ ಹೊರಟನು.

ಕೃತ್ರಿಮ ರಾಮನು ಯಾವ ಮಾತನ್ನೂ ಆಡದೆ, ನರಸಿಂಗನನ್ನು ಹಿಂಬಾಲಿಸಿದನು. ತನ್ನ ಹತ್ತಿರಿದ್ದ ಪಿಸ್ತೂಲಿನಿಂದ ನರಸಿಂಗನನ್ನು ಕೊಲ್ಲೋಣವೆಂದು ಭಾಸ್ಕರನು ಯೋಚಿಸಿದನು; ಆದರೆ ಮುಂದಕ್ಕೆ ಅನರ್ಥಗಳಾಗುವುದಲ್ಲದೆ, ಲಲಿತೆಯಿರುವ ಗುಪ್ತಸ್ಥಳವೂ ಗೊತ್ತಾಗುವುದಿಲ್ಲವೆಂದು ಸುಮ್ಮನೆ ಅವನ ಹಿಂದೆ ಹೋದನು. ಅವರು ಹೋಗುತ್ತಿದ್ದ ದಾರಿಯು ಬಹಳ ಕಠಿಣವಾಗಿದ್ದರೂ ಭಾಸ್ಕರನು ಯಾವ ಆಯಾಸವನ್ನೂ, ಕಷ್ಟವನ್ನೂ ತೋರ್ಪಡಿಸದೆಯೇ ನಡೆಯುತ್ತಲಿದ್ದನು ಸುಮಾರು ಮೂರು ನಾಲ್ಕು ಮೈಲು ಹೋದ ಮೇಲೆ ನರಸಿಂಗನು ರಾಮನನ್ನು ಕುರಿತು: "ರಾಮಾ, ನೀನು ಲಲಿತೆಯನ್ನು ನೋಡಿರುವೆಯಾ?" ಎಂದನು.

ರಾಮು:—ಇಲ್ಲ.

ನರ:--ನಾನು ನೋಡಿರುವೆನು. ಬಹಳ ರೂಪವತಿಯಾಗಿರುವಳು.

ರಾಮು: ಇರಬಹುದು.

ನರಸಿಂಗ: – ಅವಳ ರೂಪವನ್ನು ನೀನು ನೋಡಿದ ಮಾತ್ರಕ್ಕೇ ನಿನ್ನ ಮನಸ್ಸು ಚಂಚಲವಾಗುವುದು;ಆದರೂ ಪ್ರಯೋಜನವಿಲ್ಲ. ರಾಮುನು ಮುಂದಕ್ಕೆ ಮಾತನಾಡಲಿಲ್ಲ. ರಾಮುನಿಗೆ ಈ ವಿಚಾರವು ರುಚಿಸಲಿಲ್ಲ ವೆಂದು ನರಸಿಂಗನೂ ಮಾತನಾಡಲಿಲ್ಲ ಅರ್ಧ ಗಂಟೆಯಾದ ನಂತರ ಯಥಾವಿಧಿಯಾಗಿ ಉಸ್ಮಾನನ ಸಣ್ಣ ಗುಡಿಸಲು ಸಿಕ್ಕಿತು. ಉಸ್ಮಾನನು ಒಳಗಡೆ ಮಲಗಿದ್ದನು. ಇಬ್ಬರೂ ಒಳಕ್ಕೆ ಹೋದರು. ನರಸಿಂಗನು ರಾಮುನನ್ನು ಕುರಿತು: "ರಾಮಾ, ನೀನು ಇಲ್ಲಿಯೇ ಇರು. ನಾವು ಹೋಗಿ ಬೇಗ ಬರುತ್ತೇವೆ" ಎಂದನು. ರಾಮುನು, ತಾನೂ ಅವರನ್ನು ಹಿಂಬಾಲಿಸುವುದಾಗಿ ಬಹಳವಾಗಿ ಪೀಡಿಸಿ, ಕೊನೆಗೆ ಅವರ ಹಿಂದೆಯೇ ಹೊರಟನು. ಸ್ವಲ್ಪ ಹೊತ್ತಿನಲ್ಲಿಯೇ ಎಲ್ಲರೂ ಗುಪ್ತದ್ವಾರವನ್ನು ಪ್ರವೇಶಿಸಿ, ಲಲಿತೆಯನ್ನಿಟ್ಟಿದ್ದ ಕೊಠಡಿಯ ಹತ್ತಿರಕ್ಕೆ ಹೋದರು. ನರಸಿಂಗನು ಕೊಠಡಿಯ ಬಾಗಿಲನ್ನು ತೆರೆದು ಒಳಕ್ಕೆ ಹೋದನು. ರಾಮು ಮತ್ತು ಉಸ್ಮಾನರಿಬ್ಬರೂ ಹೊರಗಡೆಯೇ ನಿಂತರು. ಯಾರೋ ಬಾಗಿಲನ್ನು ತೆರೆದ ಶಬ್ದವನ್ನು ಅರನಿದ್ರೆಯಲ್ಲಿದ್ದ ಲಲಿತೆಯು ಕೇಳಿ, ಗಾಬರಿಯಿಂದ ಮೇಲಕ್ಕೆ ಎದ್ದಳು.

ನರಸಿಂಗ:—"ಲಲಿತಾ, ಲಲಿತಾ" ಎಂದು ಎರಡು ಬಾರಿ ಕೂಗಿದನು.

ಲಲಿತೆ: ಕೋಪದಿಂದ ಯಾರದು?

ನರಸಿಂಗ: — ನಾನು ನರಸಿಂಗ.

ಲಲಿತೆ:—ಯಾಕೆ, ಇಲ್ಲಿಗೇಕೆ ಬಂದೆ?

ನರಸಿಂಗ:—ನಿನ್ನನ್ನು ನೋಡಿ ಹೋಗಲು.

ಲಲಿತೆ:—ನೀನು ನನ್ನನ್ನು ಕಾಣಬೇಕಾದ ಅವಶ್ಯಕವಿಲ್ಲ. ಮೊದಲು ತೊಲಗು.

ನರಸಿಂಗ:—ತೊಲಗೆಂದು ಹೇಳಬೇಡ. ನಾನು ಹೇಳುವ ಹಾಗೆ ನೀನು ಕೇಳುವೆಯಾದರೆ, ಈಗಲೇ ನಿನ್ನನ್ನು ಈ ಬಂಧನದಿಂದ ಬಿಡುಗಡೆ ಮಾಡುವೆನು.

ಲಲಿತೆ:—ನೀನು ಬಿಡುಗಡೆ ಮಾಡಲೂ ಬೇಡ, ಏನೂ ಬೇಡ; ಮೊದಲು ಹೊರಟು ನಡೆ.

ನರಸಿಂಗ:-ಲಲಿತೆ, ನೀನು ನನ್ನೊಡನೆ ಬರುವುದಕ್ಕೆ ಸಮ್ಮತಿಸಿದರೆ, ನಿನ್ನನ್ನು ಈಗಲೇ ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯುವೆನು. ಸುಖವಾಗಿರಬೇಕೆಂದು ನೀನು ಬಯಸಿದರೆ, ತಿಳಿಸು. ಇಲ್ಲವಿದ್ದರೆ ನೀನೂ ಇಲ್ಲಿಯೇ ಸಾಯಬೇಕಾಗುತ್ತದೆ.

ಲಲಿತೆ:—ಇಲ್ಲಿಯೇ ಸತ್ತರೂ ಚಿಂತೆಯಿಲ್ಲ. ಮೊದಲು ನೀನು ತೊಲಗು, ಎಂದು ಹೇಳಿ ಸುಮ್ಮನಾದಳು. ಅಷ್ಟರಲ್ಲಿ ಉಸ್ಮಾನನು "ನರಸಿಂಗಾ" ಎಂದು ಕೂಗಲು, ನರಸಿಂಗನು ವಿಧಿಯಿಲ್ಲದೆ ಅಲ್ಲಿಂದ ಹೊರಕ್ಕೆ ಬಂದು, ಬಾಗಿಲಿಗೆ ಬೀಗವನ್ನು ಹಾಕಿ, ರಾಮುನನ್ನೂ ಉಸ್ಮಾನನನ್ನೂ ಕರೆದುಕೊಂಡು ಬಂದ ದಾರಿಯನ್ನು ಹಿಡಿದನು.

ಅತ್ತಲಾಗಿ ಇವರ ಯಜಮಾನನಾದ ಗೋಪಾಲರಾಯನು ಉಳಿದ ಮೂವರೊಡನೆ ಮಾತನಾಡುತ್ತಾ ಕುಳಿತಿರುವಾಗ "ರಾಮು" ಎಂದು ಕೂಗಿದನು. ಅವರೊರನು "ಅವನು ನರಸಿಂಗನ ಜೊತೆಯಲ್ಲಿ ಹೋಗಿರುವನು" ಎಂದು ಹೇಳಲು, ಯಜಮಾನನು ಸುಮ್ಮನಾದನು. ಕೆಳಗೆ ಕೊಠಡಿಯಲ್ಲಿ ಮೂರ್ಛಿತನಾಗಿ ಬಿದ್ದಿದ್ದ ರಾಮುನಿಗೆ ಆಗ ತಾನೇ ಎಚ್ಚರವಾಗಿತ್ತು. ಯಾರೋ ಕೂಗಿದ್ದನ್ನು ಕೇಳಿದೊಡನೆಯೇ ದಿಗ್ಗನೆ ಎದ್ದು ಮೇಲಕ್ಕೆ ಹೋದನು. ರಾಮುನು ಬಂದಿದ್ದನ್ನು ನೋಡಿ ಯಜಮಾನನು: "ಇದೇನು? ನರಸಿಂಗನೊಡನೆ ನೀನು ಹೋಗಲಿಲ್ಲವೆ?" ಎಂದು ಕೇಳಿದನು.

ರಾಮು:—ಇಲ್ಲ. ಯಾವಾಗ?

ಯಜಮಾನ:—ಈಗ ಎರಡು-ಮೂರು ಗಂಟೆಗಳ ಮುಂಚೆ.

ರಾಮು:—ನನಗೆ ಗೊತ್ತಿಲ್ಲ.

ಯಜಮಾನ:-ಹಾಗಾದರೆ ಅವನು ಹೋದುದು ನಿನಗೆ ಗೊತ್ತಿಲ್ಲವೆ?

ರಾಮು:—ಇಲ್ಲ. ಇಲ್ಲಿ ಯಾವುದೋ ವಿಪರೀತವು ನಡೆದ ಹಾಗೆ ಕಾಣುತ್ತದೆ.

ಯಜಮಾನ:—ಅದೇನು, ವಿಪರೀತ?

ರಾಮು: –ನನ್ನನ್ನು ವಂಚಿಸಿ ಯಾರೋ ಈ ಮನೆಯನ್ನು ಪ್ರವೇಶಿಸಿದ ಹಾಗೆ ಕಾಣುತ್ತದೆ.

ಯಜಮಾನ: –ನೀನು ಆಗ ಏನು ಮಾಡುತಲಿದ್ದೆ? ಬೇಗ ಹೇಳು.

ರಾಮು.—ನರಸಿಂಗ ಮತ್ತು ಅಮೀರರಿಬ್ಬರೂ ಬಂದು ಹೊರಟು ಹೋದ ಮೇಲೆ, ಯಾರೋ ಬಾಗಿಲನ್ನು ಶಬ್ದ ಮಾಡಿದರು. ಅವರೇ ಪುನಃ ಬಂದರೆಂದು ತಿಳಿದು, ಬಾಗಿಲನ್ನು ತೆರೆದೆ. ಅಷ್ಟು ಮಾತ್ರ ನನಗೆ ಜ್ಞಾಪಕವಿದೆ. ಪುನಃ ಈಗ ನೀವು ಕೂಗಿದಾಗಲೇ ನನಗೆ ಎಚ್ಚರಿಕೆ.

ಯಜಮಾನ: ಹಾಗಾದರೆ ನೀನು ನಮಗೆ ಬಾಗಿಲನ್ನು ತೆರೆಯಲೇ ಇಲ್ಲವೆ?

ರಾಮು:—ಇಲ್ಲ. ನಾನು ತೆರೆಯಲೇ ಇಲ್ಲ.

ಯಜಮಾನ: – ಬಹಳ ಅನರ್ಥವಾಯಿತು. ನಮ್ಮನ್ನು ವಂಚಿಸಿದವನೇ ನರಸಿಂಗನ ಜೊತೆಯಲ್ಲಿ ಹೋಗಿರಬಹುದು. ಯಾವ ದಿನವೂ ನಾನು ರಾಮುನನ್ನು ಇಲ್ಲಿಂದ ಹೊರಕ್ಕೆ ಕಳುಹಿಸದೆ ಇದ್ದವನು ಈ ದಿನ ನರಸಿಂಗನಿಗೆ ಕರೆದುಕೊಂಡು ಹೋಗೆಂದು ಯಾಕೆ ಹೇಳಿದೆ? ಇನ್ನೂ ಕೆಲಸವು ಕೈಮೀರಿಲ್ಲ. ಕೂಡಲೆ: 'ಅಮೀರ್, ನೀನು ನರಸಿಂಗನು ಬರುವ ದಾರಿಯನ್ನೇ ಕಾಯುತ್ತ, ಊರ ಹೊರಗಿರು. ನರಸಿಂಗನೂ ಅವನನ್ನು ಅನುಸರಿಸಿದವನೂ ಒಟ್ಟಿಗೆ ಬಂದೇ ಬರುವರು. ಆಗ ಉಪಾಯಾಂತರದಿಂದ ಅವನನ್ನು ಇಲ್ಲಿಗೆ ಕರೆದುಕೊಂಡು ಬಾ. ಬೇಗ ಹೋಗು' ಎಂದು ಹೇಳಿ, ಲಗುಬಗೆಯಿಂದ ಅಮೀರನನ್ನು ಓಡಿಸಿದನು

ಗುಪ್ತಸ್ಥಳದಿಂದ ನರಸಿಂಗ, ಕೃತ್ರಿಮ ರಾಮು ಮತ್ತು ಉಸ್ಮಾನರು ಹೊರಬಿದ್ದ ಮೇಲೆ ಉಸ್ಮಾನನು ತನ್ನ ಗುಡಿಸಿಲಿಗೆ ಹೊರಟು ಹೋದನು. ನರಸಿಂಗನು ಯಾವುದೊ ವಿಚಾರವಾಗಿ ಯೋಚಿಸುತ್ತಾ,

ದಾರಿಯಲ್ಲಿ ಮೌನವಾಗಿ ಬರುತಲಿದ್ದನು. ಅವನನ್ನು ಕೃತ್ರಿಮ ರಾಮನು ಹಿಂಬಾಲಿಸುತಲಿದ್ದನು. ಸ್ವಲ್ಪ ಹೊತ್ತಾದ ಮೇಲೆ ನರಸಿಂಗನು: 'ರಾಮ, ಆ ಸ್ತ್ರೀಯನ್ನು ನೋಡಿದೆಯಾ?' ಎಂದನು. ಉತ್ತರವೇ ಬರಲಿಲ್ಲ. ಹಿಂತಿರುಗಿ ನೋಡಿದನು; ರಾಮನು ಕಾಣಿಸಲಿಲ್ಲ. ಗಟ್ಟಿಯಾಗಿ ನಾಲ್ಕೈದು ಬಾರಿ ಕೂಗಿದರೂ ಪ್ರಯೋಜನವಾಗಲಿಲ್ಲ. ಉಸ್ಮಾನನ ಹತ್ತಿರವೇ ಮಾತನಾಡುತ್ತ ಹಿಂದೆಯೇ ಉಳಿದಿರಬೇಕೆಂದು ಹಿಂತಿರುಗಿದನು. ಉಸ್ಮಾನನ್ನು ಕೇಳಿದಾಗ, ಅವನು ತನ್ನನ್ನೇ ಹಿಂಬಾಲಿಸಿದನೆಂದು ಹೇಳಿದ್ದನ್ನು ಕೇಳಿ ವಿಸ್ಮಯಗೊಂಡನು. ಎಲ್ಲಿಯೋ ದಾರಿಯಲ್ಲಿಯೇ ಇರಬೇಕೆಂದು ಪುನಃ ಯೋಚಿಸಿ ಹೊರಟನು. ಅಷ್ಟು ಹೊತ್ತಿಗಾಗಲೇ ಸೂರ್ಯೋದಯ ಸಮಯವಾದುದರಿಂದ, ಅಲ್ಲಲ್ಲಿ ಬೆಳಕು ಬೀಳುತಲಿತ್ತು. ಎದುರಿಗೆ ಯಾವುದೋ ವ್ಯಕ್ತಿಯು ಬರುತ್ತಿರುವ ಹಾಗೆ ಭಾಸವಾಯಿತು. ರಾಮನೇ ತನ್ನನ್ನು ಹುಡುಕಿಕೊಂಡು ಬರುತ್ತಿರಬಹುದೆಂದು ನರಸಿಂಗನು ಮುಂದಕ್ಕೆ ಜಾಗ್ರತೆಯಾಗಿ ಬಂದು ನೋಡಲು, ಅವನು ರಾಮನಾಗಿರಲಿಲ್ಲ; ಅಮೀರನಾಗಿದ್ದನು ನರಸಿಂಗನು:—"ಅಮೀರ್, ಈಗ ಏಕೆ ಬಂದೆ? ದಾರಿಯಲ್ಲಿ ರಾಮನನ್ನು ನೋಡಿದೆಯಾ?" ಎಂದು ಕೇಳಿದನು.

ಅಮೀರ್:- ರಾಮನು ಮನೆಯಲ್ಲಿಯೇ ಇರುವನಲ್ಲಾ? ನಿನ್ನ ಜೊತೆಯಲ್ಲಿ ಬರಲಿಲ್ಲವಂತೆ. ಯಾರೋ ನಿನ್ನನ್ನು ಮೋಸಪಡಿಸಿ, ರಾಮನೆಂದು ಹಿಂಬಾಲಿಸಿರುವರು.

ನರಸಿಂಗ: ಅಯ್ಯೋ, ಅನರ್ಥವಾಯಿತಲ್ಲ! ಆ ದುಷ್ಟನಿಗೆ ಲಲಿತೆಯನ್ನು ಇಟ್ಟಿರುವ ಸ್ಥಳವು ಗೊತ್ತಾಯಿತು! ಮುಂದೇನು ಮಾಡುವುದು?

ಅಮೀರ್: ಹೋಗಿ ರಾಯರಿಗೆ ತಿಳಿಸೋಣ. ಅವರು ಏನು ಹೇಳುವರೋ ಕೇಳೋಣ. ನಡೆ ಜಾಗ್ರತೆ.

ಅವರು ಸ್ವಲ್ಪ ದೂರ ಹೋಗುವುದರಲ್ಲಿಯೇ, ಯಜಮಾನನು ಬರುತ್ತಿರುವುದನ್ನು ಕಂಡರು. ಗೋಪಾಲರಾಯನು ಅಮೀರ-ನರಸಿಂಗ

ರಿಬ್ಬರನ್ನೇ ನೋಡಿ:— 'ಅವನೆಲ್ಲಿ?' ಎಂದನು. ನರಸಿಂಗನು ಮೆಲ್ಲಗೆ: 'ಅವನು ತಪ್ಪಿಸಿಕೊಂಡಿರುವನು.'

ಗೋಪಾಲರಾಯ:—ಆ ಕಪಟಿಯು ಯಾರೆಂಬುದನ್ನು ಯಾರಾದರೂ ನಿರ್ಧರಿಸಬಲ್ಲಿರಾ?

ಅಮೀರ್:— ಈಗ ಪತ್ತೆ ಹಚ್ಚುವುದಕ್ಕೆ ಕೈ ಹಾಕಿರುವವರು ಮುಖ್ಯವಾಗಿ ಸೀತಾರಾಮು, ಭಾಸ್ಕರ. ಮಾಧವರಾಯರು ಸುಮ್ಮನೆ ಕುಳಿತು, ಅವರಿಗೆ ದ್ರವ್ಯ ಸಹಾಯ ಮಾಡುತ್ತಲಿರುವರು; ಆದರೆ ಸೀತಾರಾಮುವನ್ನು ನಾವು ಸೆರೆ ಹಿಡಿದಿರುತ್ತೇವೆ; ಆದುದರಿಂದ ಭಾಸ್ಕರನೇ ಈ ಕೆಲಸವನ್ನು ಮಾಡಿರಬೇಕು!

ನರಸಿಂಗ:—ಇದ್ದರೂ ಇರಬಹುದು.

ಗೋಪಾಲರಾಯ: ಹೇಗೇ ಆಗಲಿ. ಅವನನ್ನು ನಾವು ತ್ವರಿತದಿಂದಲೇ ಸೆರೆ ಹಿಡಿದರೆ, ನಮ್ಮ ಗುಟ್ಟು ಬೈಲಾಗುವುದಿಲ್ಲ. ಅವನನ್ನು ಹಿಡಿಯುವುದಕ್ಕೆ ಪ್ರಯತ್ನಿಸಿರಿ, ಎಂದು ಹೇಳಿದ ಮೇಲೆ, ಅಲ್ಲಿಂದ ಎಲ್ಲರೂ ಚದರಿದರು.

# ಅಧ್ಯಾಯ ೧೧

ಭಾಸ್ಕರನಿಗೆ ರಾತ್ರಿಯೆಲ್ಲ ತ್ರಾಸವಾಗಿದ್ದುದರಿಂದ, ಮಾರನೆಯ ದಿನ ಬೆಳಿಗ್ಗೆ ಒಂಬತ್ತು ಗಂಟೆಯ ವರಿವಿಗೂ ತನ್ನ ಮನೆಯಲ್ಲಿಯೇ ನಿದ್ರಿಸುತ ಲಿದ್ದನು. ಅನಂತರ ಎದ್ದು ಮುಂದೆ ಹೇಗೆ ಕೆಲಸವನ್ನು ಮಾಡಬೇ ಕೆಂಬ ಆಲೋಚನೆಯಲ್ಲಿಯೇ ಅಂದಿನ ದಿನವನ್ನೆಲ್ಲ ಕಳೆದನು. ಅಷ್ಟ ರಲ್ಲಿ ಅವನಿಗೆ ಶಾಮರಾಯರ ಜ್ಞಾಪಕವು ಬಂದಿತು. ಅವರನ್ನು ಕಾಣು ವುದಕ್ಕಾಗಿ ತನ್ನ ದಿರುಸನ್ನು ಹಾಕಿಕೊಂಡು ಮನೆಯಿಂದ ಹೊರಡುವುದ ರಲ್ಲಿದ್ದನು. ಅಷ್ಟರಲ್ಲಿ ಮನೆಯ ಮುಂದುಗಡೆ ಒಂದು ಮೋಟಾರು ಬಂಡಿಯು ಬಂದು ನಿಂತಿತು. ಅದರಿಂದ ಒಬ್ಬ ಪೋಲೀಸಿನವನು ಇಳಿದು: 'ಭಾಸ್ಕರರಾಯರೇ' ಎಂದು ಕೂಗುತ್ತ ಒಳಕ್ಕೆ ಬಂದನು. ಭಾಸ್ಕರನು ಹೊರಕ್ಕೆ ಬಂದು ಪೋಲೀಸಿನವನನ್ನು: 'ಯಾಕಯ್ಯಾ, ನೀನು ಯಾರು?' ಎಂದು ಕೇಳಿದನು.

ಪೋಲೀಸಿನವನು: 'ಸ್ವಾಮಿ, ಇನ್‌ಸ್ಪೆಕ್ಟರು ತಮ್ಮನ್ನು ಬಹಳ ಜರೂರಾಗಿ ಕರೆದುಕೊಂಡು ಬರುವಂತೆ ಹೇಳಿದ್ದಾರೆ ತಡವಾದೀತೆಂದು ಒಂದು ಮೋಟಾರನ್ನು ಸಹ ಕಳಿಸಿದ್ದಾರೆ.

ಭಾಸ್ಕರ:—ಯಾತಕ್ಕಾಗಿ ಇಷ್ಟು ತ್ವರಿತ?

ಪೋಲೀಸ:—ಜರೂರ ಕೆಲಸವಿದೆಯಂತೆ. ಇಷ್ಟು ಮಾತ್ರ ನನಗೆ ಗೊತ್ತು.

ಭಾಸ್ಕರನು ಜಾಗ್ರತೆಯಾಗಿ ಮೋಟಾರಬಂಡಿಯಲ್ಲಿ ಬಂದು ಕುಳಿತನು. ಮೋಟಾರು ಹೊರಟಿತು; ಅದು ಠಾಣೆಯ ಕಡೆಗೆ ಹೋಗದೆ, ಬೇರೆ ದಾರಿಯಲ್ಲಿ ಹೋಗುತಲಿತ್ತು.

ಭಾಸ್ಕರನು ಸ್ವಲ್ಪ ವಿಸ್ಮಯಗೊಂಡು ಪೋಲೀಸಿನವನನ್ನು ಕುರಿತು: "ಅಯ್ಯಾ, ಇನ್‌ಸ್ಪೆಕ್ಟರು ಎಲ್ಲಿರುವರು? ಠಾಣೆಯಲ್ಲಿಲ್ಲವೆ?" ಎಂದು ಕೇಳಿದನು,

ಪೋಲೀಸ: — ಇಲ್ಲ. ಇಲ್ಲಿಯೇ ಹತ್ತಿರ ಒಂದು ಮನೆಯಲ್ಲಿರುವರು, ಎಂದನು. ಸ್ವಲ್ಪ ಹೊತ್ತಿನೊಳಗಾಗಿಯೇ ಮೋಟಾರು ಬಂಡಿಯು ಒಂದು ಮನೆಯ ಮುಂಭಾಗದಲ್ಲಿ ನಿಂತಿತು. ಅದು ೩೪ನೇ ನಂಬರ ಮನೆಯಾಗಿದ್ದಿತು. ಜಾಗ್ರತೆಯಾಗಿ ಭಾಸ್ಕರನು ಒಳಗೆ ಪ್ರವೇಶಿಸಿ: —"ಇನ್‌ಸ್ಪೆಕ್ಟರರೆಲ್ಲಿ?" ಎಂದನು. ಮೇಲೆ ಇದ್ದ ಇನ್‌ಸ್ಪೆಕ್ಟರು ಕೆಳಗಿಳಿದು ಬಂದರು. ಭಾಸ್ಕರನನ್ನು ಮೇಲಿದ್ದ ಕೊಠಡಿಗೆ ಕರೆದು ಕೊಂಡು ಹೋಗಿ ಲಲಿತೆಯ ವಿಚಾರವಾಗಿ ಮಾತನಾಡುತ್ತಾ, ಅರ್ಧ ಗಂಟೆಯ ಕಾಲವಿದ್ದು, 'ಐದು ನಿಮಿಷ ಬರುವೆನು' ಎಂದು ಹೇಳಿ, ಹೊರಕ್ಕೆ ಹೊರಟರು. ಸ್ವಲ್ಪ ಹೊತ್ತಿನೊಳಗಾಗಿಯೇ ಮನೆಯೆಲ್ಲವೂ ನಿಶ್ಶಬ್ದವಾಯಿತು! ಭಾಸ್ಕರನು ಕೊಠಡಿಯಲ್ಲಿಯೇ ಕುಳಿತಿದ್ದನು. ಅನಂತರ ಮೂರು ಜನ ಪೋಲೀಸಿನವರು ಆ ಕೊಠಡಿಯೊಳಕ್ಕೆ ಬಂದರು. ಅವರಲ್ಲಿ ತಾನು ಹಿಂದಿನ ರಾತ್ರಿ ನೋಡಿದ ನರಸಿಂಗನು ಇದ್ದದ್ದನ್ನು ಕಂಡು, ಭಾಸ್ಕರನು ಸ್ವಲ್ಪ ಗಾಬರಿಯಾದನು.

ನರಸಿಂಗನು ಮುಂದುವರಿದು: — ಭಾಸ್ಕರರಾಯರೇ, ಇನ್‌ಸ್ಪೆಕ್ಟರರು ಮಗ್ಗಲು ಕೊಠಡಿಯಲ್ಲಿರುವರು. ತಮ್ಮನ್ನು ಬರಹೇಳುತ್ತಾರೆ, ಎಂದನು. ಭಾಸ್ಕರನು ವಿಧಿಯಿಲ್ಲದೆ ಅವರನ್ನು ಹಿಂಬಾಲಿಸಿದನು. ನರಸಿಂಗನು ಮುಂದೆ ಹೋಗುತಲಿದ್ದನು. ಅವನ ಹಿಂದೆ ಭಾಸ್ಕರ. ಅವನ ಹಿಂದೆ ಉಳಿದ ಇಬ್ಬರು ಪೋಲೀಸಿನವರು. ನರಸಿಂಗನು ಒಂದು ಕತ್ತಲೆಯ ಕೋಣೆಯ ಹತ್ತಿರಕ್ಕೆ ಬಂದು ನಿಂತು: — "ಭಾಸ್ಕರರಾಯರೇ, ಒಳಗೆ ಇನ್‌ಸ್ಪೆಕ್ಟರಿರುವರು, ನಡೆಯಿರಿ" ಎಂದನು. ಭಾಸ್ಕರನು ಸ್ವಲ್ಪ ಮುಂದುವರಿದು ಕೊಠಡಿಯೊಳಗೆ ಪ್ರವೇಶಿಸದೆ: 'ಕೊಠಡಿಯು ಬಹಳ ಕತ್ತಲೆಯಾಗಿದೆ. ಇನ್‌ಸ್ಪೆಕ್ಟರು ಇರುವ ಹಾಗೆ ಕಾಣುವುದಿಲ್ಲ' ಎಂದನು.

ನರಸಿಂಗ: ಇದ್ದಾರೆ ಸ್ವಾಮಿ, ಒಳಗೆ ಇದ್ದಾರೆ. ನೀವು ಒಳಕ್ಕೆ ನಡೆಯಿರಿ, ಎಂದು ನರಸಿಂಗನು ಹೇಳುತ್ತಿರುವಾಗ ಸ್ವಲ್ಪ ಹತ್ತಿರದಲ್ಲಿದ್ದ ನಿಂತಿದ್ದ ಇಬ್ಬರು ಪೋಲೀಸಿನವರು ಕೂಡಲೆ ಭಾಸ್ಕರನ ಹಿಂದೆ ಬಂದು, ಬಲಾತ್ಕಾರದಿಂದ ಅವನನ್ನು ಆ ಕೊಠಡಿಯೊಳಕ್ಕೆ ನೂಕಿ,

ಬಾಗಿಲಿಗೆ ಬೀಗವನ್ನು ಹಾಕಿಕೊಂಡು ಅಲ್ಲಿಂದ ಹೊರಟು ಹೋದರು. ಕಾಲುಗಂಟೆಯಲ್ಲಿಯೇ ಮನೆಯಲ್ಲವೂ ನಿಶ್ಶಬ್ದವಾಯಿತು.

ಭಾಸ್ಕರನಾದರೋ ತನ್ನನ್ನು ಉಪಾಯದಿಂದ ಕಳ್ಳರು ಸೆರೆ ಹಿಡಿದರೆಂದು ತಿಳಿದನು. ಮುಂದೆ ಹೇಗೆ ತಪ್ಪಿಸಿಕೊಂಡು ಹೋಗಬೇಕೆಂಬುದು ಮಾತ್ರ ಅವನಿಗೆ ತೋಚಲೊಲ್ಲದು. ತನ್ನ ಹತ್ತಿರಿದ್ದ ಬ್ಯಾಟರೀ ದೀಪವನ್ನು ಹಿಡಿದುಕೊಂಡು ಕೊಠಡಿಯನ್ನೆಲ್ಲ ಪರೀಕ್ಷಿಸಿದನು. ಗೋಡೆಯನ್ನೆಲ್ಲ ಗುದ್ದಿ ನೋಡಿದನು. ನೆಲವನ್ನೆಲ್ಲ ಚನ್ನಾಗಿ ಪರೀಕ್ಷಿಸಿದನು. ಅಲ್ಲಿ ಅವನಿಗೆ ಏನೂ ಕಾಣಿಸಲಿಲ್ಲ. ನಿರಾಶನಾಗಿ ಮುಂದೆ ಇನ್ನೇನು ಮಾಡಬೇಕೆಂದು ಯೋಚಿಸುತ್ತಾ ಕುಳಿತನು. ಪುನಃ ಎದ್ದು, ಗೋಡೆಯನ್ನು ಗುದ್ದಿ ನೋಡಿದನು. ಆಗ 'ಠಣ್' ಎಂದು ಸಬ್ದವಾಯಿತು. ಅಲ್ಲಿ ಏನೋ ಇರಬಹುದೆಂದು ಬಹಳ ಜಾಗರೂಕತೆಯಿಂದ ಹುಡುಕಿದನು. ಅಲ್ಲಿ ಒಂದು ಬಾಗಿಲು ಇದ್ದ ಹಾಗೆ ಭಾಸವಾಯಿತು. ಹತ್ತಿರಿದ್ದ ದೀಪದ ಸಹಾಯದಿಂದ ಬಾಗಿಲಿರುವುದನ್ನು ನಿರ್ಧರಿಸಿಕೊಂಡನು. ಅನಂತರ ಅದನ್ನು ತೆರೆಯುವುದಕ್ಕೆ ತಕ್ಕ ಸಾಧನಗಳನ್ನು ಮಾಡಲುಪಕ್ರಮಿದನು. ಬರೀ ಒಂದು ಬಿಳಿ ತಗಡು ಗೋಡೆಗೆ ಬಡಿದು ಅದರ ಮೇಲೆ ಸುಣ್ಣ ಬಳಿದ ಹಾಗೆ ಮಾತ್ರ ಕಾಣಿಸುತ್ತಿತ್ತು; ಆದರೆ ಅದರ ಮೇಲು ಭಾಗದಲ್ಲಿ ಒಂದು ಮೊಳೆಯು ಕಾಣಿಸಿತು. ಅದನ್ನು ಹಿಡಿದುಕೊಂಡು ತಿರುಗಿಸಲು ಪ್ರಯತ್ನಿಸಿದನು; ಮೊದಲು ಪ್ರಯೋಜನವಾಗಲಿಲ್ಲ. ಪುನಃ ಅದನ್ನು ಎಳೆಯುತ್ತಿರುವಾಗ ಆಕಸ್ಮಿಕವಾಗಿ ಬಾಗಿಲು ತೆರೆದು ಹೋಯಿತು. ಕೆಳಕ್ಕಿಳಿದು ಹೋಗುವುದಕ್ಕೆ ಮೆಟ್ಟಿಲುಗಳು ಕಾಣಿಸಲು, ಧೈರ್ಯ ಮಾಡಿಕೊಂಡು ಕೆಳಗಿಳಿದು ಬಂದನು ಅವನಿಗೆ ಮತ್ತೊಂದು ಬಾಗಿಲು ಸಿಕ್ಕಿತು. ಅದನ್ನು ಒದ್ದು ಮುರಿದು ಹಾಕಿ ಮುಂದಕ್ಕೆ ಬರಲು, ಬೀದಿಯ ಹೊರಬಾಗಿಲು ಕಾಣಿಸಿತು. ಇನ್ನು ತಾನು ತಪ್ಪಿಸಿಕೊಂಡು ಹೋಗುವುದಕ್ಕೆ ಯಾವ ತೊಂದರೆಯೂ ಇಲ್ಲವೆಂದು ಮನೆಯನ್ನೆಲ್ಲ ಪುನಃ ಪರೀಕ್ಷಿಸಿ, ಮನೆಯ ಹಿಂಭಾಗಕ್ಕೆ ಬಂದು ಅಲ್ಲಿಂದ ಹೊರಕ್ಕೆ ಹೊರಟು ಹೋದನು. ಅರ್ಧ ಗಂಟೆಯಾದ ನಂತರ ನರಸಿಂಗನು

ಆ ಮನೆಗೆ ಬಂದನು. ಅವನ ಜೊತೆಯಲ್ಲಿ ಮತ್ತೆ ಈರ್ವರಿದ್ದರು. ಅವರಲ್ಲಿ ಒಬ್ಬ ಅಮೀರ; ಇನ್ನೊಬ್ಬ ಯಜಮಾನ ಗೋಪಾಲರಾಯ. ಅವರು ಮನೆಯನ್ನು ಪ್ರವೇಶಿಸಿ ತಮ್ಮ ಕೊಠಡಿಗೆ ಹೋಗಿ ಕುಳಿತರು. ಅವರಲ್ಲಿ ಗೋಪಾಲರಾಯನು ನರಸಿಂಗನನ್ನು: 'ನರಸಿಂಗಾ, ನೀನು ಬಹಳ ಉಪಾಯದಿಂದ ಭಾಸ್ಕರನನ್ನು ಸೆರೆ ಹಿಡಿದಿರುವೆ. ಇನ್ನು ನಮ್ಮ ಕೆಲಸವೆಲ್ಲವೂ ಕೈಗೂಡುವ ಹಾಗೆ ಕಾಣುತ್ತೆ. ಈಗ ಭಾಸ್ಕರನನ್ನು ಯಾವ ಕೊಠಡಿಯಲ್ಲಿ ಹಾಕಿರುವೆ?' ಎಂದು ಕೇಳಿದನು.

ನರಸಿಂಗ: — ಈ ಮೂರನೇ ಕೊಠಡಿಯಲ್ಲಿಯೇ ಇಟ್ಟಿರುವೆನು.

ಗೋಪಾಲ: — ಮೂರನೇ ಕೊಠಡಿಯಲ್ಲಿದ್ದಕ್ಕಿಂತಲೂ ಕೆಳಗಿನ ಕೊಠಡಿಯಲ್ಲಿ ಇಟ್ಟಿದ್ದರೆ ಚೆನ್ನಾಗಿತ್ತು.

ನರಸಿಂಗ: — ಈಗಲೆ ಬೇಕಾದರೂ ಅವನನ್ನು ಅಲ್ಲಿಗೆ ಒಯ್ಯಬಹುದು. ಅದೆಷ್ಟರ ಕೆಲಸ?

ಗೋಪಾಲ: — ಹಾಗೆ ಮಾಡುವುದುತ್ತಮ. ಆ ಕೊಠಡಿಯಲ್ಲಿ ಗುಪ್ತದ್ವಾರವೂ ಇರುವುದರಿಂದ ಅವನನ್ನು ಅಲ್ಲಿ ಇಟ್ಟಿರುವುದು ಸರಿಯಾದುದಲ್ಲ.

ನರಸಿಂಗ: — ಹಾಗಾದರೆ, ಅವನನ್ನು ಅಲ್ಲಿಂದ ಈಗಲೇ ಸಾಗಿಸೋಣವೇನು?

ಗೋಪಾಲ: ಜಾಗ್ರತೆಯಾಗಿ ಮಾಡಿದರೆ ಒಳ್ಳೆಯದು!

ನರಸಿಂಗ, ಅಮೀರರಿಬ್ಬರೂ ಎದ್ದು ಮೂರನೆಯ ಕೊಠಡಿಗೆ ಬಂದರು. ಕೊಠಡಿಯ ಬಾಗಿಲನ್ನು ಜಾಗರೂಕತೆಯಿಂದ ತೆರೆದು ನರಸಿಂಗನು ಒಳಗೆ ಪ್ರವೇಶಿಸಿದನು. ಅಮೀರನು ಬಾಗಿಲ ಹತ್ತಿರವೇ ನಿಂತಿದ್ದನು. ನರಸಿಂಗನು ಒಳಕ್ಕೆ ಹೋಗುತ್ತಲೇ ಸುತ್ತಲೂ ನೋಡಿ: "ಅಮೀರ್-ಅಮೀರ್, ಭಾಸ್ಕರನು ಕಾಣುವುದೇ ಇಲ್ಲವಲ್ಲ?" ಎಂದು ಗಾಬರಿಯಿಂದ ಕೂಗಿದನು. ಇವನ ಕೂಗು ಕೊಠಡಿಯಲ್ಲಿ ಯೋಚನಾಪರವಶನಾಗಿ ಕುಳಿತಿದ್ದ ಗೋಪಾಲರಾಯನಿಗೂ ಕೇಳಿಸಲು, ಅವನೂ ಬಂದನು. ಎಲ್ಲರೂ ಭಾಸ್ಕರನನ್ನು ಹುಡುಕಿದರು. ಆಗ ಆ ಕೊಠಡಿಯ ಗುಪ್ತ

ಬಾಗಿಲ ಮಾರ್ಗವಾಗಿ ಓಡಿ ಹೋಗಿ, ತಮ್ಮನ್ನು ಮೋಸಪಡಿಸಿರಬೇಕೆಂದು ನಿರ್ಧರಿಸಿದರು. ಗೋಪಾಲರಾಯನಾದರೋ, ಭಾಸ್ಕರನನ್ನು ಸರಿಯಾದ ಸ್ಥಳದಲ್ಲಿ ಇಡಲಿಲ್ಲವೆಂದು ನರಸಿಂಗನನ್ನು ಹೀಯ್ಯಾಳಿಸಿದನು. ನರಸಿಂಗನು ಪುನಃ ಭಾಸ್ಕರನನ್ನು ಹಿಡಿದು ತರುವೆನೆಂದು ಶಪಥ ಮಾಡಿದ ಮೇಲೆ, ಅಲ್ಲಿಂದ ಎಲ್ಲರೂ ಹೊರಬಿದ್ದರು.

ಇತ್ತಲಾಗಿ ಭಾಸ್ಕರನು ಸೆರೆಯಿಂದ ತಪ್ಪಿಸಿಕೊಂಡು ಮಾರನೇದಿನ ರಾತ್ರಿ ಜವಾನ ರಾಮನ ವೇಷವನ್ನು ಪುನಃ ಹಾಕಿಕೊಂಡು ಲಲಿತೆಯನ್ನು ಸೆರೆಯಿಟ್ಟಿರುವ ಗುಪ್ತಸ್ಥಳಕ್ಕೆ ಹೊರಟನು. ಅವನು ಉಸ್ಮಾನನ ಗುಡಿಸಿಲಿನ ಹತ್ತಿರ ಬರುವ ಹೊತ್ತಿಗೆ ರಾತ್ರಿ ಹನ್ನೊಂದು ಗಂಟೆ ಬಡಿದು ಹೋಗಿತ್ತು. ಉಸ್ಮಾನನು ಮಲಗುವದರಲ್ಲಿದ್ದನು, ಯಾವಾಗ ರಾಮನು ಬಂದುದನ್ನು ನೋಡಿದನೋ, ಆಗ ತನ್ನ ಗುಡಿಸಿಲಿನಿಂದ ಹೊರಕ್ಕೆ ಬಂದು, ಅವನನ್ನು ಒಳಕ್ಕೆ ಕರೆದುಕೊಂಡು ಹೋದನು. ಇವನು ಕೃತ್ರಿಮ ರಾಮನೆಂದು ಅವನಿಗೆ ಗೊತ್ತೇ ಆಗಲಿಲ್ಲ. ಈ ಕೃತ್ರಿಮ ರಾಮನು ಉಸ್ಮಾನನ ಹತ್ತಿರ ಬರುವಾಗಲೇ ತನ್ನ ಹತ್ತಿರ ಸ್ವಲ್ಪ ಭಂಗೀಸೊಪ್ಪನ್ನೂ ಸ್ವಲ್ಪ ಸಾರಾಯಿಯನ್ನೂ ತಂದಿದ್ದನು. ಉಸ್ಮಾನನಿಗೆ ತನ್ನ ನಿಜಸ್ಥಿತಿಯು ಗೊತ್ತಾಗದ ಹಾಗೆ ನಟಿಸುತ್ತಾ, ಅವನು ಭಂಗಿಸೊಪ್ಪನ್ನು ಸೇದಿ, ಸಾರಾಯಿಯನ್ನು ಕುಡಿಯುವ ಹಾಗೆ ಮಾಡಿದನು. ಅವುಗಳನ್ನೆಲ್ಲಾ ಸ್ವೀಕರಿಸಿದ ಮೇಲೆ ಉಸ್ಮಾನನು ಅಮಲು ಬಂದು ಕೆಳಗೆ ಬಿದ್ದನು. ಆ ಕೃತ್ರಿಮ ರಾಮನು ಅದೇ ಸಮಯದಲ್ಲಿ ಅವನ ಗುಡಿಸಲನ್ನೆಲ್ಲಾ ಶೋಧಿಸಿ, ಒಂದು ಸಣ್ಣ ಕಬ್ಬಿಣದ ಸಲಾಕಿಯನ್ನೂ ಕೆಲವು ಮೊಳೆಗಳನ್ನೂ ತೆಗೆದುಕೊಂಡು, ಅವನಿಗೆ ತನ್ನ ಹತ್ತಿರಿದ್ದ ಕ್ಲೋರೋಫಾರಂ ತೋರಿಸಿ, ಅವನ ದಿರುಸನ್ನೆಲ್ಲಾ ತಾನೇ ಹಾಕಿಕೊಂಡು ತನ್ನ ಹತ್ತಿರ ತಂದಿದ್ದ ಕೃತ್ರಿಮ ಗಡ್ಡವನ್ನು ಕಟ್ಟಿಕೊಂಡು ಉಸ್ಮಾನನ್ನು ಹತ್ತಿರದಲ್ಲಿಯೇ ಇದ್ದ ಒಂದು ಗವಿಯಲ್ಲಿ ಮಲಗಿಸಿ, ಗುಡಿಸಿಲಿಗೆ ಬಂದು ಉಸ್ಮಾನನಂತೆ ಮಲಗಿದನು. ಮಗ್ಗುಲು ಗುಡಿಸಿಲಿನಲ್ಲಿದ್ದ ಲಲಿತೆಗೆ ಆಹಾರವನ್ನು ಕೊಡುತ್ತಿದ್ದ ಮುದುಕಿಗೆ ಇಲ್ಲಿ ನಡೆದ ವಿದ್ಯಮಾನಗಳಾವವೂ ಗೊತ್ತಾಗಲಿಲ್ಲ.

ಇವನು ಮಲಗಿದ ಸ್ವಲ್ಪ ಹೊತ್ತಿನಲ್ಲಿಯೇ ಅಮೀರನೂ, ನಿಜವಾದ ರಾಮುನೂ ಬಂದರು. ಇವರೀರ್ವರನ್ನೂ ಭಾಸ್ಕರನು ಹಿಂದೆಯೇ ನೋಡಿದ್ದನಾದ ಕಾರಣ, ಬಂದವರು ಯಾರೆಂಬುದನ್ನು ತಿಳಿದುಕೊಳ್ಳಲು ಅವನಿಗೆ ತೊಂದರೆಯೇನೂ ಆಗಲಿಲ್ಲ. ಆಗ ಅವರನ್ನು ಕುರಿತು:"ಅಮೀರ, ಇದೇನು? ಇಷ್ಟು ಅಪರಾತ್ರಿಯಲ್ಲಿ ನೀವಿಬ್ಬರೇ ಬಂದಿರುವಿರಿ?" ಎಂದು ಕೇಳಿದನು.

ಅಮೀರ್: ಉಸ್ತಾದ್, ನಿನ್ನೆ ದಿನ ನರಸಿಂಗನು ಭಾಸ್ಕರನನ್ನು ಉಪಾಯಾಂತರದಿಂದ ಸೆರೆ ಹಿಡಿದು ತಂದು ನಮ್ಮ ಗುಪ್ತಮನೆಯಲ್ಲಿ ಸೆರೆ ಹಾಕಿದ್ದ ವಿಚಾರವು ನಿನಗೆ ತಿಳಿದೇ ಇದೆ.

ಕೃ. ಉ: —ಓಹೋ! ತಿಳಿದೇ ಇದೆ. ಈಗೇನಾಯಿತು?

ಅಮೀರ್: - ಭಾಸ್ಕರನು ಎಲ್ಲರ ಕಣ್ಣಿಗೂ ಮಣ್ಣನ್ನೆರಚಿ, ಅಲ್ಲಿಂದ ತಪ್ಪಿಸಿಕೊಂಡು ಹೋಗಿರುವನು.

ಕೃ. ಉ: - ಬಹಳ ಅನರ್ಥವಾಯಿತು! ಮುಂದಕ್ಕೇನು ಮಾಡುವಿರಿ?

ಅಮೀರ್: ಅವನಿಗೆ ಲಲಿತೆಯಿರುವ ಸ್ಥಳವು ಗೊತ್ತಿದೆ; ಆದುದರಿಂದ ಅವನು ಇಲ್ಲಿಗೆ ಯಾವ ವೇಷದಲ್ಲಿಯಾದರೂ ಬಂದು, ನಿನ್ನ ಕಣ್ಣಿಗೂ ಮಣ್ಣನ್ನೆರಚಿ ಹೋಗಬಹುದು. ನೀನು ಬಹಳ ಎಚ್ಚರಿಕೆಯಾಗಿರುವಂತೆ ತಿಳಿಸುವುದಕ್ಕಾಗಿ ಈಗ ನಾವು ಬಂದಿರುವೆವು.

ಕೃ. ಉ: —ಈಗ ಆ ಸೀತಾರಾಮುವಿನ ಗತಿಯೇನು?

ಅಮೀರ್:-ಅವನನ್ನು ಆ ಮನೆಯಲ್ಲಿಯೇ ಇಟ್ಟಿರುವೆವಲ್ಲಾ! ಈಗ ಅವನನ್ನು ಅನ್ನ-ನೀರುಗಳಿಲ್ಲದೆ, ಅರ್ಧ ಮಾಡಿಬಿಟ್ಟಿದ್ದೇವೆ. ನಾಳೆ ನಾಡಿದ್ದರಲ್ಲಿ ಪೂರ್ತಿ ಮಾಡಬೇಕೆಂದಿರುತ್ತೇವೆ.

ಕೃ ಉ:-ಹಾಗಾದರೆ ಈಗ ಸೀತಾರಾಮುವಿನ ಪತ್ನಿಯೆಲ್ಲಿರುವಳು?

ಅಮೀರ್: ಅವಳು ಭಾಸ್ಕರನ ಮನೆಯಲ್ಲಿಯೇ ಇರುವಳು. ಮೊದಲು ಲಲಿತೆಯು ನಮ್ಮ ಯಜಮಾನರ ಕೈವಶವಾದ ಮೇಲೆ ಇತರರ ಯೋಚನೆಯನ್ನು ಮಾಡೋಣ. ಹೇಗೂ ಆಗಲಿ. ನೀನು ಮಾತ್ರ ಬಹಳ ಜಾಗರೂಕತೆಯಿಂದಿರು. ಇನ್ನು ನಾವು ಹೊರಡುವೆವು, ಎಂದು

ಹೇಳಿ, ಅಮೀರನು ರಾಮನನ್ನು ಕರೆದುಕೊಂಡು ಅಲ್ಲಿಂದ ಹೊರಟು ಹೋದನು. ಅವರು ಹೊರಟು ಹೋದ ಸ್ವಲ್ಪ ಹೊತ್ತಿನಲ್ಲಿಯೇ ಭಾಸ್ಕರನೂ ಹೊರಟು, ಅತಿ ತ್ವರೆಯಿಂದ ಶಾಮರಾಯರ ಮನೆಗೆ ಬಂದು ಅವರನ್ನೆಬ್ಬಿಸಿ ಅಲ್ಲಿ ನಡೆದ ವಿಚಾರಗಳನ್ನೆಲ್ಲಾ ಸಂಕ್ಷೇಪವಾಗಿ ಅರುಹಿ, ಅವರ ಹತ್ತಿರಿದ್ದ ಕುದುರೆ ಬಂಡಿಯನ್ನು ತೆಗೆದುಕೊಂಡು ಹೋಗಿ ಅಮಲೇರಿ ಗುಹೆಯಲ್ಲಿಯೇ ಇದ್ದ ಉಸ್ಮಾನನ್ನು ಶಾಮರಾಯರ ಮನೆಗೆ ಕರೆತಂದು ಅವರ ಮನೆಯ ಒಂದು ಕೋಣೆಯಲ್ಲಿ ಅವನನ್ನು ಒಂಧಿಸಿ, ಪುನಃ ಲಲಿತೆಯನ್ನು ಇಟ್ಟಿದ್ದ ಗುಪ್ತಸ್ಥಳಕ್ಕೆ ಉಸ್ಮಾನನ ವೇಷದಲ್ಲಿಯೇ ಬಂದನು.

ಭಾಸ್ಕರನು ಮೊದಲುಯಾವ ತೊಂದರೆಯೂ ಇಲ್ಲದೆ, ಕೋಟೆಯನ್ನು ಹತ್ತಿ ಮೆಟ್ಟಿಲುಗಳನ್ನು ಇಳಿದು ಹೋದನು. ಒಂದೇ ಸಾರಿ ಆ ದಾರಿಯಲ್ಲಿ ಬಂದಿದ್ದನಾದ ಕಾರಣ ಮುಂದಕ್ಕೆ ದಾರಿಯು ಗೊತ್ತಾಗಲಿಲ್ಲ; ಆದರೂ ಬಹಳ ಶ್ರಮಪಟ್ಟು ಆ ಸ್ಥಳವನ್ನು ಕಂಡು ಹಿಡಿದು, ತನ್ನ ಹತ್ತಿರ ತಂದಿದ್ದ ಕಬ್ಬಿಣದ ಸಲಾಕಿಯನ್ನು ಆ ರಂಧ್ರದಲ್ಲಿ ಸೇರಿಸಿ, ೨ ೩ ಸಲ ಬಲಕ್ಕೂ-ಎಡಕ್ಕೂ ಎಳೆಯಲು ಬಾಗಿಲು ತೆರೆದು ಹೋಯಿತು. ಅಲ್ಲಿಂದ ಒಳಹೊಕ್ಕು ಲಲಿತೆಯನ್ನು ಸೆರೆ ಹಾಕಿದ್ದ ಕೊಠಡಿಯ ಬಾಗಿಲ ಹತ್ತಿರಕ್ಕೆ ಹೋಗಿ, ಬೀಗವನ್ನು ಸುಲಭವಾಗಿ ತೆಗೆಯುವುದಕ್ಕೆ ಆಗುತ್ತದೆಯೋ ಎಂಬುದನ್ನು ಪರೀಕ್ಷಿಸಲಾರಂಭಿಸಿದನು. ಹೊರಗಡೆ ಬಾಗಿಲ ಹತ್ತಿರ ಆಗುವ ಶಬ್ದವು, ಒಳಗೆ ಅರೆನಿದ್ದೆಯಲ್ಲಿ ಮಲಗಿದ್ದ ಲಲಿತೆಗೆ ಕೇಳಿಸಿತು. ಬಹಳ ಭಯದಿಂದ ಅವಳು ಬಾಗಿಲ ಹತ್ತಿರಕ್ಕೆ ಬಂದು ಶಬ್ದವನ್ನು ಆಲಿಸಿದಳು. ಹೊರಗಡೆ ಯಾರೊ ಬೀಗವನ್ನು ಮುರಿಯುತ್ತಲಿರುವ ಹಾಗೆ ಭಾಸವಾಯಿತು. ಪುನಃ ಹೆದರಿಕೆಯಿಂದ ಸ್ವಲ್ಪವೂ ಶಬ್ದ ಮಾಡದೆ ಸ್ವಸ್ಥಾನವನ್ನು ಸೇರಿದಳು. ಭಾಸ್ಕರನು ತನ್ನ ಹತ್ತಿರಿದ್ದ ಕಬ್ಬಿಣದ ಸಲಾಕಿಯಿಂದ ಆ ಬೀಗವನ್ನು ಮುರಿಯುವದಕ್ಕೆ ಪ್ರಯತ್ನಪಟ್ಟನು. ಅಷ್ಟರಲ್ಲಿಯೇ ಬೀಗವನ್ನು ಮುರಿದಿರುವದನ್ನು ಕಳ್ಳರು ಕಂಡರೆ, ಲಲಿತೆಯನ್ನು ಮತ್ತೆ ಎಲ್ಲಿಗಾದರೂ ತೆಗೆದುಕೊಂಡು ಹೋಗಬಹುದೆಂದು ಊಹಿಸಿ, ತನ್ನ ಹತ್ತಿ

ರಿದ್ದ ಮೊಳೆಗಳ ಸಹಾಯದಿಂದಲೇ ಬೀಗವನ್ನು ತೆಗೆದು, ಬಾಗಿಲನ್ನು ದೂಡಲು ಬಾಗಿಲು ತೆರೆಯಲೇ ಇಲ್ಲ. ಲಲಿತೆಯು ಒಳಗಿನಿಂದಬಾಗಿಲನ್ನು ಹಾಕಿಕೊಂಡಿರಬೇಕೆಂದು: "ಲಲಿತಾ, ಲಲಿತಾ" ಎಂದೆರಡು ಸಲ ಕೂಗಿದನು. ಈ ಕೂಗನ್ನು ಕೇಳಿದೊಡನೆಯೇ ಸುಮ್ಮನೆ ಮಂಕಾಗಿ ಕುಳಿತಿದ್ದ ಲಲಿತೆಯು ತಟ್ಟನೆ ಎದ್ದು ನಿಂತಳು. ಪುನಃ ನನ್ನ ಹೆಸರನ್ನೆತ್ತಿ ಯಾರೋ ಕೂಗಿದ ಶಬ್ದವನ್ನು ಕೇಳಿ, ತನ್ನ ಭಾಸ್ಕರನ ಧ್ವನಿಯು ಹಾಗಿರುವದೆಂದು ಯೋಚಿಸುತ್ತಾ ಬಾಗಿಲ ಹತ್ತಿರಕ್ಕೆ ಬಂದು: "ಯಾರದು?" ಎಂದಳು.

ಭಾಸ್ಕರ: — ನಾನು ಭಾಸ್ಕರ.

ಲಲಿತೆ: — ಯಾರೋ ಬಂದು ಭಾಸ್ಕರನೆಂದು ಹೇಳಿದರೆ ಪ್ರಯೋಜನವಿಲ್ಲ, ಎಂದಳು. ಇನ್ನು ತಡಮಾಡುವುದಕ್ಕೆ ಕಾಲವಿಲ್ಲೆಂದು ಭಾಸ್ಕರನು: — "ಲಲಿತೇ, ನಿಜವಾಗಿಯೂ ನಿನ್ನ ಭಾಸ್ಕರನೇ ಬಂದಿರುತ್ತೇನೆ; ಬೇಗ ಬಾಗಿಲನ್ನು ತೆರೆ. ನಾನು ಇಲ್ಲಿಗೆ ಬಂದಿರುವುದು ಯಾರಿಗಾದರೂ ತಿಳಿದರೆ ಅನರ್ಥಗಳುಂಟಾಗುವುವು ಬೇಗ ತೆರೆ" ಎಂದು ಬಾಗಿಲನ್ನು ಭದ್ರವಾಗಿ ನೂಕಲು, ಬಾಗಿಲು ತೆರೆದು ಹೋಯಿತು. ತನ್ನ ಎದುರಿಗೆ ಒಬ್ಬ ಮುಹಮ್ಮದೀಯನು ನಿಂತಿರುವುದನ್ನು ಕಂಡು ಲಲಿತೆಯು ಚೀತ್ಕಾರ ಮಾಡಿದಳು. ಕೂಡಲೆ ಭಾಸ್ಕರನು ತಾನು ಕಟ್ಟಿಕೊಂಡಿದ್ದ ಕೃತ್ರಿಮ ಗಡ್ಡವನ್ನು ಬಿಚ್ಚಲು, ಲಲಿತೆಗೆ ತನ್ನ ಪ್ರಿಯಕರನ ಗುರುತು ಹತ್ತಿತು. ಬಹಳ ದಿವಸಗಳಾದ ಮೇಲೆ ತನ್ನ ಪ್ರಿಯಕರನ ಸಂದರ್ಶನವಾದುದಕ್ಕಾಗಿ ಲಲಿತೆಯು ಆನಂದಬಾಷ್ಪಗಳನ್ನು ಸುರಿಸುತ್ತಾ, ಆತನ ಮುಖವನ್ನೇ ಎವೆಯಿಕ್ಕದೆ ನೋಡುತ್ತ ನಿಂತಳು. ಭಾಸ್ಕರನಿಗೂ ಇದೇ ರೀತಿಯಾಯಿತೆಂದು ಹೇಳಬೇಕಾಗಿಲ್ಲ. ಸ್ವಲ್ಪ ಹೊತ್ತು ಇಬ್ಬರೂ ಮೌನವಾಗಿಯೇ ಇದ್ದರು. ಕೊನೆಗೆ ಲಲಿತೆಯು ತನ್ನ ಪತಿಯ ಹತ್ತಿರ ಬಂದು ಅವನ ಕೈ ಹಿಡಿದುಕೊಂಡು: "ನನ್ನನ್ನು ಈ ಸೆರೆಯಿಂದ ಈಗಲೇ ತಪ್ಪಿಸುವಿರಾ?" ಎಂದು ಕೇಳಿದಳು. ಭಾಸ್ಕರ: — ಇಲ್ಲ. ಇನ್ನು ಸ್ವಲ್ಪ ದಿವಸಗಳಾಗಬೇಕು. ನೀನೂ ಅಲ್ಲದೆ, ಸೀತಾರಾಮನೂ ಸೆರೆಯಾಗಿರುವನು. ಅವನನ್ನು ಬಿಡುಗಡೆ ಮಾಡಿ, ಅನಂತರ ನಿನ್ನನ್ನೂ ಬಿಡುಗಡೆ ಮಾಡುವೆವು.

ಲಲಿತೆ ಅಳುತ್ತಾ:— "ನನ್ನನ್ನು ಮೊದಲು ಈ ಕಾರಾಗೃಹದಿಂದ ತಪ್ಪಿಸಿದರೆ ಸಾಕು."

ಭಾಸ್ಕರ: – "ಲಲಿತೆ, ನೀನು ಇಲ್ಲಿರುವುದು ನಮಗೆ ಗೊತ್ತಾಗಿದೆ. ಇನ್ನು ನಿನ್ನ ಬಿಡುಗಡೆಯ ವಿಚಾರದಲ್ಲಿ ಅಷ್ಟು ಯೋಚಿಸಬೇಕಾಗಿಲ್ಲ. ಶೀಘ್ರದಲ್ಲಿಯೇ ಆಗುವದು; ಆದರೆ ಮೊದಲು ಸೀತಾರಾಮುವು ಇರುವ ಸ್ಥಳವನ್ನು ಗೊತ್ತುಹಚ್ಚಬೇಕಾಗಿದೆ. ಇನ್ನು ನಾನು ಹೊರಡುವೆನು. ನೀನು ಮಾತ್ರ ಇಷ್ಟು ದಿವಸವು ಹೇಗೆ ಕಷ್ಟವನ್ನು ಅನುಭವಿಸಿಕೊಂಡಿದ್ದೆಯೋ, ಹಾಗೆಯೇ ಇನ್ನು ಸ್ವಲ್ಪ ದಿವಸಗಳು ಮಾತ್ರ ಅನುಭವಿಸು. ಆ ಮೇಲೆ ನಿರಂತರ ಸುಖವನ್ನು ಅನುಭವಿಸುವೆ" ಎಂದು ಹೇಳುತ್ತಾ, ನನ್ನ ಪತ್ನಿಯನ್ನು ಆಲಿಂಗನ ಮಾಡಿಕೊಂಡು, ಹೊರಹೊರಟು, ಯಥಾ ಪ್ರಕಾರ ಬೀಗವನ್ನು ಹಾಕಿಕೊಂಡು ಆ ಗುಪ್ತ ಸ್ಥಳವನ್ನು ಬಿಟ್ಟನು.



## ಅಧ್ಯಾಯ ೧೨

ಭಾಸ್ಕರನು ಆ ಗುಪ್ತಸ್ಥಳದಿಂದ ಉಸ್ಮಾನನ ವೇಷದಲ್ಲಿಯೇ ಹೊರಕ್ಕೆ ಬಂದನು. ಆ ಸಮಯಕ್ಕೆ ಸರಿಯಾಗಿ ನರಸಿಂಗನು ಎದುರಿಗೆ ಬಂದು ನಿಂತನು. ಕೃತ್ರಿಮ ಉಸ್ಮಾನನು ನರಸಿಂಗನನ್ನು ನೋಡಿ: 'ಇದೇನು? ನರಸಿಂಗಾ, ಒಬ್ಬನೇ ಬಂದಿರುವೆ?' ಎಂದನು.

ನರಸಿಂಗ: ಸುಮ್ಮನೆ ಹಾಗೆಯೇ ಬಂದೆನು. ನೀನೇನು ಈ ಕಡೆಯಿಂದ ಬರುತ್ತಲಿರುವೆ?

ಕೃ. ಉಸ್ಮಾನ್: ಬಹಳ ಹುಷಾರಾಗಿ ಲಲಿತೆಯನ್ನು ನೋಡಿ ಕೊಳ್ಳುವ ಹಾಗೆ ರಾಯರಿಂದ ಕಟ್ಟಪ್ಪಣೆಯಾಗಿದೆ. ಆದುದರಿಂದ ಅಲ್ಲಿ ರಾತ್ರಿಯಲ್ಲಾ ಗಸ್ತು ಹೊಡೆಯುವುದಕ್ಕಾಗಿ ಹೋಗಿದ್ದೆ. ಹೋಗಲಿ. ಕುಳಿತುಕೋ, ಎಂದು ಹೇಳುತ್ತ ಅವನಿಗೆ ಒಂದು ಸಿಗರೇಟನ್ನು ಕೊಟ್ಟು, ತಾನೊಂದು ತೆಗೆದುಕೊಂಡು ಸೇದುವುದಕ್ಕಾರಂಭಿಸಿದನು. ಸ್ವಲ್ಪ ನಿಮಿಷಗಳಲ್ಲಿಯೇ ನರಸಿಂಗನ ಪ್ರಕೃತಿಯು ಬದಲಾಯಿಸುತ್ತ ಬಂದಿತು. ಇದ್ದಕ್ಕಿದ್ದ ಹಾಗೆಯೇ ನೆಲದ ಮೇಲೆ ಉರುಳಿಕೊಂಡು ಜ್ಞಾನಶೂನ್ಯನಾದನು. ಕೂಡಲೆ ಭಾಸ್ಕರನು ನರಸಿಂಗನ ಉಡುಪನ್ನೆಲ್ಲ ತೆಗೆದು ಕೊಂಡು, ಅವನನ್ನು ಮೆಲ್ಲಗೆ ಗುಹೆಯಿಂದ ಕೆಳಕ್ಕೆ ಹೊತ್ತುಕೊಂಡು ಹೋಗಿ, ಲಲಿತೆಯನ್ನು ಹಾಕಿರುವ ಕೊಠಡಿಯ ಮಗ್ಗುಲ ಕೊಠಡಿಯಲ್ಲಿಯೇ ಅವನನ್ನೂ ಹಾಕಿ, ಅಲ್ಲಿಂದ ಹೊರಕ್ಕೆ ಬಂದು, ಉಸ್ಮಾನನ ಹಾಗೆಯೇ ಅವನ ಗುಡಿಸಿಲಿನಲ್ಲಿ ಆ ರಾತ್ರಿಯನ್ನೆಲ್ಲ ಕಳೆದು, ಬೆಳಿಗ್ಗೆ ಲಲಿತೆಗೆ ಆಹಾರವನ್ನು ತಲುಪಿಸಿದ ಮೇಲೆ ಊರಿನ ಕಡೆ ಹೋಗಿ ಬರುವುದಾಗಿ ಮುದುಕಿಗೆ ತಿಳಿಸಿ, ಊರನ್ನು ತಲುಪಿದನು.

ಅದೇ ರಾತ್ರಿ ಸುಮಾರು ಒಂಬತ್ತು ಗಂಟೆಯ ಹೊತ್ತಿಗೆ ಭಾಸ್ಕರನು ನರಸಿಂಗನ ಉಡುಪನ್ನು ಹಾಕಿಕೊಂಡು, ಊರಿನಲ್ಲಿದ್ದ ಆ ಗುಪ್ತಮನೆಗೆ ಬಂದನು. ಆಗ ತಾನೆ ಅಮೀರ ಮತ್ತು ಗೋಪಾಲರಾಯರು ಅಲ್ಲಿಗೆ ಬಂದಿದ್ದರು. ಇವನು ಹೋಗಿ ಬಾಗಿಲನ್ನು ತಟ್ಟಿದೊಡನೆಯೇ ರಾಮನು

ಬಂದು ಬಾಗಿಲನ್ನು ತೆರೆದನು. ತಾನು ಮಹಡಿಯ ಮೇಲಕ್ಕೆ ಹೋಗಿ, ಇಬ್ಬರೂ ಕುಳಿತಿದ್ದ ಕೊಠಡಿಯನ್ನು ಸೇರಿದನು. ಇವನ ಮರ್ಮ ವೇಷವು ಯಾರಿಗೂ ಗೊತ್ತಾಗಲೇ ಇಲ್ಲ. ಯಜಮಾನನು ಇವನನ್ನು ಕುರಿತು:— 'ನರಸಿಂಗಾ, ನೀನು ಬೆಳಗಿನಿಂದ ಕಾಣಲೇ ಇಲ್ಲ; ಎಲ್ಲಿಗೆ ಹೋಗಿದ್ದೆ?' ಎಂದು ಕೇಳಿದನು.

ಕೃ. ನರಸಿಂಗ:— ನಾನು ಹಾಗೆಯೇ ಉಸ್ಮಾನನನ್ನು ನೋಡಿಕೊಂಡು, ಅವನು ಕೆಲಸವನ್ನು ಸರಿಯಾಗಿ ಮಾಡುತಲಿದ್ದಾನೋ-ಇಲ್ಲವೋ ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ಹೋಗಿದ್ದೆ.

ಗೋಪಾಲ:— ಉಸ್ಮಾನನು ಸರಿಯಾಗಿ ಕೆಲಸ ಮಾಡುತಲಿದ್ದಾನೊ?

ಕೃ. ನರಸಿಂಗ:— ಓಹೋ! ಬಹಳ ಜಾಗರೂಕತೆಯಿಂದ ಕೆಲಸವನ್ನು ನಡಿಸುತಲಿದ್ದಾನೆ.

ಗೋಪಾಲ:— ನರಸಿಂಗಾ, ನಿನ್ನ ಹತ್ತಿರ ಒಂದು ಮಾತು ಹೇಳಿ, ನಿನ್ನ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕೆಂದು ಬೆಳಗಿನಿಂದಲೂ ನಿನ್ನನ್ನು ಹುಡುಕಿದೆ.

ಕೃ. ನರಸಿಂಗ:— ಅಂಥ ವಿಚಾರವೇನು?

ಗೋಪಾಲ:— ಯಾವ ವಿಚಾರವೂ ಇಲ್ಲ; ಈಗ ನಾವು ಸೀತಾರಾಮುವನ್ನು ಹಿಡಿದು ಸುಮ್ಮನೆ ಸೆರೆಯಲ್ಲಿ ಹಾಕಿರುತ್ತೇವೆ. ಲಲಿತೆಯನ್ನಾದರೋ ಅಲ್ಲಿಯೇ ಸೆರೆ ಹಾಕಿರುತ್ತೇವೆ. ಸುಮ್ಮನೆ ಎಲ್ಲರನ್ನೂ ಸೆರೆಯಲ್ಲಿ ಹಾಕುತ್ತಾ ಬಂದು, ಅವರು ಅಕಸ್ಮಾತ್ತಾಗಿ ತಪ್ಪಿಸಿಕೊಂಡು ಹೋದರೆ, ನಮ್ಮ ಗತಿಯೇನು?

ಕೃ. ನರಸಿಂಗ:— ಅಂಥ ಕಂಟಕಗಳನ್ನು ನಿರ್ಮೂಲ ಮಾಡಿದರಾಯಿತು.

ಗೋಪಾಲ:— ಹಾಗಾದರೆ, ನಾವು ಸೀತಾರಾಮುವನ್ನು ಸಂಹರಿಸೋಣವೇ?

ಕೃ. ನರಸಿಂಗ:— ಅವನನ್ನು ಸುಮ್ಮನೆ ಕೊಲ್ಲುವದಕ್ಕಿಂತಲೂ, ಮತ್ತೊಂದು ಕೆಲಸವನ್ನು ಮಾಡಬಹುದು.

ಗೋಪಾಲ:-- ಅದೇನು ಹೇಳು?

ಕೃ. ನರಸಿಂಗ:—ಈಗ ನಾವು ಹೋಗಿ: 'ನೀನು ಈ ಕೆಲಸದಲ್ಲಿ ಪುನಃ ಕೈ ಹಾಕುವುದಿಲ್ಲವೆಂದು ಶಪಥ ಮಾಡಿದರೆ, ನಿನ್ನನ್ನು ಬಿಡುಗಡೆ ಮಾಡುವೆವು; ಇಲ್ಲವಾದರೆ, ನೀನು ಇನ್ನು ಈ ಲೋಕದಲ್ಲಿ ಇರಲಾರೆ!' ಎಂದು ಸೀತಾರಾಮುವಿಗೆ ತಿಳಿಸೋಣ. ಆಗಲೂ ಅವನು ಈ ಕೆಲಸಕ್ಕೆ ಕೈ ಹಚ್ಚಲೇ ಬೇಕೆಂದರೆ ಅವನಿಲ್ಲದ ಹಾಗೆ ಮಾಡೋಣ.

ಗೋಪಾಲ: -ನೀನು ಹೇಳುವ ಹಾಗೆ ಮಾಡಬಹುದು; ಆದರೆ ಪುನಃ ಪತ್ರೆ ಹಚ್ಚುವ ಕೆಲಸಕ್ಕೆ ಕೈ ಹಾಕುವದಿಲ್ಲೆಂದು ಬಿಡುಗಡೆಗಾಗಿ ಹೇಳಿ, ಅನಂತರ ಕೆಲಸಕ್ಕೆ ಪುನಃ ಪ್ರಾರಂಭ ಮಾಡಿದರೇನು ಮಾಡುವುದು?

ಕೃ. ನರಸಿಂಗ -- ಇದಕ್ಕಾಗಿ ತಾವು ಯೋಚಿಸಬೇಕೆ? ಹಾಗೆ ಅವನು ಮಾಡಿದರೆ, ಪುನಃ ಅವನನ್ನು ಸೆರೆ ಹಿಡಿದು ತುಂಡರಿಸಿದರಾಯಿತು.

ಗೋಪಾಲ:—ಹಾಗಾದರೆ, ನೀನು ಹೋಗಿ ಅವನನ್ನು ಮಾತನಾಡಿಸಿ ಬರುವೆಯಾ?

ಕೃ. ನರಸಿಂಗ: — ಓಹೋ! ಹೋಗಿ ಬರುವೆನು, ಎಂದು ಹೇಳುತ್ತಾ, ಅಮೀರನನ್ನು ಕರೆದುಕೊಂಡು ಸೀತಾರಾಮುವನ್ನು ಸೆರೆ ಹಾಕಿರುವ ಸ್ಥಳಕ್ಕೆ ಹೊರಟನು. ಆ ಕೃತ್ರಿಮ ನರಸಿಂಗನಿಗಾದರೊ ಸೀತಾರಾಮುವನ್ನು ಸೆರೆ ಹಾಕಿರುವ ಸ್ಥಳವೇ ಗೊತ್ತಿದ್ದಿಲ್ಲ; ಆದರೂ ಗೊತ್ತಿದ್ದವನ ಹಾಗೆಯೇ ನಟಿಸುತ್ತಾ, ಅಮೀರನೊಡನೆ ಮಾತನಾಡುತ್ತ, ಅವನನ್ನು ಮುಂದೆ ಬಿಟ್ಟುಕೊಂಡು, ತಾನು ಹಿಂದೆ ಹೋಗುತಲಿದ್ದನು. ಸ್ವಲ್ಪ ಹೊತ್ತಿನಲ್ಲಿಯೇ ಅಮೀರನು ಒಂದು ಗೋಡೆಯ ಹತ್ತಿರ ನಿಂತನು. ನರಸಿಂಗನು: 'ಅಮೀರ, ಇದೇಕೆ ಸುಮ್ಮನೆ ನಿಂತೆ? ನಡೆ, ಬೇಗ ಹೋಗೋಣ' ಎಂದನು. ಅಮೀರನು ಗೋಡೆಯ ಹತ್ತಿರಿದ್ದ ಒಂದು ಮೊಳೆಯನ್ನು ಮುಟ್ಟಲು, ಕೂಡಲೆ ಅಲ್ಲಿ ಒಂದು ಬಾಗಿಲು ತೆರೆಯಲ್ಪಟ್ಟಿತು. ಅಲ್ಲಿ ನಾಲ್ಕೈದು ಮೆಟ್ಟಿಲುಗಳಿದ್ದವು. ಕೆಳಗಡೆಯಿಂದ ಎಲ್ಲೋ ಬೆಳ್ಳಗೆ ಬೆಳಕು ಬೀಳುತ್ತಿತ್ತು. ಮೊದಲು ಅಮೀರನು ಒಳಕ್ಕೆ ಪ್ರವೇಶಿಸಿದನು. ಅವನನ್ನು ಕೃತ್ರಿಮ ನರಸಿಂಗನೂ ಹಿಂಬಾಲಿ

ಸಿದನು. ಹತ್ತಿರದಲ್ಲಿಯೇ ಒಣಗಿ ಹೋಗಿರುವ ಒಂದು ಕೊಳವು ಕಾಣಿಸಿತು. ಅಲ್ಲಿಗೆ ಇಬ್ಬರೂ ಹೋದ ಮೇಲೆ ಕೆಳಗಡೆ ಮತ್ತೊಂದು ಬಾಗಿಲು ಕಾಣಿಸಲು, ಅದನ್ನು ಅಮೀರನು ತನ್ನ ಹತ್ತಿರಿದ್ದ ಬೀಗದ ಕೈಯಿಂದ ತೆಗೆದನು. ಒಳಗಡೆ ಸೀತಾರಾಮನು ನಿದ್ರಾಹಾರಾದಿಗಳಿಲ್ಲದೆ, ಶಕ್ತಿಹೀನನಾಗಿ ಒಂದು ಕಡೆ ಕುಳಿತಿದ್ದನು. ಯಾರೋ ಕದವನ್ನು ತೆರೆದಿದ್ದನ್ನು ಕಂಡು ಎದ್ದು ನಿಂತನು. ಅಷ್ಟರಲ್ಲಿಯೇ ಕೃತ್ರಿಮ ನರಸಿಂಗನು ಮುಂದುವರಿದು: "ಎಲಾ, ಸೀತಾರಾಮ, ನಿನಗೆ ಈ ಕಾರಾಗೃಹದಿಂದ ಬಿಡುಗಡೆಯಾಗಲು ಇಷ್ಟವಿದೆಯೆ?"

ಸೀತಾರಾಮ: — ನನ್ನ ಬಿಡುಗಡೆಯು ಹಾಗಿರಲಿ; ನಮ್ಮ ಲಲಿತೆಯೇನಾದಳು?

ನರಸಿಂಗ: ಲಲಿತೆಯು ಆಗಲೇ ನಮ್ಮವಳಾದಳು. ಈಗ ನಿನಗೆ ಬಿಡುಗಡೆಯಾಗಬೇಕೆಂಬ ಇಷ್ಟವಿದ್ದರೆ, ನಾವು ಹೇಳುವ ಹಾಗೆ ನಡೆಯುವುದಾದರೆ ನಿನ್ನನ್ನು ಈಗಲೇ ಜೀವ ಸಹಿತ ಬಿಟ್ಟು ಬಿಡುವೆವು.

ಸೀತಾರಾಮ: ಅದೇನು?

ನರಸಿಂಗ: ನೀನು ಪತ್ತೆ ಹಚ್ಚುವ ಕಾರ್ಯದಲ್ಲಿ ಪುನಃ ಕೈಹಾಕುವದಿಲ್ಲವೆಂದು ನಮ್ಮಲ್ಲಿ ಶಪಥ ಮಾಡುವುದಾದರೆ, ನಿನ್ನನ್ನು ಬಿಡುಗಡೆ ಮಾಡುವೆವು. ಹಾಗೇನಾದರೂ ಶಪಥ ಮಾಡಿ ಅದಕ್ಕೆ ವಿರುದ್ಧವಾಗಿ ನಡೆದರೆ, ಪುನಃ ನಿನ್ನನ್ನು ಹಿಡಿದು ತಂದು ತುಂಡರಿಸುವೆವು. ಏನು ನಿನ್ನ ಅಭಿಪ್ರಾಯವೇನು??

ಸೀತಾರಾಮ: — ನೀವು ನನ್ನ ಬಿಡುಗಡೆ ಮಾಡದಿದ್ದರೂ ಚಿಂತೆಯಿಲ್ಲ. ಎಂದಾದರೂ ಒಂದು ದಿನ ನಾನು ನನ್ನ ಶಪಥವನ್ನು ಪೂರ್ತಿಗೊಳಿಸುವೆನೇ ಹೊರತು, ನಿಮಗೆ ಅಡಿಯಾಳಾಗುವುದಿಲ್ಲ.

ನರಸಿಂಗ: — ಎಲಾ, ನೀನು ಇಲ್ಲಿಯೇ ಸಾಯುತ್ತಿರುವಾಗ, ನಿನ್ನ ಶಪಥವನ್ನು ಪೂರ್ತಿ ಮಾಡುವುದೆಂತು? ಸುಮ್ಮನೇ ನಾವು ಹೇಳಿದ ಹಾಗೆ ಕೇಳು. ಆ ಕೆಲಸವನ್ನು ಬಿಟ್ಟು, ಸುಖವಾಗಿ ಹೊರಟು ಹೋಗು.

ಸೀತಾರಾಮ: — ಪತ್ತೆ ಹಚ್ಚುವ ಕೆಲಸವು ನನ್ನಿಂದ ಆಗದಿದ್ದರೆ,

ಈ ಕಾರ್ಯಕ್ಕಾಗಿ ಸತ್ತರೂ ಚಿಂತೆಯಿಲ್ಲ. ನನ್ನನ್ನು ಸುಮ್ಮನೆ ಪೀಡಿಸ ಬೇಡ, ಹೊರಡು.

ನರಸಿಂಗ:—"ಎಲಾ ಚಂಡಾಲ, ಇಷ್ಟಾದರೂ ನಿನಗೆ ಬುದ್ಧಿ ಬಂದಿಲ್ಲವೇ? ಅನುಭವಿಸು" ಎಂದು ಹೇಳುತ್ತ, ಆವೀರನಿಗೆ ಬಾಗಿಲು ಹಾಕುವ ಹಾಗೆ ಹೇಳಿ ಅಲ್ಲಿಂದ ಹೊರಟನು. ಅನಂತರ ಅಲ್ಲಿ ನಡೆದ ವಿಚಾರವನ್ನೆಲ್ಲ ತಮ್ಮ ಯಜಮಾನನಿಗೆ ತಿಳಿಸಿ, ಸೀತಾರಾಮುವನ್ನು ಇನ್ನೆರಡು ಮೂರು ದಿನಗಳಲ್ಲಿ ಸಂಹರಿಸಬೇಕೆಂದು ನಿರ್ಧರಿಸಿದರು.

---

## ಅಧ್ಯಾಯ ೧೩

ಮೂರನೇ ದಿನ ಭಾಸ್ಕರನು ತನ್ನ ಕೃತ್ರಿಮ ವೇಷವನ್ನು ಬಿಟ್ಟು ಮನೆಯನ್ನು ಸೇರಿದನು. ಅಲ್ಲಿ ಸ್ವಲ್ಪಕಾಲ ವಿಶ್ರಾಂತಿಯನ್ನು ತೆಗೆದುಕೊಂಡು, ಅಲ್ಲಿಂದ ಶಾಮರಾಯರ ಮನೆಯನ್ನು ಕುರಿತು ಹೊರಟನು. ಆಗ ತಾನೆ ಶಾಮರಾಯರು ತಮ್ಮ ನಿತ್ಯ ವಿಧಿಗಳನ್ನೆಲ್ಲಾ ಮುಗಿಸಿಕೊಂಡು, ಯಾವುದೋ ವೃತ್ತಪತ್ರಿಕೆಯನ್ನು ಓದುತಲಿದ್ದರು. ಭಾಸ್ಕರನು ಮನೆಯನ್ನು ಪ್ರವೇಶಿಸಿದ್ದನ್ನು ನೋಡಿ, ಶಾಮರಾಯರು ಅವನಿಗೆ ಸುಖಾಸನವನ್ನು ಕೊಟ್ಟು ಕುಳ್ಳಿರಿಸಿ, ಮೊದಲು ಯೋಗಕ್ಷೇಮ ಸಮಾಚಾರವನ್ನು ಕೇಳಿದರು. ಅನಂತರ ಅವರು ಲಲಿತೆಯ ಮತ್ತು ಸೀತಾರಾಮುವಿನ ವಿಚಾರವಾಗಿ ಇಂತು ಪ್ರಶ್ನೆ ಮಾಡಿದರು:

ಶಾಮರಾಯ: ಭಾಸ್ಕರ, ಸೀತಾರಾಮುವನ್ನು ಆ ದುಷ್ಟರು ಸೆರೆ ಹಿಡಿದ ಲಾಗಾಯಿತು ನೀನೇ ಈ ಕಾರ್ಯದಲ್ಲಿ ತತ್ಪರನಾಗಿರುವೆ. ಈಗ ಸೀತಾರಾಮು ಮತ್ತು ಲಲಿತೆ ಇವರುಗಳು ಎಲ್ಲಿರುವರೆಂಬದನ್ನು ಪತ್ತೆ ಹಚ್ಚಿರುವೆಯಾ?

ಭಾಸ್ಕರ: ರಾಯರೇ, ಆ ದುಷ್ಟರು ಅವರೀರ್ವರನ್ನು ಎಲ್ಲಿ ಇಟ್ಟಿರುವರೆಂಬದನ್ನು ತಿಳಿದುಕೊಂಡು ಬಂದಿರುತ್ತೇನೆ. ಅವರನ್ನು ಅಲ್ಲಿಂದ

ಹೇಗೆ ಬಿಡುಗಡೆ ಮಾಡಬೇಕೆಂಬ ವಿಷಯದಲ್ಲಿ ತಮ್ಮ ಸಲಹೆಯನ್ನು ತೆಗೆದುಕೊಳ್ಳುವುದಕ್ಕಾಗಿಯೇ ಇಲ್ಲಿಗೆ ಬಂದಿರುವೆನು.

ಶಾಮ: ಲಲಿತೆಯನ್ನೂ, ಸೀತಾರಾಮುವನ್ನೂ ಒಂದೇ ಸ್ಥಳದಲ್ಲಿ ಇಟ್ಟಿರುವರೆ?

ಭಾಸ್ಕರ: - ಇಲ್ಲ. ಸೀತಾರಾಮುವನ್ನು ಈ ಊರಿನಲ್ಲೇ ಒಂದು ಗುಪ್ತ ಮನೆಯಲ್ಲಿಟ್ಟಿರುವರು. ಲಲಿತೆಯು ಇರುವ ಸ್ಥಳವು ಗೊತ್ತೇ ಇದೆ. ಹಳೆಯ ಕೋಟೆಯಲ್ಲಿರುವ ಗುಪ್ತ ಸ್ಥಳ.

ಶಾಮ: — ಈಗ ಮೊದಲು ಯಾರನ್ನು ಬಿಡುಗಡೆ ಮಾಡಬೇಕು?

ಭಾಸ್ಕರ: - ಮೊದಲು ಸೀತಾರಾಮುವನ್ನು ಬಿಡುಗಡೆ ಮಾಡಿದರೆ ಉತ್ತಮ. ನಾಳೆ-ನಾಡಿದ್ದರಲ್ಲೇ ಅವರು ಅವನನ್ನು ಸಂಹರಿಸಬಹುದು.

ಶಾಮ: ಹಾಗಾದರೆ, ಈ ದಿನವೇ ನೀನು ಪ್ರಯತ್ನ ಮಾಡಿ, ಅವನನ್ನು ಸೆರೆಯಿಂದ ತಪ್ಪಿಸು.

ಭಾಸ್ಕರ: ರಾಯರೆ, ನಾನು ಈಗ ಆ ದುಷ್ಟರ ಗುಂಪಿನಲ್ಲಿರುವ ನರಸಿಂಗನೆಂಬುವನನ್ನು ಸೆರೆ ಹಿಡಿದು, ಅವನ ಉಡುಪನ್ನೆಲ್ಲಾ ನಾನೇ ಧರಿಸಿ ಕೊಂಡು, ಆ ಕಳ್ಳರ ಗುಂಪಿನಲ್ಲಿ ನರಸಿಂಗನ ಹಾಗೆಯೇ ಇದ್ದುಕೊಂಡು ಸೀತಾರಾಮುವನ್ನು ಸೆರೆ ಹಾಕಿರುವ ಸ್ಥಳವನ್ನು ಕಂಡು ಹಿಡಿದೆನು. ನಿನ್ನೆ ರಾತ್ರಿ ನರಸಿಂಗನ ಹಾಗೆಯೇ ಸೀತಾರಾಮುವಿನ ಹತ್ತಿರಕ್ಕೆ ಹೋಗಿ: ಈ ಪತ್ತೆ ಹಚ್ಚುವ ಕೆಲಸದಲ್ಲಿ ನೀನು ಹೋಗದಿದ್ದರೆ ನಿನ್ನನ್ನು ಬಿಡುಗಡೆ ಮಾಡುವೆವು; ಇಲ್ಲದಿದ್ದರೆ ತುಂಡರಿಸುವೆವು! ಎಂದು ನಾನೇ ಹೇಳಿ ಬಂದಿರುವೆನು. ಸಾಧ್ಯವಾದಷ್ಟು ಜಾಗರೂತೆಯಾಗಿ ಅವನನ್ನು ಅಲ್ಲಿಂದ ಬಿಡಿಸಬೇಕು ಅದಕ್ಕೆ ತಕ್ಕ ಉಪಾಯವೇನು?

ಶಾಮ: ಆ ದುಷ್ಟರು ಗುಪ್ತ ಸ್ಥಳಕ್ಕೆ ರಾತ್ರಿ ಎಷ್ಟು ಹೊತ್ತಿಗೆ ಬರುವರು?

ಭಾಸ್ಕರ: ಅವರು ಸುಮಾರು ಒಂದೆರಡು ಗಂಟೆಯ ಹೊತ್ತಿಗೆ ಬರಬಹುದು.

ಶಾಮ: ಹಾಗಾದರೆ, ಅವರು ಹೋಗುವುದಕ್ಕೆ ಮೊದಲೇ ನೀನು

ನರಸಿಂಗನ ಹಾಗೆ ಹೋಗಿ ಸೀತಾರಾಮುವನ್ನು ಬಿಡುಗಡೆ ಮಾಡಿದರೆ ಆಯಿತು. ಇಷ್ಟು ಕೆಲಸ ಮಾಡಲು ನಿನಗೆ ಗೊತ್ತಾಗಲಿಲ್ಲವೆ?

ಭಾಸ್ಕರ:— ಹಾಗಾದರೆ ನೀವು ಹೇಳುವ ರೀತಿಯಾಗಿಯೇ ಮಾಡುವೆನು. ನಾನು ಈ ದಿನ ರಾತ್ರಿ ಹನ್ನೊಂದು ಗಂಟೆಯ ಹೊತ್ತಿಗೆ ಆ ಮನೆಗೆ ಹೋಗಿ ಸೀತಾರಾಮುವನ್ನು ಬಿಡುಗಡೆ ಮಾಡುವೆನು. ಅನಂತರ ನಿಮ್ಮನ್ನು ಬಂದು ಪುನಃ ನೋಡುವೆನು, ಎಂದು ಹೇಳಿ ಅಲ್ಲಿಂದ ಹೊರಟನು. ಅದೇ ರಾತ್ರಿ ಭಾಸ್ಕರನು ಶಾಮರಾಯರು ಹೇಳಿದ ಹಾಗೆ ನರಸಿಂಗನ ವೇಷವನ್ನು ಹಾಕಿಕೊಂಡು, ಆ ಗುಪ್ತ ಮನೆಗೆ ಹೋಗಿ ಬಾಗಿಲನ್ನು ತಟ್ಟಿದನು.

ಬಾಗಿಲು ತೆರೆಯಲ್ಪಡುತ್ತಲೇ ಅಲ್ಲಿದ್ದ ಜವಾನ ರಾಮುನನ್ನು ಕುರಿತು:—“ರಾಮೂ, ಇತ್ತೀಚೆಗೆ ನಮ್ಮ ಕಡೆಯವರ ವೇಷವನ್ನು ತಾಳಿ ನಮ್ಮನ್ನು ಪತ್ತೆ ಹಚ್ಚುವದಕ್ಕಾಗಿ ಭಾಸ್ಕರ ಮೊದಲಾದವರು ಈ ಮನೆಯನ್ನು ಪ್ರವೇಶಿಸುತ್ತಲೇ ಇರುವರು. ಆದುದರಿಂದ ಈಗ ಯಾರಾದರೂ ಬಂದರೆ, ಮೊದಲು ಅವರು ಬಂದಿರುವುದನ್ನು ನನಗೆ ತಿಳಿಸು. ಅನಂತರ ನಾನೇ ಬಂದು ಬಾಗಿಲನ್ನು ತೆರೆಯುವೆನು. ಬಹಳ ಜಾಗರೂಕನಾಗಿರು” ಎಂದು ಹೇಳಿ, ಅಲ್ಲಿಂದ ಸೀತಾರಾಮುವನ್ನು ಸೆರೆಯಿಟ್ಟಿದ್ದ ಕೊಠಡಿಗೆ ಹೋಗಿ ಬಾಗಿಲನ್ನು ತೆರೆದನು. ನರಸಿಂಗನೇ ಬಂದನೆಂದು ಸೀತಾರಾಮುವು ಸುಮ್ಮನೆ ಕುಳಿತಿದ್ದನು. ಭಾಸ್ಕರನು ಮುಂದುವರಿದು: “ಸೀತಾರಾಮು, ನಿನ್ನ ಬಿಡುಗಡೆಯ ಕಾಲವು ಬಂದಿದೆ. ಬೇಗ ಈ ಬಟ್ಟೆಗಳನ್ನು ಹಾಕಿಕೊಂಡು ಇಲ್ಲಿಂದ ಹೊರಡು” ಎಂದು ಹೇಳುತ್ತಾ, ತಾನು ತಂದಿದ್ದ ಉಸ್ಮಾನನ ಉಡುಪನ್ನು ಅವನಿಗೆ ಕೊಟ್ಟನು. ಸೀತಾರಾಮುವಿಗೆ ಈ ಮಾತು ಕೇಳಿ, ಬಹಳ ಆಶ್ಚರ್ಯವಾಯಿತು. ತನ್ನ ಶತ್ರುಪಕ್ಷದವನೇ ತನ್ನನ್ನು ಈ ರೀತಿಯಾಗಿ ಸೆರೆಯಿಂದ ಬಿಡುಗಡೆ ಮಾಡಲು ಕಾರಣವೇನೆಂದು ಯೋಚಿಸುತ್ತ ಮೇಲಕ್ಕೆ ಏಳದೆಯೇ ಕುಳಿತಿದ್ದನು. ಭಾಸ್ಕರನು ಇವನ ಯೋಚನೆಯ ಕಾರಣವನ್ನು ತಿಳಿದು:—“ಸೀತಾರಾಮು, ನಾನು ಭಾಸ್ಕರನೇ ವಿನಹ ಬೇರೆ ಅಲ್ಲ. ಈಗ ಮಾತ್ರ ನರಸಿಂಗನನ್ನು ಸೆರೆಯ

ಲ್ಲಿಟ್ಟು, ಅವನ ವೇಷದಲ್ಲಿಯೇ ಗುಪ್ತ ವಿಚಾರಗಳನ್ನೆಲ್ಲಾ ತಿಳಿಯುತಲಿದ್ದೇನೆ. ಇನ್ನು ನೀನು ಈ ಉಡುಪನ್ನು ಹಾಕಿಕೊಂಡು ಹೊರಡು" ಎಂದನು. ಸೀತಾರಾಮುವು ಮರು ಮಾತಾಡದೆ, ಆ ದಿರುಸನ್ನೆಲ್ಲಾ ಹಾಕಿಕೊಂಡು, ಕೊಠಡಿಯಿಂದ ಹೊರಕ್ಕೆ ಬಂದನು. ಭಾಸ್ಕರನು ಅವನನ್ನು ಕರೆದುಕೊಂಡು ಮನೆಯ ಹಿಂಭಾಗಕ್ಕೆ ಹೋಗಿ, ಅಲ್ಲಿಂದ ಅವನನ್ನು ಕಳುಹಿಸಿ, ಕೊಠಡಿಯ ಬಾಗಲಿಗೆ ಬೀಗವನ್ನು ಹಾಕಿ, ಪುನಃ ರಾಮುನಿಗೆ ಎಚ್ಚರವಾಗಿರುವಂತೆ ಹೇಳಿ, ಹೊರಟು ಹೋದನು.

ಸೀತಾರಾಮುವು ತನ್ನ ಮಿತ್ರನು ತನ್ನನ್ನು ಸೆರೆಯಿಂದ ಬಿಡುಗಡೆ ಮಾಡಿದುದಕ್ಕಾಗಿ ಬಹಳ ಸಂತೋಷದಿಂದ ತನ್ನ ಮನೆಗೆ ಹೋದನು. ಮನೆಯ ಬಾಗಿಲಿಗೆ ಬೀಗವು ಹಾಕಿತ್ತು. ಅದನ್ನು ನೋಡಿದೊಡನೆಯೇ ಧೈರ್ಯಗುಂದಿದನು. ಮನಸ್ಸಿನಲ್ಲಿ ಅನೇಕ ವಿಧವಾದ ಯೋಚನೆಗಳು ಉತ್ಪನ್ನವಾದವು. ತನ್ನ ಹೆಂಡತಿಯು ತೌರುಮನೆಗೆ ಹೊರಟು ಹೋಗಿರಬೇಕೆಂದು ಮೊದಲು ಯೋಚನೆ ಮಾಡಿದನು; ಆದರೆ ಪುನಃ ಲಲಿತೆಯನ್ನು ಹೊತ್ತುಕೊಂಡು ಹೋಗಿರುವ ದುಷ್ಟರೇ ಇವಳನ್ನು ಹೊತ್ತುಕೊಂಡು ಹೋಗಿರಬೇಕೆಂದು ಯೋಚಿಸುತ್ತಾ, ಏನೂ ತೋಚದೆ ಶಾಮರಾಯರ ಮನೆಯನ್ನು ಕುರಿತು ಹೊರಟನು. ಅವರ ಮನೆಗೆ ಹೋಗಿ ಎಷ್ಟು ಸಲ ಕೂಗಿದರೂ ಬಾಗಿಲನ್ನು ಯಾರೂ ತೆಗೆಯಲೇ ಇಲ್ಲ. ಅಲ್ಲಿಯೂ ನಿರಾಶನಾಗಿ, ಮಾಧವರಾಯರ ಮನೆಯನ್ನು ಕುರಿತು ಹೊರಡುವುದರಲ್ಲಿದ್ದನು. ಅಷ್ಟರಲ್ಲಿ ಭಾಸ್ಕರನು ಅಲ್ಲಿಗೆ ಬರಲು, ಇಬ್ಬರೂ ಮಾಧವರಾಯರ ಮನೆಗೇ ಹೋದರು. ಸೀತಾರಾಮುವು ಬಂದುದನ್ನು ಮಾಧವರಾಯರ ಪತ್ನಿಯು ಬಹಳ ಸಂತೋಷದಿಂದ ಅವನ ಹೆಂಡತಿಯಿದ್ದ ಕೊಠಡಿಗೆ ಹೋಗಿ, ಅರೆನಿದ್ರೆಯಲ್ಲಿದ್ದವಳನ್ನು ಎಬ್ಬಿಸಿ, ಸೀತಾರಾಮುವು ಬಂದಿರುವುದಾಗಿ ತಿಳಿಸಿದಳು. ಸೀತಾರಾಮುವಿನ ಪತ್ನಿಯಾದರೋ ಬಹಳ ಸಂತೋಷದಿಂದ ಕೊಠಡಿಯಿಂದ ಹೊರಕ್ಕೆ ಬಂದು ತನ್ನ ಗಂಡನನ್ನು ನೋಡಿ, ಇತರರು ನಿಂತಿದ್ದನ್ನು ಲಕ್ಷ್ಯಗೊಡದೆಯೇ, ತನ್ನ ಗಂಡನ ಪಾದತಲದಲ್ಲಿ ಬಿದ್ದಳು. ಸೀತಾರಾಮುವಿಗೂ ತನ್ನ ಪತ್ನಿಯ ಸಂದರ್ಶನವಾದುದಕ್ಕೆ

ಪರಮಾನಂದವಾಯಿತು. ಇವರ ಚರ್ಯೆಯನ್ನೆಲ್ಲಾ ನೋಡುತ್ತಿದ್ದ ಭಾಸ್ಕರ ಮತ್ತು ವಿಮಲೆಯುವರು ಅಲ್ಲಿಂದ ಹೊರಟು ಹೋದರು. ಸೀತಾರಾಮುವೂ, ಸುಶೀಲೆಯೂ ತಮ್ಮ ಕಿರುಮನೆಗೆ ಹೋಗಿ, ಬಹಳ ಹೊತ್ತು ಮಾತನಾಡುತ್ತ ಕುಳಿತರು.

ಭಾಸ್ಕರನಾದರೋ ನರಸಿಂಗನ ವೇಷದಲ್ಲಿಯೇ ಕಳ್ಳರ ಗುಂಪನ್ನು ಸೇರಿ, ಅವರೊಡನೆ ಸ್ವಲ್ಪ ಹೊತ್ತು ಇದ್ದು, ಅನಂತರ ಉಸ್ಮಾನನಂತೆ ಲಲಿತೆಯನ್ನು ಸೆರೆ ಹಾಕಿದ್ದ ಸ್ಥಳವನ್ನು ಸೇರಿ ರಾತ್ರಿಯನ್ನೆಲ್ಲಾ ಅಲ್ಲಿಯೇ ಕಳೆದು, ಮಾರನೇ ದಿನ ಊರನ್ನು ಸೇರಿದನು.

ಮನೆಯಲ್ಲಿ ತನ್ನ ಪ್ರಾತರ್ವಿಧಿಗಳನ್ನೆಲ್ಲಾ ಮುಗಿಸಿಕೊಂಡು, ಕೃಷ್ಣನಗರದ ಪೋಲೀಸ ಸೂಪರಿಂಟೆಂಡೆಂಟ್ ರಾಮರಾಯರನ್ನು ಕಾಣುವುದಕ್ಕಾಗಿ, ಸೀತಾರಾಮುವನ್ನು ಕರೆದುಕೊಂಡು ಹೊರಟನು. ಇವರೀರ್ವರೂ ರಾಮರಾಯರ ಮನೆಯನ್ನು ಸೇರಿದಾಗ, ಆಗ ತಾನೆ ರಾಮರಾಯರು ತಮ್ಮ ಹೋಮ್ ಆಫೀಸಿಗೆ ಬಂದು, ಟಪಾಲನ್ನು ನೋಡುತಲಿದ್ದರು ಆಗಂತುಕರೀರ್ವರು ಬಂದಿರುವುದನ್ನು ಜವಾನನು ನೋಡಿ, ರಾಮರಾಯರಿಗೆ ಈ ವರ್ತಮಾನವನ್ನು ತಿಳಿಸಿದನು. ಅನಂತರ ಭಾಸ್ಕರ, ಸೀತಾರಾಮು ಇವರೀರ್ವರೂ ಒಳಕ್ಕೆ ಪ್ರವೇಶಿಸಿ, ರಾಮರಾಯರಿಗೆ ವಂದಿಸಿದರು. ಇಬ್ಬರು ಆಗಂತುಕರನ್ನು ನೋಡಿ, ಯಾರೋ ದೊಡ್ಡ ಮನುಷ್ಯರು ಬಂದರೆಂದು ರಾಮರಾಯರು ತಿಳಿದು, ಇಬ್ಬರಿಗೂ ಹಸ್ತಲಾಘವವನ್ನು ಕೊಟ್ಟು, ಸುಖಾಸನವನ್ನಿತ್ತರು. ಎಲ್ಲರೂ ಕುಳಿತುಕೊಂಡಮೇಲೆ ರಾಮರಾಯರು:—"ಸ್ವಾಮಿ, ತಾವು ಯಾರು? ಇಷ್ಟು ದೂರ ಬರಲು ಕಾರಣವೇನು?" ಎಂದರು.

ಭಾಸ್ಕರ:— ನಾನು ಮಾಧವರಾಯರ ಮನೆಯವನು. ಈತನು ನನ್ನ ಸ್ನೇಹಿತ ಸೀತಾರಾಮು. ನಿಮಗೆ ಮಾಧವರಾಯರ ಮಗಳ ಅಪಹರಣವು ಗೊತ್ತಾಗಿರಬಹುದು?

ರಾಮರಾಯ:—ಗೊತ್ತಾಗಿದೆ. ನಾರಾಯಣರಾಯರು ಈ ಕಾರ್ಯದಲ್ಲಿ ಬಹಳ ಶ್ರಮವನ್ನು ವಹಿಸುತ್ತಲಿರುವ ಹಾಗೆ ಕಾಣುತ್ತದೆ.

ಸೀತಾರಾಮು:—ಅವರೇನು ಶ್ರಮವನ್ನು ವಹಿಸಿದರೂ, ಲಲಿತೆಯು

ನ್ನು ಪತ್ತೆ ಹಚ್ಚುವುದಕ್ಕೆ ಅವರಿಂದಾಗದು.

ರಾಮರಾಯ:— ಅದೇಕೆ? ಮೊನ್ನೆ ತಾನೆ ಅವರು ಬಂದು ಕೆಲಸವು ಆಗಲೇ ಕೊನೆಗೊಳ್ಳುವುದರಲ್ಲಿದೆ, ಎಂದು ಹೇಳಿ ಹೋದರು. ಅದು ಹೋಗಲಿ. ನೀವು ಬಂದ ಕಾರ್ಯವೇನು?

ಭಾಸ್ಕರ:—ಲಲಿತೆಯನ್ನು ಸೆರೆ ಇಟ್ಟಿರುವ ಸ್ಥಳವನ್ನು ನಾವು ಕಂಡು ಹಿಡಿದಿದ್ದೇವೆ. ಈಗ ನೀವು ನಮಗೆ ನಂಬಿಗಸ್ಥರಾದ ಕೆಲವು ಜನ ಪೋಲೀಸಿನವರನ್ನು ಕೊಡಬೇಕು. ಅನಂತರ ನಾವು ಆ ದುಷ್ಟರನ್ನೆಲ್ಲಾ ಸೆರೆ ಹಿಡಿಯುವುದಲ್ಲದೆ, ಲಲಿತೆಯನ್ನು ಬಿಡುಗಡೆ ಮಾಡುವೆವು.

ರಾಮರಾಯ: — ಹಾಗಾದರೆ, ಇನ್‌ಸ್ಪೆಕ್ಟರಿಗೆ ಕಾಗದವನ್ನು ಕೊಡುವೆನು. ಅವರಿಂದ ಸಹಾಯವನ್ನು ಹೊಂದಿರಿ.

ಭಾಸ್ಕರ: ನಮಗೆ ಈ ಊರಿನಲ್ಲಿರುವ ಪೋಲೀಸಿನವರ ಮೇಲೆ ಅಷ್ಟು ನಂಬಿಕೆಯಿಲ್ಲ. ಆದ್ದರಿಂದ ಬೇರೆ ಊರಿನಿಂದ ಪೋಲೀಸಿನವರನ್ನು ಕರೆಯಿಸಿ ನಮ್ಮ ಸಹಾಯಕ್ಕೆ ಕೊಡಬೇಕು. ಈ ಮಾತನ್ನು ಕೇಳುವಾಗ ರಾಮರಾಯರಿಗೆ ಸ್ವಲ್ಪ ಕೋಪ ಬಂದಿತು. ಹುಬ್ಬು ಗಂಟು ಹಾಕಿಕೊಂಡು: "ಅದೇಕೆ? ಈ ಊರಿನ ಪೋಲೀಸಿನವರನ್ನು ನೀವು ಯಾಕೆ ನಂಬುವದಿಲ್ಲ?" ಎಂದರು.

ಭಾಸ್ಕರ: ಸ್ವಾಮಿ, ಸ್ವಲ್ಪ ಸಮಾಧಾನವನ್ನು ತಾಳಿ. ಆ ವಿಚಾರವೆಲ್ಲವೂ ಸ್ವಲ್ಪದರಲ್ಲಿ ಹೊರಬೀಳುವುದು.

ರಾಮರಾಯ: ಹಾಗಾದರೆ, ನಮ್ಮ ಪೋಲೀಸಿನವರೂ ಈ ಕೆಲಸದಲ್ಲಿ ಕೈ ಹಾಕಿರುವರೇ?

ಭಾಸ್ಕರ: ಹಾಗೆಯೇ ಕಾಣುತ್ತದೆ. ಎಲ್ಲವೂ ಪತ್ತೆಯಾದ ಮೇಲೆ ಪೂರ್ತಿಯಾಗಿ ಗೊತ್ತಾಗುವುದು.

ರಾಮರಾಯ: — ಹಾಗಾದರೆ, ನಾನು ಕಲ್ಯಾಣನಗರದಲ್ಲಿರುವ ಇನ್‌ಸ್ಪೆಕ್ಟರನ್ನೂ, ಎಂಟು ಜನ ಪೋಲೀಸಿನವರನ್ನೂ ಕರೆಯಿಸುವೆನು. ಅನಂತರ ಅವರ ಜೊತೆಯಲ್ಲಿ ನಾನೂ ಬರುವೆನು. ನೀವು ನಾಳೆಯ ದಿನ ಪುನಃ ನನ್ನನ್ನು ಬಂದು ನೋಡಿ.

'ಹಾಗೇ ಆಗಲೆ'ಂದು ಸೀತಾರಾಮ-ಭಾಸ್ಕರರಿಬ್ಬರೂ ಹೊರಟರು.

## ಅಧ್ಯಾಯ ೧೪

ರಾತ್ರಿ ಯಥಾವಿಧಿಯಾಗಿ ನರಸಿಂಗನ ವೇಷವನ್ನು ತಾಳಿ, ಭಾಸ್ಕರನು ಗುಪ್ತಮನೆಗೆ ಹೋದನು. ಅವನ ಬರುವಿಕೆಯನ್ನೇ ಕಾಯುತಲಿದ್ದ ಮುಖಂಡ ಗೋಪಾಲರಾಯನು ಅವನನ್ನು ನೋಡಿ:— ನರಸಿಂಗಾ, ನಮ್ಮ ಉಳಿಗಾಲವು ಮುಗಿದ ಹಾಗೆ ಕಾಣುತ್ತದೆ. ಯಾರೋ ಬಂದು ಆ ಸೀತಾರಾಮುವನ್ನು ಬಿಡಿಸಿಕೊಂಡು ಹೋಗಿರುವರು. ಇನ್ನು ನಮ್ಮ ಗುಟ್ಟೆಲ್ಲವೂ ಬಯಲಾಗಿ ಹೋಗುವದೋ ಏನೋ, ಹೇಳುವುದಕ್ಕಾಗುವುದಿಲ್ಲ. ಅಲ್ಲದೆ, ನಾನು ಎರಡು ಮೂರು ಸಾರೆ ಲಲಿತೆಯನ್ನು ಕಾಣುವುದಕ್ಕೆ ಹೋದೆನು. ಅವಳಾದರೋ ನನ್ನನ್ನು ಬಹಳವಾಗಿ ತಿರಸ್ಕರಿಸುತ್ತಲಿರುವಳು. ಅದಕ್ಕಾಗಿಯೇ ನಾನು ಈಗ ಎರಡು ಮೂರು ದಿನಗಳಿಂದ ಅತ್ತಲಾಗಿ ಸುಳಿದಿಲ್ಲ. ನಾವು ಎಷ್ಟು ದಿನ ತಾನೆ ಈ ರೀತಿಯಾಗಿ ಇರುವುದಕ್ಕೆ ಆಗುತ್ತದೆ? ನೀನು ಏನಾದರೂ ಶ್ರಮವನ್ನು ವಹಿಸಿ, ಆ ಇಬ್ಬರನ್ನೂ ಪುನಃ ಸೆರೆ ಹಿಡಿ ನಾನು ನಾಳೆ ರಾತ್ರಿ ಲಲಿತೆಯನ್ನು ನೋಡುವುದಕ್ಕೆ ಹೋಗುವೆನು. ಹೇಗಾದರೂ ಮಾಡಿ ಅವಳನ್ನು ನಮ್ಮವಳನ್ನಾಗಿ ಮಾಡಿಕೊಳ್ಳುವಂತೆ ಪ್ರಯತ್ನಿಸುವೆನು, ಎಂದು ಹೇಳಿದನು.

ನರಸಿಂಗ:—ರಾಯರೇ, ಇಷ್ಟಕ್ಕೇ ತಾವು ಈ ರೀತಿ ಮಾತನಾಡಬೇಕಾದ ಅವಶ್ಯಕವಿಲ್ಲ. ನಾಳೆಯೇ ಆ ಇಬ್ಬರನ್ನೂ ಒಟ್ಟಿಗೆ ಸೆರೆ ಹಿಡಿದು ತಂದು ನಿಲ್ಲಿಸುವೆನು. ಇಬ್ಬರ ರುಂಡಗಳನ್ನೂ ಚಂಡಾಡಿದರಾಯಿತು. ಅಷ್ಟಕ್ಕೇ ಇಷ್ಟು ನಿರಾಶರಾದರೇನು ಮಾಡುವುದು? ಎಂದು ಹೇಳಿ, ಬಹಳ ಹೊತ್ತಿನ ವರೆಗೂ ಅಲ್ಲಿಯೇ ಕುಳಿತಿದ್ದು, ಅನಂತರ ಎದ್ದು ಹೊರ ಹೊರಟನು.

ರಾಮರಾಯರು ಹೇಳಿದ ಪ್ರಕಾರ ಸೀತಾರಾಮು-ಭಾಸ್ಕರರೀರ್ವರೂ ಮರುದಿನ ಬೆಳಿಗ್ಗೆ ಅವರ ಮನೆಗೆ ಹೋದರು. ರಾಮರಾಯ: 'ಈ ದಿನ ರಾತ್ರಿ ಆ ಕಳ್ಳರನ್ನು ಹಿಡಿಯುವುದಕ್ಕಾಗುತ್ತದೆಯೇ?'

ಭಾಸ್ಕರ:— ಆಗುವುದು. ಲಲಿತೆಯನ್ನು ಹೇಗಾದರೂ ಮಾಡಿ, ತಮ್ಮ ಬಲೆಗೆ ಹಾಕಿಕೊಳ್ಳುವುದಕ್ಕೆ ಪ್ರಯತ್ನಿಸಬೇಕೆಂದು ಅವರು ನಿನ್ನೆ ರಾತ್ರಿ ನಿರ್ಧರಿಸಿರುವರು. ಯಜಮಾನನು ಅವಳನ್ನಿಟ್ಟಿರುವ ಗುಪ್ತಸ್ಥಳಕ್ಕೆ ಈ ರಾತ್ರಿ ಹೋಗಬಹುದು. ನೀವು ಅಲ್ಲಿಗೆ ಪೋಲೀಸಿನವರ ಜೊತೆಯಲ್ಲಿ ಬಂದರೆ, ಆ ದುಷ್ಟರನ್ನು ಸೆರೆ ಹಿಡಿಯಬಹುದು. ನಾನೂ, ಇವರೂ ಅಲ್ಲಿಯೇ ನಿಮ್ಮನ್ನು ಸೇರುವೆವು. ಊರಿನಿಂದ ರಾತ್ರಿ ಸುಮಾರು ಎಂಟು ಗಂಟೆಗೆ ವೇಷಾಂತರದಿಂದ ನಿಮ್ಮನ್ನು ಆ ಗುಪ್ತಸ್ಥಳಕ್ಕೆ ಕರೆದೊಯ್ಯುವೆವು. ಅನಂತರ ಉಪಾಯಾಂತರದಿಂದ ಅವರನ್ನು ಸೆರೆ ಹಿಡಿಯೋಣ.

ರಾಮರಾಯ: ಆಗಬಹುದು. ಹಾಗಾದರೆ, ನಾವು ಆ ತೋಪಿನ ಹತ್ತಿರ ಎಂಟು ಗಂಟೆಗೆ ಬರುವೆವು. ಖಂಡಿತವಾಗಿಯೂ ನೀವು ಬನ್ನಿ. ಮುಂದಿನ ಕೆಲಸವನ್ನು ಮಾಡೋಣ.

ಆ ರಾತ್ರಿ ಯಥಾ ವಿಧಿಯಾಗಿ ರಾಮರಾಯರು ತಮ್ಮ ಜೊತೆಯಲ್ಲಿ ಎಂಟು ಜನರನ್ನು ಕರೆದುಕೊಂಡು, ತೋಪಿನ ಹತ್ತಿರ ಸರಿಯಾಗಿ ಎಂಟು ಗಂಟೆಗೆ ಬಂದರು. ಅವರು ಬರುವ ಹೊತ್ತಿಗೆ ಒಬ್ಬ ವ್ಯಕ್ತಿಯು ಅಲ್ಲಿರುವುದನ್ನು ನೋಡಿದರು. ಕಳ್ಳರ ಪೈಕಿಯವನೇ ಇರಬೇಕೆಂದು ಎಲ್ಲರೂ ಸ್ವಲ್ಪ ಸಂಶಯ ತಾಳಿದರು. ಆ ವ್ಯಕ್ತಿಯು ಇವರ ಹತ್ತಿರಕ್ಕೆ ಬಂದಿತು. ರಾಮರಾಯರು ತಮ್ಮ ಹತ್ತಿರಿದ್ದ ಪಿಸ್ತೂಲನ್ನು ತೆಗೆದುಕೊಂಡು ಬಾರು ಮಾಡಿಕೊಂಡು ನಿಂತರು. ಇವರ ಮುಂದೆಯೇ ಆ ವ್ಯಕ್ತಿಯು ಬಂದು ನಿಂತು:—"ಸ್ವಾಮಿ, ನನ್ನನ್ನು ಹಿಂಬಾಲಿಸಿರಿ. ನಾನೇ ಭಾಸ್ಕರ" ಎಂದು ಹೇಳಿತು. ರಾಮರಾಯರು: 'ಹಾಗೆ ಕಾಣುವುದಿಲ್ಲವಲ್ಲ?' ಎನ್ನಲು, ಭಾಸ್ಕರನು: 'ನಾನು ವೇಷಾಂತರದಲ್ಲಿರುವುದರಿಂದ, ನನ್ನನ್ನು ಗುರ್ತಿಸಲು ನಿಮಗಾಗಲಿಲ್ಲ' ಎಂದು ಹೇಳುತ್ತಾ, ಅವರನ್ನು ಕರೆದುಕೊಂಡು ಸ್ವಲ್ಪ ಮುಂದುವರಿದನು.

ಜನರ ಗುಂಪು ಬರುತ್ತಿರುವುದನ್ನು ಕಂಡು, ಗುಡಿಸಿಲಿನಿಂದ ಮತ್ತೊಂದು ವ್ಯಕ್ತಿಯು ಹೊರಕ್ಕೆ ಬಂದಿತು. ಆ ವ್ಯಕ್ತಿಯು,

ಕಾವಲುಗಾರನ ಹಾಗೆ ಕಾಣುತಲಿತ್ತು. ಭಾಸ್ಕರನು ಆ ವ್ಯಕ್ತಿಯನ್ನು ಕುರಿತು: "ಸೀತಾರಾಮು, ನೀನು ಜಾಗರೂಕನಾಗಿರು! ಇವರನ್ನೆಲ್ಲ ಗುಪ್ತ ಸ್ಥಳದಲ್ಲಿ ಬಿಟ್ಟು ಬರುವೆನು" ಎಂದು ಹೇಳಿ, ಅವರನ್ನೆಲ್ಲ ಲಲಿತೆಯನ್ನು ಸೆರೆ ಹಾಕಿದ್ದ ಕೊಠಡಿಯ ಹತ್ತಿರಕ್ಕೆ ಕರೆದುಕೊಂಡು ಹೋಗಿ, ರಾಮರಾಯರನ್ನು ಕುರಿತು: "ಸ್ವಾಮಿ, ಲಲಿತೆಯು ಇದೇ ಕೊಠಡಿಯಲ್ಲಿರುವಳು. ನೀವುಗಳೆಲ್ಲರೂ ಈ ಮರಗಳ ಮೇಲೆ ಹತ್ತಿ ಕುಳಿತುಕೊಳ್ಳಿರಿ. ನಾನು ಮುಖಂಡನೊಡನೆ ಬಂದಾಗ, ನನ್ನ ಹತ್ತಿರಿರುವ ಸಿಳ್ಳೆಯನ್ನು ಊದುವೆನು. ಕೂಡಲೆ ಎಲ್ಲರೂ ಬನ್ನಿ" ಎಂದು ಹೇಳಿದನು. ಅವರೆಲ್ಲರೂ ಮರಗಳನ್ನು ಹತ್ತಿದ ಮೇಲೆ ಭಾಸ್ಕರನು ಅಲ್ಲಿಂದ ಹೊರಟು ಹೋದನು.

ಅಲ್ಲಿಂದ ಹೊರಟ ಭಾಸ್ಕರನು ನರಸಿಂಗನ ವೇಷದಲ್ಲಿಯೇ ಊರಿನೊಳಗಿದ್ದ ಗುಪ್ತ ಮನೆಯನ್ನು ಪ್ರವೇಶಿಸಿದನು. ಆಗ ತಾನೇ ಮುಖಂಡನು ಬಂದು ವಿಶ್ರಮಿಸಿಕೊಳ್ಳುತ್ತ ಕುಳಿತಿದ್ದನು. ಅವನು ನರಸಿಂಗನನ್ನು: — "ನರಸಿಂಗಾ, ಅವರಿಬ್ಬರನ್ನೂ ಸೆರೆ ಹಿಡಿದಿರುವೆಯಾ?" ಎಂದನು.

ಕೃ. ನರಸಿಂಗ: ಹಿಡಿದಿರುವೆನು; ಆದರೆ ಒಬ್ಬನು ಮಾತ್ರ ಸಿಕ್ಕಿರುವನು; ಮತ್ತೊಬ್ಬನು ಸಿಕ್ಕಿಲ್ಲ.

ಗೋಪಾಲ: — ಹಾಗಾದರೆ ಯಾರು ಸಿಕ್ಕಿರುವರು?

ಕೃ. ನರಸಿಂಗ: ಸಿಕ್ಕಿರುವವನು, ಭಾಸ್ಕರ!

ಗೋಪಾಲ: ಅವನನ್ನು ಹೇಗೆ ಹಿಡಿದೆ?

ಕೃ. ನರಸಿಂಗ: ಅವನು ಲಲಿತೆಯನ್ನು ಇಟ್ಟಿರುವ ಗುಪ್ತ ಸ್ಥಳದಲ್ಲಿ ವೇಷಾಂತರದಿಂದ ಓಡಾಡುತಲಿದ್ದನು. ನಾನು ಅವನನ್ನು ಹಿಡಿದು, ಲಲಿತೆಯನ್ನು ಹಾಕಿರುವ ಮಗ್ಗಲು ಕೊಠಡಿಯಲ್ಲಿಯೇ ಹಾಕಿರುವೆನು.

ಗೋಪಾಲ: ಶಹಬಾಶ್! ಇನ್ನೊಬ್ಬನನ್ನು ಹೇಗಾದರೂ ಮಾಡಿ ಹಿಡಿದರೆ ಸಾಕು. ಬಾ, ಇನ್ನು ಲಲಿತೆಯನ್ನು ನೋಡುವುದಕ್ಕೆ ಹೋಗೋಣ, ಎಂದು ಹೇಳಿ ಎದ್ದನು.

ಇಬ್ಬರೂ ಲಲಿತೆಯನ್ನು ಇಟ್ಟಿರುವ ಗುಪ್ತ ಸ್ಥಳದ ಮಾರ್ಗವಾಗಿ ಹೊರಟರು. ಅವರಿಗೆ ಉಸ್ಮಾನನ ವೇಷದಲ್ಲಿದ್ದ ಸೀತಾರಾಮುವು ಸಿಕ್ಕಿ

ದನು. ಗೋಪಾಲರಾಯನು ನಿಜವಾದ ಉಸ್ಮಾನನೆಂದೇ ತಿಳಿದು:— "ಕೆಲಸವನ್ನು ಹೇಗೆ ಮಾಡುತ್ತಿರುವೆ?" ಎಂದು ಕೇಳಿದನು. ಕೃತ್ರಿಮ ಉಸ್ಮಾನನು: 'ಮಹಾರಾಜ, ನನ್ನ ಶಕ್ತಿಮೀರಿ ಕೆಲಸ ಮಾಡುತಲಿದ್ದೇನೆ' ಎಂದು ಹೇಳಿ ಅಲ್ಲಿಯೇ ನಿಂತನು.

ಅಲ್ಲಿಂದ ಈರ್ವರೂ ಲಲಿತೆಯನ್ನು ಹಾಕಿದ್ದ ಕೊಠಡಿಯ ಹತ್ತಿರಕ್ಕೆ ಬಂದರು. ಯಾರೋ ಬಂದ ಸಪ್ಪಳವು ಲಲಿತೆಗೆ, ಅಲ್ಲದೆ ಸೆರೆಯಾಗಿದ್ದ ನಿಜವಾದ ನರಸಿಂಗನಿಗೂ ಕೇಳಿಸಿತು. ನರಸಿಂಗನು ತನ್ನ ಕಡೆಯವರಾರೋ ಬಂದಿರಬೇಕೆಂದು: "ಯಾರು ಬಂದಿರುವಿರಿ? ನನ್ನನ್ನು ಯಾರೋ ದುರಾತ್ಮರು ಸೆರೆ ಹಿಡಿದು ಈ ರೀತಿ ಮಾಡಿರುವರು. ನಾನು ನರಸಿಂಗನು. ಬಾಗಿಲನ್ನು ತೆರೆಯಿರಿ" ಎಂದು ಕೂಗಿಕೊಂಡನು. ಇದನ್ನು ಕೇಳಿ ಯಜಮಾನನು ಕೃತ್ರಿಮ ನರಸಿಂಗನ ಮುಖವನ್ನು ನೋಡಿದನು. ಆವನಾದರೋ: 'ಸ್ವಾಮಿ, ಸೆರೆಯಿಂದ ಬೇಗ ತಪ್ಪಿಸಿಕೊಳ್ಳುವುದಕ್ಕಾಗಿ ಆ ಭಾಸ್ಕರನು ಹಾಗೆ ಕೂಗುತ್ತಲಿರುವನು. ಅವನ ಮಾತಿಗೇಕೆ ಇಷ್ಟು ಬೆರಗಾಗಬೇಕು?" ಎಂದನು. ಲಲಿತೆಯನ್ನು ನೋಡಬೇಕೆಂದು ಹಂಬಲಿಸುತ್ತಿದ್ದ ಗೋಪಾಲರಾಯನು ಅದರ ಮೇಲೆ ಅಷ್ಟು ಗಮನ ಕೊಡಲಿಲ್ಲ. ಕೂಡಲೆ ಲಲಿತೆಯ ಕೊಠಡಿಯ ಬಾಗಿಲನ್ನು ತೆರೆದನು. ಲಲಿತೆಯು ಮಲಗಿದ್ದವಳು ಗಾಬರಿಯಿಂದ ಎದ್ದು ನಿಂತಳು. ಯಜಮಾನನು ಮುಂದುವರಿದು: "ಲಲಿತೇ, ನಿನಗಾಗಿ ನಾನು ಎಷ್ಟು ದಿನಗಳು ಕಾದಿರಬೇಕು? ನಿನ್ನ ಭಾಸ್ಕರನಾದರೋ ಸತ್ತು ಹೋಗಿ, ನಾಲ್ಕಾರು ದಿನಗಳಾದವು. ಇನ್ನಾದರೂ ಅವನ ಹಂಬಲವನ್ನು ಬಿಡು. ನನ್ನನ್ನು ಮದುವೆಯಾಗು" ಎಂದು ಮಾತನಾಡುತ್ತಿರುವಾಗ, "ಮದುವೆಯಾಗು, ಮದುವೆ!" ಎಂದು ಅನ್ನುತ್ತಾ, ಯಾರೋ ಹಿಂದಿನಿಂದ ಒದೆಯಲು, ಗೋಪಾಲನು ದೊಪ್ಪನೆ ನೆಲಕ್ಕೆ ಬಿದ್ದನು. ಕೂಡಲೆ ಭಾಸ್ಕರನು ಸ್ಸಿಳ್ಳೆಯನ್ನು ಊದಿದನು. ನಾಲ್ಕೈದು ಜನ ಪೋಲೀಸರು ಒಮ್ಮಿಂದೊಮ್ಮೆ ಒಳಗೇ ಬಂದು ನಿಂತರು. ಲಲಿತೆಗೆ ಇವರನ್ನೆಲ್ಲ ನೋಡಿ ಒಂದು ಕಡೆ ಹೆದರಿಕೆ! ಮತ್ತೊಂದು ಕಡೆ ಆಶ್ಚರ್ಯ! ಆಗ ಭಾಸ್ಕರನು ಮುಂದುವರಿದು

ಲಲಿತೆಯನ್ನುದ್ದೇಶಿಸಿ: - "ಲಲಿತೇ, ಇಂದು ನಿನ್ನ ಬಿಡುಗಡೆಯಾಯಿತು! ಸುರಕ್ಷಿತವಾಗಿ ಹೊರಗೆ ನಡೆ" ಎಂದು ಹೇಳಿ, ಆಕೆಯನ್ನು ಹೊರಕ್ಕೆ ಕರೆದುಕೊಂಡು ಬಂದು, ತನ್ನ ನಿಜರೂಪವನ್ನು ತೋರಿಸಿದನು. ರಾಮ ರಾಯರ ಆಜ್ಞೆಯ ಪ್ರಕಾರ ಗೋಪಾಲರಾಯನಿಗೆ ತೋಳಗಳನ್ನು ತೊಡಿಸಿ, ಮಗ್ಗುಲು ಕೊಠಡಿಯ ಬಾಗಿಲನ್ನು ತೆರೆದು, ಅಲ್ಲಿದ್ದ ನರಸಿಂಗನಿಗೂ ತೋಳಗಳನ್ನು ತೊಡಿಸಿ ಹೊರಕ್ಕೆ ಕರೆತಂದರು. ಎಲ್ಲರೂ ಕೋಟೆ ಯನ್ನು ಹತ್ತಿ ಅಲ್ಲಿಂದ ಕೆಳಗಿಳಿದರು. ಆ ಸಮಯಕ್ಕೆ ಸರಿಯಾಗಿ ಎರಡು ಮೋಟಾರು ಬಂಡಿಗಳು ಹೊರಗೆ ನಿಂತಿದ್ದವು. ಅವುಗಳೊಂ ದರಲ್ಲಿ 'ಭಾಸ್ಕರ ಮತ್ತು ಲಲಿತೆ'ಯರೀರ್ವರೇ ಕುಳಿತರು. ಮತ್ತೊಂ ದರಲ್ಲಿ ರಾಮರಾಯರೂ, ಸೀತಾರಾಮುವೂ, ಒಬ್ಬ ಪೋಲೀಸಿನವನೂ, ಆ ಇಬ್ಬರು ಕೈದಿಗಳೂ ಕುಳಿತರು. ಭಾಸ್ಕರನ ಗಾಡಿಯು ಅಲ್ಲಿಂದ ಹೊರಟು ಮಾಧವರಾಯರ ಮನೆಯನ್ನು ಬಂದು ಸೇರಿತು. ಮತ್ತೊಂದು ಪೋ- ಲೀಸ ಠಾಣೆಯನ್ನು ಸೇರಿತು. ಮಗಳು ಬರುವುದನ್ನು ಮೊದಲೇ ತಿಳಿ ದಿದ್ದ ಮಾಧವರಾಯರೂ, ವಿಮಲೆಯೂ, ಅಲ್ಲದೆ ಸುಶೀಲೆಯೂ ಬಹಳ ಕುತೂಹಲದಿಂದ, ಲಲಿತೆಯ ಬರುವಿಕೆಯನ್ನೇ ಎದುರು ನೋಡುತ್ತ ಕುಳಿ ತಿದ್ದರು. ಗಾಡಿಯು ಬಾಗಿಲಲ್ಲಿ ಬಂದು ನಿಂತೊಡನೆಯೇ ಎಲ್ಲರೂ ಜಾಗ್ರತೆಯಾಗಿ ಬಂದು, ಗಾಡಿಯನ್ನು ಮುತ್ತಿಕೊಂಡರು. ವಿಮಲೆಯಾ ದರೋ ತನ್ನ ಮಗಳನ್ನು ಅಪ್ಪಿಕೊಂಡು, ಅವಳು ಬಹಳ ಬಡವಾಗಿರುವು ದನ್ನು ನೋಡಿ: —"ಲಲಿತಾ, ಎಷ್ಟು ಬಡವಾಗಿರುತ್ತೀಯಮ್ಮಾ! ದುರಾ ತ್ಮರು ಏನು ಕೆಲಸ ಮಾಡಿದರು!" ಎಂದು ಹೇಳುತ್ತ, ಕಣ್ಣಿನಲ್ಲಿ ನೀರು ಸುರಿಸುತ್ತ ಮಗಳನ್ನು ಕರೆದುಕೊಂಡು ಹೋಗಿ ಉಪಚರಿಸಹತ್ತಿದಳು.

ಭಾಸ್ಕರನಿಗಾದರೊ ಕಳ್ಳರ ಗುಪ್ತಮನೆಗೆ ಹೋಗಿ ಅಲ್ಲಿದ್ದ ರಾಮು, ಅಮೀರರನ್ನು ಸೆರೆ ಹಿಡಿದು, ಠಾಣೆಯಲ್ಲಿ ತಂದು ಹಾಕಿದ ಹೊರತು, ನೆಮ್ಮದಿಯಾಗದಿರಲು, ಅವರನ್ನು ಹಿಡಿದು ತಂದು, ಹಾಗೆಯೇ ಉಸ್ಮಾನ ನನ್ನೂ ಕರೆತಂದು ಪೋಲೀಸ ಠಾಣೆಯಲ್ಲಿ ಬಿಟ್ಟು, ಅನಂತರ ತನ್ನ ಮನೆ ಯನ್ನು ಸೇರಿದನು.

## ಅಧ್ಯಾಯ ೧೫

ಈ ದಿನ ಮಾಧವರಾಯರು, ಭಾಸ್ಕರ, ಸೀತಾರಾಮು, ವಿಮಲೆ, ಲಲಿತೆ ಇವರುಗಳೆಲ್ಲರೂ ಒಂದು ವಾಹನದಲ್ಲಿ ಕುಳಿತು ಹನ್ನೊಂದು ಗಂಟೆಯ ಹೊತ್ತಿಗೆ ಸರಿಯಾಗಿ ನ್ಯಾಯಾಸ್ಥಾನದ ಹತ್ತಿರಕ್ಕೆ ಬಂದರು. ಹೆಂಗಸರೆಲ್ಲರೂ ಹೋಗಿ ಬೇರೆ ಕೊಠಡಿಯಲ್ಲಿ ಕುಳಿತರು. ಲಲಿತೆಯನ್ನು ಅಪಹರಣ ಮಾಡಿದವರ ವಿಚಾರಣೆಯಾಗುವದೆಂದು ತಿಳಿದು ಜನರೆಲ್ಲರೂ, ನ್ಯಾಯಾಸ್ಥಾನದಲ್ಲಿ ಕಿಕ್ಕಿರಿದಿದ್ದರು. ಅವರು ಅಲ್ಲಿಯೇ ಕುಳಿತು ಈ ವಿಚಾರದಲ್ಲಿ ತರ್ಕ-ವಿತರ್ಕಗಳನ್ನು ಮಾಡುತ್ತಲಿದ್ದರು. ಹನ್ನೊಂದು ಬಡಿದ ಸ್ವಲ್ಪ ಹೊತ್ತಿನಲ್ಲಿಯೇ ಒಂದು ಮೋಟಾರ್ ಬಂಡಿಯು ನ್ಯಾಯಾಸ್ಥಾನದ ಮುಂದೆ ಬಂದು ನಿಂತಿತು. ಅದರಿಂದ ಇಬ್ಬರು ಭವ್ಯಾಕಾರದ ಮನುಷ್ಯರು ಇಳಿದರು. ಅವರಲ್ಲಿ ಓರ್ವರು ನಮ್ಮ ಪೂರ್ವ ಪರಿಚಿತರಾದ ಪೋಲೀಸ್ ಸುಪರಿಂಟೆಂಡೆಂಟ್ ರಾಮರಾಯರು ಮತ್ತೊಬ್ಬರು ನ್ಯಾಯಾಧಿಪತಿಗಳು. ಇಬ್ಬರೂ ಒಳಕ್ಕೆ ಪ್ರವೇಶಿಸಿ ಸ್ವಲ್ಪ ವಿಶ್ರಮಿಸಿಕೊಂಡ ಮೇಲೆ ಅಪರಾಧಿಗಳ ವಿಚಾರಣೆಗಾಗಿ ಅವರನ್ನು ಕರೆಸಿದರು. ಮೊದಲು ಅವರ ಮುಖಂಡ ಗೋಪಾಲರಾಯನ ವಿಚಾರಣೆಗೆ ಪ್ರಾರಂಭವಾಯಿತು.

ನ್ಯಾಯಾಧಿಪತಿ:—ಅಯ್ಯಾ, ಮಾಧವರಾಯರ ಮಗಳಾದ ಲಲಿತೆಯನ್ನು ನೀನು ಅಪಹರಿಸಿದುದು ನಿಜವೇ? ಯಾತಕ್ಕಾಗಿ ಅಪಹರಿಸಿದೆ? ನಿನ್ನ ಸಹಾಯಕ್ಕೆ ಯಾರಿದ್ದರು?

ಗೋಪಾಲರಾಯ: ಸ್ವಾಮಿ, ತಾವು ನಿದಾನವಾಗಿ ಕೇಳುವುದಾದರೆ, ಹೇಳುವೆನು. ಈ ರೀತಿಯಾಗಿ ಒಂದೇ ಸಲ ಇಷ್ಟೊಂದು ಪ್ರಶ್ನೆಗಳನ್ನು ಕೇಳಿದರೆ, ನಾನು ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ.

ನ್ಯಾಯಾಧೀಶರಿಗೆ ಈ ಮಾತುಗಳನ್ನು ಕೇಳಿ ಬಹಳ ಕೋಪ ಬಂದಿತು; ಆದರೂ ಅವನನ್ನು ಕುರಿತು:—"ಹೇಳು, ನಡೆದ ವಿಚಾರಗಳನ್ನೆಲ್ಲಾ, ಸುಳ್ಳಿಲ್ಲದೆ ಹೇಳು" ಎಂದರು.

ಗೋಪಾಲರಾಯ: ಸುಳ್ಳು ಹೇಳಿದ ಮಾತ್ರಕ್ಕೆ ನನಗೆ ಆಗಬೇಕಾದ ಶಿಕ್ಷೆಯು ತಪ್ಪುವದಿಲ್ಲ. ಇದ್ದ ಸಂಗತಿಯನ್ನೆಲ್ಲಾ ತಿಳಿಸುವೆನು. ಸಾವಧಾನದಿಂದ ನೀವು ಅಲ್ಲದೆ, ಇಲ್ಲಿ ನೆರೆದಿರುವವರೆಲ್ಲರೂ ಕೇಳಿ. ನಾನು ಈ ಊರಿನವನೇ. ಮಾಧವರಾಯನಿಗೂ, ನನಗೂ ಹತ್ತಿರದ ಸಂಬಂಧ; ಆದರೆ ಈಗಿನ ನನ್ನ ಅವತಾರದಿಂದ ಗೊತ್ತಾಗುವದಿಲ್ಲ. ನಾನು ಮಾಧವರಾಯರ ಮಗಳನ್ನು ಅವಳ ಬಾಲ್ಯ ವಯಸ್ಸಿನಿಂದಲೂ ಪ್ರೀತಿಸುತಲಿದ್ದೆನು. ಅವಳಿಗೆ ಪ್ರೌಢ ವಯಸ್ಸಾದೊಡನೆ ನಾನು ನಮ್ಮ ತಾಯಿಯಲ್ಲಿ ಅವಳನ್ನು ಮದುವೆಯಾಗುವ ವಿಚಾರದಲ್ಲಿ ಪ್ರಸ್ತಾಪಿಸಿದೆ. ಆಗ ನನ್ನ ತಾಯಿಯು:- "ಮಗೂ, ಅವಳನ್ನು ನಿನಗೇನೇ ಕೊಟ್ಟು ಮದುವೆ ಮಾಡಬೇಕೆಂದು ಮಾಧವನ ಅಭಿಪ್ರಾಯ; ಆದರೆ ಅವನ ಹೆಂಡತಿಗೆ ಮಾತ್ರ ಅದು ಇಷ್ಟವಿಲ್ಲ. ಅವಳನ್ನು ತನ್ನ ಅಣ್ಣನ ಮಗನಿಗೆ ಕೊಟ್ಟು ವಿವಾಹವನ್ನು ಮಾಡಬೇಕೆಂದು ಹಟ ಹಿಡಿದಿರುವಳು; ಆದುದರಿಂದ ಭಾಸ್ಕರನಿಗೇ ಕೊಡಬಹುದು; ಆದರೆ ನಾನು ಹೋಗಿ ಮಾಧವನ ಮನಸ್ಸು ಬದಲಾಯಿಸುವ ಹಾಗೆ ಮಾಡುವೆನು;" ಎಂದು ಹೇಳಿ, ಆಕೆಯು ಹೋಗಿ ಮಾಧವರಾಯನೊಡನೆ ಪ್ರಸ್ತಾಪಿಸಲು 'ತನ್ನ ಹೆಂಡತಿ ಒಪ್ಪುವದಿಲ್ಲ. ನಾನೇನೂ ಮಾಡುವದಕ್ಕಾಗುವದಿಲ್ಲ' ಎಂದನು. ಈ ವಿಚಾರವು ನನಗೆ ತಿಳಿದ ಮೇಲೆ ಬಹಳ ವಿಷಾದವಾಯಿತು. ಅದರ ಜೊತೆಗೆ ಆ ಹುಡಿಗಿಯನ್ನೇ ಮದುವೆ ಮಾಡಿಕೊಳ್ಳಬೇಕೆಂಬ ಹಟವೂ ಉತ್ಪನ್ನವಾಯಿತು.

ನಾನು ಈ ಯೋಚನೆಯಲ್ಲಿರುವಾಗಲೇ ಅವಳ ಮದುವೆಯ ದಿನವು ಬಂದಿತು. ಮದುವೆಯಾಗುವ ಹಿಂದಿನ ದಿನ ರಾತ್ರಿ ಮಾಧವರಾಯರ ಮನೆಯಲ್ಲಿ ದೊಡ್ಡ ಸಂಗೀತ ಕಚೇರಿಯಾಯಿತು. ಅದಕ್ಕೆ ನಾನು ಹೋಗಿದ್ದೆನು ಆ ದಿನ ರಾತ್ರಿಯೇ ಹೇಗಾದರೂ ಲಲಿತೆಯನ್ನು ಅಪಹರಣ ಮಾಡಬೇಕೆಂದು ಯೋಚಿಸಿ, ನರಸಿಂಗ, ಅಮೀರ್, ರಾಮು, ಉಸ್ಮಾನ್ ಎಂಬುವವರಿಗೆ ಆ 'ಹುಡಿಗಿಯನ್ನು ಅಪಹರಿಸಿಕೊಂಡು ಹೋಗುವ ಹಾಗೆ ಹೇಳಿ, ಅವರಿಗೆ ಬೇಕಾದಷ್ಟು ಹಣವನ್ನು ಕೊಟ್ಟೆನು. ಅವರು ಹುಡಿಗೆಯನ್ನು ಹೊತ್ತುಕೊಂಡು ಹೋದಾಗ ನಾನು ಮಾತ್ರ ಆ ಮನೆ

ಯಲ್ಲಿಯೇ ಇದ್ದೆನು; ಆದರಿಂದ ನನ್ನ ಮೇಲೆ ಯಾರೂ ಅನುಮಾನ ಪಡಲಿಲ್ಲ. ಬಳಿಕ ನಾನು ನಡುರಾತ್ರಿಯಲ್ಲಿ ಹೋಗಿ ಅವರನ್ನು ಸೇರಿದೆನು.

ಮಾರನೇ ದಿನ ರಾತ್ರಿ ಮಾಧವರಾಯರು ಪೋಲೀಸ ಕಚೇರಿಗೆ ಹೋಗಿ ಈ ವಿಚಾರವನ್ನೆಲ್ಲಾ ತಿಳಿಸಿದರು. ನಾನು ಆ ಸಮಯಕ್ಕೆ ಹೋಗಿ ಪೋಲೀಸ ಇನ್‌ಸ್ಪೆಕ್ಟರನ್ನು ನನ್ನವರನ್ನಾಗಿ ಮಾಡಿಕೊಂಡು, ನಾನೇ ಪತ್ತೆ ಹಚ್ಚುವೆನೆಂದು ಹೇಳಿ, ನಾನು "ಬಹಳ ಶ್ರಮದಿಂದ ಪತ್ತೆ ಹಚ್ಚುವ ಕೆಲಸವನ್ನು ಮಾಡುತ್ತಿರುವೆನೆಂದು ಎಲ್ಲರೂ ತಿಳಿದುಕೊಳ್ಳ ಲೆಂದು ನನ್ನ ಸಹಾಯಕ್ಕೆ ಲಲಿತೆಯನ್ನು ಅಪಹರಣ ಮಾಡಿದ ಪೋಲೀಸಿ ನವರನ್ನು ಜೊತೆಯಲ್ಲಿ ಕರೆದುಕೊಂಡು, ಊರಲ್ಲೆಲ್ಲಾ ಸುತ್ತುತ್ತ ಲಿದ್ದೆ. ರಾತ್ರಿ ಕಾಲದಲ್ಲಿ ಮಾತ್ರ ಬೇರೆ ಗುಪ್ತ ಮನೆಯಲ್ಲಿ ಸೇರಿ, ಮುಂದಿನ ಕೆಲಸಗಳಿಗೆಲ್ಲ ಆಲೋಚನೆ ಮಾಡುತಲಿದ್ದೆವು. ನಾನು ೩-೪ ಸಲ ಲಲಿತೆಯನ್ನು ಸೆರೆ ಇಟ್ಟಿದ್ದ ಸ್ಥಳಕ್ಕೆ ಹೋಗಿ, ನನ್ನವಳಾಗೆಂದು ಅವ ಳನ್ನು ಬಹಳ ಒತ್ತಾಯ ಮಾಡಿ ನಿರಾಶನಾದೆನು. ಈ ನಡುವೆ ಭಾಸ್ಕ ರನು, ಸೀತಾರಾಮುವೆಂಬುವವನ ಜೊತೆಯಲ್ಲಿ ಪತ್ತೆ ಹಚ್ಚುವ ಕೆಲಸದಲ್ಲಿ ಕೈಹಾಕಿರುವುದಾಗಿ ಗೊತ್ತಾಯಿತು. ಇವರನ್ನು ಹೇಗಾದರೂ ನಿರ್ಮೂಲ ಮಾಡಬೇಕೆಂದು ಬಹಳವಾಗಿ ಪ್ರಯತ್ನಿಸಿದೆ; ಆದರೂ ಅವರುಗಳು ನಮ್ಮ ಗುಪ್ತ ಸ್ಥಳಗಳಲ್ಲಿ ನಮ್ಮ ಜನರಂತೆಯೇ ನಟಿಸಿ, ಎಲ್ಲವನ್ನೂ ಕಂಡು ಹಿಡಿದಿರುವರು. ನಾನು ಮಾಡಿದ ತಪ್ಪಿಗೆ ಈಗ ತಕ್ಕ ಶಿಕ್ಷೆಯಾಗಲೇ ಬೇಕು. ನಾನು ಬೇರೆ ಅಲ್ಲ; ಮಾಧವರಾಯರ ಅಕ್ಕನ ಮಗನಾದ ನಾರಾ ಯಣರಾಯನೇ ನಾನು ಎಂದು ಹೇಳುತ್ತಾ, ತನ್ನ ಹತ್ತಿರಿದ್ದ ಯಾವುದೋ ಒಂದು ಗುಳಿಗೆಯನ್ನು ತನ್ನ ಬಾಯಿಗೆ ಹಾಕಿಕೊಂಡನು. ಮಾಧವ ರಾಯರಾದರೋ ತನ್ನ ಹತ್ತಿರ ಬಂಧುವೇ ಈ ರೀತಿ ಮಾಡಿದ್ದಕ್ಕಾಗಿ ಬಹಳ ವಿಷಾದ ಪಡುತ್ತಾ, ತಲೆಯನ್ನು ಸಹ ಎತ್ತದೆ ಕುಳಿತರು. ರಾಮ ರಾಯರಿಗಾದರೋ ತಮ್ಮ ಇಲಾಖೆಯವರೂ ಈ ಕೆಲಸದಲ್ಲಿ ತೊಡ ಗಿದ್ದುದಕ್ಕಾಗಿ ಬಹಳವಾಗಿ ದುಃಖವಾಗುತಲಿತ್ತು. ಈ ನಡುವೆ ನರ ಸಿಂಗ, ರಾಮು, ಉಸ್ಮಾನ್, ಅಮೀರ್ ಇವರುಗಳ ವಿಚಾರಣೆಯೂ

ಆಯಿತು. ಇವರ ವಿಚಾರಣೆಯಾಗುತ್ತಿರುವಾಗಲೇ ನಾರಾಯಣನು ಇದ್ದಕ್ಕಿದ್ದ ಹಾಗೆಯೇ ದೊಪ್ಪನೆ ನೆಲದ ಮೇಲೆ ಬಿದ್ದನು. ಮಗ್ಗುಲಲ್ಲಿ ನಿಂತಿದ್ದವರು ಅವನನ್ನು ಹಿಡಿದುಕೊಂಡರು. ಆಗ ನಾರಾಯಣನು: "ನನ್ನನ್ನು ಯಾಕೆ ಹಿಡಿದುಕೊಳ್ಳುವಿರಿ? ನನ್ನ ಆಯುಷ್ಯವು ಮುಗಿಯುತ್ತಲೇ ಬಂತು" ಎಂದು ಹೇಳುತ್ತ ನೆಲದಲ್ಲಿ ಒದ್ದಾಡುವುದಕ್ಕಾರಂಭಿಸಿದನು. ಅವನನ್ನು ಹೊರಕ್ಕೆ ಕರೆದುಕೊಂಡು ಹೋಗಿ, ಗಾಳಿಯಲ್ಲಿ ಮಲಗಿಸಿದರು; ಆದರೂ ಪ್ರಯೋಜನವಾಗಲಿಲ್ಲ. ಸ್ವಲ್ಪ ಹೊತ್ತಿನಲ್ಲಿಯೇ ಆತನು ಪರಲೋಕಕ್ಕೆ ತೆರಳಿದನು.

† † † † † †

ಮಿಕ್ಕ ಎಲ್ಲ ಅಪರಾಧಿಗಳ ವಿಚಾರಣೆಯಾದ ಮೇಲೆ ಅವರವರ ಯೋಗ್ಯತಾನುಸಾರವಾಗಿ ಶಿಕ್ಷೆಯಾಯಿತು. ಪೋಲೀಸ ಇನ್‌ಸ್ಪೆಕ್ಟರಾದರೋ ತಮ್ಮ ಕೆಲಸವನ್ನು ಕಳೆದುಕೊಂಡು, ತಾವು ಮಾಡಿದ ಕಾರ್ಯಕ್ಕೆ ತಾವೇ ದುಃಖಪಡಲಾರಂಭಿಸಿದರು.

∴ ∴ ∴ ∴ ∴

ಸ್ವಲ್ಪ ದಿವಸಗಳಲ್ಲಿಯೇ ಲಲಿತೆಯನ್ನು ಭಾಸ್ಕರನಿಗೆ ಕೊಟ್ಟು, ಮದುವೆಯು ಬಹಳ ವಿಜೃಂಭಣೆಯಿಂದ ನಡೆಯಿತು. ಆಗಲೇ ಅವನು ಪೋಲೀಸ ಇನ್‌ಸ್ಪೆಕ್ಟರರ ಸ್ಥಾನಕ್ಕೆ ಬಂದನು. ಇವನ ಸಹಾಯಕ್ಕಾಗಿ ಸೀತಾರಾಮುವನ್ನು ಡಿಟೆಕ್ಟಿವ್ ಇನ್‌ಸ್ಪೆಕ್ಟರರಾಗಿ ನೇಮಕ ಮಾಡಿದರು. ಅಂದಿನಿಂದ ಭಾಸ್ಕರನು ತನ್ನ ಪತ್ನಿಯೊಡಗೂಡಿ, ಸುಖದಿಂದ ಕಾಲವನ್ನು ಕಳೆಯುತ್ತ, ಸೀತಾರಾಮುವಿನೊಡನೆ ಪತ್ತೆದಾರಿಯ ಕೆಲಸದಲ್ಲಿ ಬಹು ಪ್ರಖ್ಯಾತನಾದನು.

ಸಂಪೂರ್ಣಂ.

